ಶ್ರೀ ಚಂದ್ರಕಾಂತ ಜಿ. ಬಿಲ್ಲದ : ಅಲ್ಲಿನ ಜನರು ಇದರ ಬಗ್ಗೆ ಸಿ.ಓ.ಡಿ ಯಿಂದ ತನಿಖೆ ಮಾಡಿಸಬೇಕೆಂದು ಮಾನ್ಯ ಗೃಹಮಂತ್ರಿಗಳಿಗೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಮಾಡಿಕೊಂಡಿರುವುದರಿಂದ ಇದನ್ನು ಸಿ.ಓ.ಡಿ ಯಿಂದ ತನಿಖೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಗೃಹ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇದು ಚುನಾವಣೆಗೆ ಸಂಬಂಧಪಟ್ಟದ್ದುದೇ ಅಥವಾ ಅಲ್ಲ ಎಂದು ಯಾವುದನ್ನೂ ನಾವು ಮುಂಚಿತವಾಗಿಯೇ ಹೇಳುವುದಕ್ಕೆ ತಯಾರಿಲ್ಲ, ಆದರೂ ಸ್ಪಷ್ಟವಾದ ವಿಚಾರ ಗೊತ್ತಾಗಬೇಕಾದರೆ ಇದನ್ನು ಸಿ.ಓ.ಡಿ.ಗೆ ವಹಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾನಿರ್ಣಯಕ್ಕೆ ಮುಖ್ಯಮಂತ್ರಿಗಳಿಂದ ಉತ್ತರ

+ ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಪರ ಮತ್ತು ವಿರೋಧವನ್ನು ಸೂಚಿಸಿ ಸುಮಾರು 24 ಜನ ಮಾನ್ಯ ಸದಸ್ಯರು ಹಲವರು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಸರ್ಕಾರದ ವೈಫಲ್ಯತೆಯನ್ನು ಬಗ್ಗೆ ಕಳೆದ 15-20 ದಿನಗಳಲ್ಲಿ ಈ ಸರ್ಕಾರ ಎಲ್ಲಿ ಎಡವಿದೆ ಎಂಬ ಬಗ್ಗೆ ಮತ್ತು ಸರ್ಕಾರಕ್ಕೆ ಒಳ್ಳೆಯ ಮಾರ್ಗದರ್ಶನವನ್ನು ಮಾಡುವ ಹಿನ್ನೆಲೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ದಿಸೆಯಲ್ಲಿ ಸರ್ಕಾರ ಕಳೆದ 15-20 ದಿನದಲ್ಲಿ ದಾರಿ ತಪ್ಪಿ ನಡೆದಿದೆ ಎಂದು ಅವರು ಕೊಟ್ಟಿರತಕ್ಕ ಎಲ್ಲಾ ಸಲಹೆಗಳನ್ನೂ ನಾನು ಸ್ವಾಗತ ಮಾಡುತ್ತೇನೆ.

(ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠಕ್ಕೆ ಬಂದರು)

ಶ್ರೀ ಹೆಚ್.ಡಿ. ದೇವೇಗೌಡ : ಕಳೆದ 20 ದಿನದಲ್ಲಿ ಈ ಸರ್ಕಾರ ಎಲ್ಲಾದರೂ ಎಡವಿದ್ದರೆ ಅವರು ಮಾಡಿರುವ ಟೀಕೆಯನ್ನು ಸ್ವಾಗತಿಸುವ ಉದ್ದೇಶ ಏನೆಂದರೆ, ಮುಂದೆ ನಾವು ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ಸರ್ಕಾರದ ನೀತಿ ಏನೆಂದು ಕೇಳಿದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ 20 ದಿನದಲ್ಲಿ ಸರ್ಕಾರದ ನೀತಿ ಏನೆಂಬುದನ್ನು ಸ್ಪಷ್ಟವಾಗಿ ಸಮಗ್ರವಾಗಿ ಜನತೆಯ ಮುಂದೆ ಇಡುವುದಕ್ಕೆ ಸಾಧ್ಯವಿಲ್ಲ, 1995-96ನೇ ಸಾಲಿನಲ್ಲಿ ಮತ್ತೆ ಈ ಸದನ ಸಮಾವೇಶಗೊಳ್ಳುತ್ತದೆ. ಅವತ್ತು ಈ ಸರ್ಕಾರ ತನ್ನ ಆಮೂಲಾಗ್ರ ನೀತಿಯನ್ನು ತಿಳಿಸುತ್ತದೆ. ಆದರೆ ಮಾನ್ಯ ರಾಜ್ಯಪಾಲರು ಭಾಷಣ ಮಾಡತಕ್ಕದ್ದು ಮೊದಲನೇ ಜಂಟಿ ಅಧಿವೇಶದನಲ್ಲಿ ಮಾಡಬಹುದು, ಇಲ್ಲವೇ ಜನವರಿ ತಿಂಗಳಲ್ಲಿ ಬೇಕಾದರೂ ಮಾಡಬಹುದು. 1994-95ರ ಸಾಲಿನಲ್ಲಿ ಮಾನ್ಯ ರಾಜ್ಯಪಾಲರು ಏನು ಭಾಷಣ ಮಾಡಿದ್ದಾರೆ ಅದು ಇನ್ನೂ 3 ತಿಂಗಳ ಕಾಲ ಸ್ವಲ್ಪಮಟ್ಟಿಗೆ ಜೀವಂತವಾಗಿದೆ. ಆದರೆ ಇವತ್ತು ಈ ಸದನ ಸೇರಿರುವುದು ಹೊಸದಾಗಿ ಚುನಾವಣೆ ಆದ ಪ್ರಯುಕ್ತ ನಮ್ಮ ರಾಜ್ಯಾಂಗದ ಚೌಕಟ್ಟಿನಲ್ಲಿ ನೂತನವಾಗಿ ಆಯ್ಕೆಯಾಗಿರತಕ್ಕ ಎಲ್ಲಾ ಸದಸ್ಯರುಗಳ ಪ್ರಮಾಣವಚನವನ್ನು ಸ್ವೀಕಾರ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಸದನ ಸೇರಿದೆ. ಮಾನ್ಯ ರಾಜ್ಯಪಾಲರು ಎರಡೂ ಸದನಗಳ ಸದಸ್ಯರನ್ನುದ್ದೇಶಿಸಿ ಮಾತನಾಡಿದ್ದಾರೆ.

ಅಂದ ಮಾತ್ರಕ್ಕೆ ಈ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ನೀತಿಗೆ ಸಂಬಂಧಪಟ್ಟಂತೆ ಏನೂ ಹೇಳಿಲ್ಲ ಅಂದರೆ, ಇದು ನಿದ್ದೆಯಲ್ಲಿ ಮಲಗಿರುವವರನ್ನು ನಾವು ಎಚ್ಚರ ಮಾಡಬಹುದು, ಆದರೆ ಮಲಗಿದ್ದ ಹಾಗೆ ನಟನೆ ಮಾಡುವವರನ್ನು ಎಚ್ಚರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಏನು ಜನತೆಯ ಮುಂದೆ ಮಂಡನೆ ಮಾಡಿದ್ದೆವು. ಮುಂದಿನ ದಿನಗಳಲ್ಲಿ ರಾಜ್ಯದ ಮಹಾಜನತೆ ನಮಗೆ ಅಧಿಕಾರ ವಹಿಸಿಕೊಟ್ಟರೆ ಏನು ಕಾರ್ಯಕ್ರಮಗಳನ್ನು ಮಾಡುತ್ತೇವೆ ಎಂದು ನಾವು ಹೇಳಿದ್ದೆವು ಅದರಲ್ಲಿ ಕೆಲವು ಕಾರ್ಯಕ್ರಮಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಇವತ್ತು ನಾವು ಸರ್ಕಾರದ ನಿಲುವೇನು ಎಂಬುದನ್ನು ತಿಳಿಸಿದ್ದೇವೆ. ಸ್ವಾಮಿ, ಒಂದೇ ಒಂದು. ನಾನು ಬಹಳ ದೂರ ಎಳೆಯುವುದಕ್ಕೆ ಹೋಗುವುದಿಲ್ಲ. ಈ ಸರ್ಕಾರ ಮೇಲೆ ಕಂಡಂಥ ತಪ್ಪು, ಡಿಸೆಂಬರ್ 11ನೇ ತಾರೀಖು ನಡೆದ ಘಟನೆ ಬಗ್ಗೆ ಹೆಚ್ಚು ವ್ಯಾಪಕವಾಗಿ ಚರ್ಚೆಯಾಗಿದೆ. ಒಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಮೊದಲೇ ಯಾರ ಪರವಾಗಿಯೂ ಮಾತನಾಡುವುದಕ್ಕೆ ತಯಾರಿಲ್ಲ. ಈ ರಾಷ್ಟ್ರದ ಪ್ರಧಾನಮಂತ್ರಿ ಹೆಸರನ್ನು ಈ ಸದನದಲ್ಲಿ ಎಳೆದಾಗ ಮತ್ತೊಂದು ರಾಜ್ಯದ ಮುಖ್ಯಮಂತ್ರಿ ಹೆಸರನ್ನು ಈ ಸದನದಲ್ಲಿ ಎಳೆದಾಗ ಅವರ ಹೆಸರನ್ನು ಹೇಳಕೂಡದು, ಅದು ಸಭಾನಿಯಮಕ್ಕೆ ವಿರುದ್ಧವಾದ ವಿಷಯ ಎಂದು ಹೇಳಿದರು.

ಆದರೆ ನಮ್ಮ ಪಕ್ಷದ ಪ್ರಮುಖರ ವಿಷಯದ ಬಗ್ಗೆ ಇಲ್ಲಿ ಚರ್ಚೆ ಮಾಡಿದ್ದಾರೆ. ಅದು ತಮಗೆ ಬಿಟ್ಟ ವಿಷಯ. ಆದರೆ ಆ ಚರ್ಚೆಯಲ್ಲಿ ಮತ್ತೊಬ್ಬರ ಹೆಸರನ್ನು ಎಳೆಯುವ ಸನ್ನಿವೇಶ ಬಂದಿದೆ. ಅದು ರಾಜಕಾರಣಕ್ಕೆ ಎಳೆದಿದ್ದರೆ ಅದರ ಲಾಭ ಯಾರಾದರೂ ತೆಗೆದುಕೊಳ್ಳಲಿ, ನನಗೆ ಬೇಸರ ಇಲ್ಲ. ಆದರೆ ಸಭಾನಿಯಮಾವಳಿಯಲ್ಲಿ ಅದು ಆಗಬಾರದಾಗಿತ್ತು, ಈ ಕಾರ್ಯಕಲಾಪದಲ್ಲಿ ಎಂದು ಸೂಕ್ಷ್ಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರಾಷ್ಟ್ರದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ವಿದ್ಯಮಾನವನ್ನು ಚರ್ಚೆ ಮಾಡಬಹುದು. ಅದೇನೂ ಹೊಸದಲ್ಲ ನನಗೆ. ನಿಮಗೂ ಹೊಸದಲ್ಲ. ಪ್ರತಿಯೊಂದು ರಾಜಕೀಯ ಪಕ್ಷದಲ್ಲಿ ಯಾವ ಯಾವ ಸಂದರ್ಭದಲ್ಲಿ ಏನೇನು ಘಟನೆಗಳಾಗಿವೆ ಎಂಬ ಬಗ್ಗೆ ವಿಶ್ಲೇಷಣೆ ಮಾಡುತ್ತಾ ಹೋದರೆ ಈ ಸಭೆಗೆ ಅದು ಆರೋಗ್ಯಕರವಾದ ಚರ್ಚೆಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ಅಲ್ಲಿಗೇ ಮೊಟಕು ಮಾಡುತ್ತೇನೆ. ಚುನಾವಣೆಯಲ್ಲಿ ಟಿಕೆಟ್ಟುಗಳನ್ನು ಹಂಚತಕ್ಕ ಕಾಲದಲ್ಲಿ, ಅಧಿಕಾರಕ್ಕೆ ಬರುವುದಿರಲಿ, ಹೊಡೆದಾಟ ಆಗಿರುವುದನ್ನು, ಯಾವ ಯಾವ ರೀತಿ ಎಲ್ಲೆಲ್ಲಿ ಏನೇನು ನಡೆದಿದೆ ಹಿಂದೂಸ್ಥಾನದ ರಾಜಕಾರಣದಲ್ಲಿ ಎಂಬ ಬಗ್ಗೆ ಸಾಕಷ್ಟು ಚರ್ಚೆ ಮಾಡಬಹುದು.

ವಿರೋಧಪಕ್ಷದ ನಾಯಕರನ್ನು ಆಯ್ಕೆ ಮಾಡುವಾಗ ಏನು ಘಟನೆಯಾಗಿವೆ, ಮುಖ್ಯಮಂತ್ರಿ ಸ್ಥಾನದ್ದು ಆದಮೇಲೆ. ವಿರೋಧ ಪಕ್ಷದ ನಾಯಕರನ್ನು ಆಯ್ಕೆ ಮಾಡತಕ್ಕ ಕಾಲದಲ್ಲಿ ಕೆಲವು ಕಡೆ ಏನೇನು ಘಟನೆಗಳಾಗಿವೆ ಅದನ್ನೆಲ್ಲಾ ನಾವು ಚರ್ಚೆ ಮಾಡುತ್ತಾ ಹೋದರೆ ಈ ಸಭೆಯ ನಡವಳಿಕೆಗೆ ಅದು ಸಾಕಷ್ಟು ಪುಷ್ಟಿ ಕೊಡುವುದಿಲ್ಲ, ನಾನು ಅಷ್ಟಕ್ಕೇ ಸೀಮಿತ ಮಾಡುತ್ತೇನೆ. ನಾನು ವಿರೋಧಪಕ್ಷದವರ ಒತ್ತಡಕ್ಕೆ ಮಣಿದು ಈ ರಾಜ್ಯದ 5 ಕೋಟಿ ಜನತೆಯ ಸೇವಕನಾಗಿ ಈ ಜಾಗದಲ್ಲಿ ನಿಂತು ಕೆಲಸ ಮಾಡುವ ಅವಕಾಶ ಸಿಕ್ಕಿದ ಕಾಲದಲ್ಲಿ ಆ ಘಟನೆ ಬಗ್ಗೆ ಒಂದು ಕ್ಷಮಾಯಾಚನೆ ಮಾಡಿದೆ. ಅದು ನನ್ನ ಘನತೆಗೆ ಈ ಸ್ಥಾನದ ಘನತೆಗೆ ಗೌರವ ತರುತ್ತದೆಯೋ ತರುವುದಿಲ್ಲವೋ ನನಗೆ ಗೊತ್ತಿಲ್ಲ. ತೀರ್ಮಾನ ಮಾಡತಕ್ಕ ಪ್ರಭುಗಳು ಸಭೆಯ, ಸದನದ ಹೊರಗಡೆ ಇದ್ದಾರೆ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆ ಘಟನೆಗೆ ಈ ಸದನದ ಒಬ್ಬ ಸದಸ್ಯರ ಸಂಬಂಧ

ಇರಬಹುದು, ನನ್ನ ಸಂಬಂಧ ಈ ಸಭೆಗೆ ಸದಸ್ಯನಾಗಿ ಬರಲಿಕ್ಕೆ ರಾಜ್ಯಾಂಗದಲ್ಲಿ ಯಾವುದೇ ಅಡ್ಡಿ ಅಲ್ಲ. ಆದರೆ ಚುನಾವಣೆಯಲ್ಲಿ ಗೆದ್ದು ಬಂದಿರತಕ್ಕ ವ್ಯಕ್ತಿ ಆದರೆ ಅವರ ಹೆಸರನ್ನು ಪತ್ರಿಕೆಯಲ್ಲಿ ಹೇಳಿದರು. ನೀವು ಹೇಳಿದಿರಿ ಎಂದು ಹೇಳುವುದಿಲ್ಲ.

ನಾನು ಈ ಮಾತನ್ನು ಇಲ್ಲಿರತಕ್ಕ ಯಾವ ಸದಸ್ಯರಿಗೂ ಹಿರಿಯರಾಗಲೀ ಕಿರಿಯರಾಗಲೀ ಹೇಳಲಿಕ್ಕೆ ಸಿದ್ಧನಿಲ್ಲ. ಪತ್ರಿಕೆಯಲ್ಲಿ ಹೇಳಿದರು. ಅವರಿಗೆ ಸ್ವಾತಂತ್ರ್ಯ ಇದೆ. ಆದರೆ ಚುನಾವಣೆಯ ಎರಡನೆಯ ಹಂತದಲ್ಲಿ ಎಣಿಕೆ ಆಗುವಾಗ ಅವರು ಚುನಾವಣಾ ಅಧಿಕಾರಿಯ ಸಮ್ಮುಖದಲ್ಲಿ ಯಾವ ದಿನ ಚುನಾವಣೆಯಾಯಿತ್ತೋ ಎರಡನೇ ದಿನ ಮತ್ತೆ ಕೌಂಟಿಂಗ್ ಆಗತಕ್ಕ ಸನ್ನಿವೇಶದಲ್ಲಿ ಅದಕ್ಕೆ ಜಿಲ್ಲಾಧಿಕಾರಿ ಇದ್ದಾರೆ, ಎಸ್.ಪಿ. ಇದ್ದಾರೆ, ಎಲ್ಲಾ ಚುನಾವಣಾಧಿಕಾರಿಗಳು ಇದ್ದಾರೆ. ಆದರೆ ಈಗ ಈ ರಾಷ್ಟ್ರದ ರಾಜಕಾರಣದಲ್ಲಿ, ಇದು ಕೇವಲ ಒಂದು ಕಡೆ ಅಲ್ಲ, ಈ ರಾಷ್ಟ್ರದ ರಾಜಕಾರಣದಲ್ಲಿ ಒಬ್ಬರ ಮೇಲೆ ಒಬ್ಬರು ರಾಡಿ, ಕೆಸರನ್ನು ಎರಚುವುದು. ಇದರಿಂದಲೇ ಇವತ್ತು ರಾಜಕೀಯ ಜೀವನದಲ್ಲಿ ಯಾರಿಗೂ ಗೌರವ ಉಳಿದಿಲ್ಲ. ಯಾವುದೇ ಪಕ್ಷಕ್ಕೂ ಗೌರವ ಉಳಿದಿಲ್ಲ. ಈ ಮಾತನ್ನು ನಾನು ನೊಂದು ಹೇಳಬೇಕಾಗಿದೆ. ಇಂಥ ಸನ್ನಿವೇಶವನ್ನು ನಾವೆಲ್ಲರೂ ಸೇರಿ ನಿರ್ಮಾಣ ಮಾಡಿಕೊಂಡಿದ್ದೇವೆ. ಅದಕ್ಕೆ ಪತ್ರಿಕೆಯವರು ಹೊಣೆ ಇದ್ದಾರೋ ಮತ್ತೊಬ್ಬರು ಹೊಣೆ ಇದ್ದಾರೋ, ಅದು ಯಾರು ಅವರು ಈ ಸುದ್ದಿ ಹೇಳಿದ್ದಾರೆ ಅದರ ಬಗ್ಗೆ ನಾನು ಚರ್ಚೆಗೆ ಹೋಗುವುದಿಲ್ಲ.

ಆದರೆ ಯಾವ ವ್ಯಕ್ತಿ ಇಲ್ಲಿ ಇಲ್ಲವೋ ಅಂತಹ ಹೆಸರನ್ನು ತೆಗೆದು ಇವತ್ತು ಅವಹೇಳನ ಮಾಡುವುದಕ್ಕೆ ಪ್ರಯತ್ನ ಮಾಡಿದರು. ನೊಂದ ಮನಸ್ಸಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ರಾಜಕೀಯ ಜೀವನದಲ್ಲಿ 5 ವರ್ಷಗಳು ಈ ಸದನದ ಹೊರಗಡೆ ಇದ್ದೆ ನಾನು. ಆದರೆ ಕೇವಲ 18 ತಿಂಗಳು ಈ ರಾಜಕೀಯ ಜೀವನದಲ್ಲಿ ಜನ ನನ್ನನ್ನು ಹೊರಗಡೆ ಇಟ್ಟರು. ಅದಕ್ಕೆ ಕಾರಣ ಬೇರೆ ಇದೆ. 18 ತಿಂಗಳಲ್ಲಿ ರಾಜ್ಯದ ರಾಜಕಾರಣದಲ್ಲಿ ಪುನಃ ನನಗೆ ಆಶೀರ್ವಾದ ಮಾಡಿ ಕಳುಹಿಸಿದಂತಹ ಮಹಾಜನತೆ ಯಾರು ಇದ್ದಾರೆ, ಅಲ್ಲಿಂದ ಮುಂದೆ ರಾಜ್ಯದಲ್ಲಿ ಈ ನಾಡಿನ ಮಹಾ ಜನತೆ ಯಾವ ಜನತಾ ದಳ ಇಡೀ ಹಿಂದೂಸ್ಥಾನದಲ್ಲಿ ಡಿಸ್‌ಇಂಟ್ರಿಗ್ರೇಟ್ ಆಗುತ್ತಿದೆ ಎಂದು ಹೇಳತಕ್ಕಂತಹ ಒಂದು ವಾತಾವರಣದಲ್ಲಿ ಈ ನಾಡಿನ ಜನ ನಾವು ಹಿಂದೆ ಮಾಡಿದಂತಹ ಎಲ್ಲಾ ತಪ್ಪುಗಳನ್ನು ಕ್ಷಮಿಸಿದ್ದಾರೆ. ಒಂದು ವೇಳೆ ನಮ್ಮಲ್ಲಿ ಘರ್ಷಣೆ ಆಗಿರಬಹುದು. ಅದು ತಾತ್ವಿಕ ಘರ್ಷಣೆ. ಈ ರಾಜ್ಯದ ನೀರಾವರಿ ಬಗ್ಗೆ ನನ್ನ ಹೋರಾಟ ಇದೆ. ಅದರ ಬಗ್ಗೆ ತಾತ್ವಿಕ ಘರ್ಷಣೆಯಿಂದ ಹೋರಾಟ ಆಗಿರಬಹುದು. ಇಡೀ ಹಿಂದೂಸ್ಥಾನದಲ್ಲಿ ಜನತಾದಳಕ್ಕೆ ನೆಲೆ ಇಲ್ಲ ಎನ್ನುವ ಕಾಲದಲ್ಲಿ ಈ ನಾಡಿನ ಜನತೆ ನಮಗೆ ಆಶೀರ್ವಾದ ಮಾಡಿ ಕಳುಹಿಸಿ ಕೊಟ್ಟಿದ್ದಾರೆ. ಈ ಭಾಗದಲ್ಲಿ ಕುಳಿತಿರತಕ್ಕ 116 ಜನ ಇರಬಹುದು. ಸಂತೋಷ. ಇವತ್ತು ಅತ್ಯಂತ ಉತ್ತಮವಾಗಿ ಸದನದ ಕಾರ್ಯಕಲಾಪಗಳು. ನಡೆಯಬೇಕು, ಸರ್ಕಾರವನ್ನು ವಾಚ್ ಡಾಗ್ ಆಗಿ ಪ್ರತಿ ಹಂತದಲ್ಲೂ ಕಾಯುತ್ತೇವೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಪ್ರತಿ ಹಂತದಲ್ಲೂ ನೀವು ನಮ್ಮ ನಡೆನುಡಿಯನ್ನು, ಸರ್ಕಾರದ ಆಡಳಿತವನ್ನು ಪರೀಕ್ಷೆ ಮಾಡುವಂತಹ, ಕಣ್ಣಲ್ಲಿ ಕಣ್ಣಿಟ್ಟು, ನೋಡುವಂತಹ ಪ್ರಯತ್ನ ಮಾಡಿದರೆ ಅದನ್ನು ಸ್ವಾಗತ ಮಾಡುತ್ತೇನೆ. ಇದು ಕೇವಲ ಔಪಚಾರಿಕವಾದ ಮಾತಲ್ಲ, ರಾಜಕೀಯ ೀವನದಲ್ಲಿ ಯಾರೂ ಇಲ್ಲ ಶಾಶ್ವತವಾಗಿ ಉಳಿದುಕೊಳ್ಳುವುದಕ್ಕೆ ಸಾಧ್ಯ ಇಲ್ಲ, 'ರ ಅರಿವು ನನಗಿದೆ. 186 ಜನ ಇದ್ದಂತಹ ಕಾಂಗ್ರೆಸ್ ಪಕ್ಷದಲ್ಲಿ ಅಸ್ಥಿರತೆ

ಹೇಗೆ ಬಂತು ಎಂಬುದು ಗೊತ್ತಿದೆ. ಇನ್ನು 116 ಜನ ಇಟ್ಟುಕೊಂಡು ನಾನು ದೊಡ್ಡ ಉಪದೇಶ ಮಾಡುವುದಕ್ಕೆ ಹೋಗುವುದಿಲ್ಲ, ಯಾವ ಸನ್ನಿವೇಶದಲ್ಲಿ ರಾಜಕಾರಣ ಯಾವ ರೀತಿ ಹೋಗುತ್ತದೆ ಎನ್ನುವಂತಹದ್ದನ್ನು ಹೇಳುವುದಕ್ಕಾಗುವುದಿಲ್ಲ. ಅದು ಈ ದೇಶದ ರಾಜಕೀಯದ ಸ್ಥಿತಿ ಗತಿಯೇ ಅಷ್ಟು ಅಸ್ಥಿರವಾಗಿದೆ. ನಾಳೆ ಏನಾಗುತ್ತದೆಂಬುದನ್ನು ಯಾರೂ ಹೇಳುವುದಕ್ಕೆ ಸಾಧ್ಯ ಇಲ್ಲ, ಇಲ್ಲಿರತಕ್ಕ ಈ ರಾಜಕೀಯ ಸನ್ನಿವೇಶದಲ್ಲಿ 224 ಜನ ಇರತಕ್ಕ ಈ ಸದನದಲ್ಲಿ 108 ಜನ ತಾವು ಆ ಕಡೆ ಕುಳಿತಿದ್ದೀರಿ. 116 ಜನ ಈ ಕಡೆ ಇದ್ದೇವೆ. ತೀವ್ರವಾದ ಪೈಪೋಟಿ ಯಾವುದರ ಮೇಲೆ ಇರಬೇಕು. ಈ ಪ್ರಶ್ನೆಯನ್ನು ಕೇಳುತ್ತೇನೆ. ಯಾವುದರ ಬಗ್ಗೆ ನಮ್ಮ ಪೈಪೋಟಿ? ಸುಮಾರು ಇಪ್ಪತ್ತೆಂಟೂವರೆ ವರ್ಷಗಳು ಈ ಸದನದಲ್ಲಿ ಕುಳಿತು ಕೆಲಸ ಮಾಡಿದ್ದೇನೆ. ಪೈಪೋಟಿ ಯಾವುದರಲ್ಲಿ ಇರಬೇಕು? ಒಂದು ಕಡೆ 5 ಕೋಟಿ ಜನ ತುಂಬತಕ್ಕ ಹಣ ಏನು ಇದೆ, ಈ ಖಜಾನೆಗೆ ಅದರ ಸಾರ್ವಜನಿಕ ದತ್ತಿಗಳಾಗಿ ಈ ಸಾಲಿನಲ್ಲಿ ಕುಳಿತು ಕೆಲಸ ಮಾಡುವವರು ನಾವು ಯಾರು ಇದ್ದೇವೆ, ಅದರ ಹುರ್ಬಳಕೆಯಾದರೆ, ಅದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ಎಲ್ಲಾ ಸನ್ನಿವೇಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಅದೊಂದನ್ನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಎರಡನೆ ಪೈಪೋಟಿ ಯಾರು ಈ 47 ವರ್ಷಗಳು ಸ್ವಾತಂತ್ರ್ಯ ಬಂದ ಮೇಲೆ ಅತ್ಯಂತ ಹೀನಾಯ ಸ್ಥಿತಿಯಲ್ಲಿದ್ದಾರೋ ಅವರನ್ನು ಕಡೆಗಣಿಸಿದ್ದಾರೋ, ಅಂತಹ ಜನತೆಯ ಬಗ್ಗೆ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳತಕ್ಕ ಕಾಲದಲ್ಲಿ ನಾವು ನೀವು ಎಲ್ಲಾ ಒಂದುಗೂಡಿ ಕೆಲಸ ಮಾಡಬೇಕು. ಅಷ್ಟೇ ವಿನಂತಿ ಮಾಡಿಕೊಳ್ಳುವುದು. ಈ ದಿಸೆಯಲ್ಲಿ ನಮಗೆ ನೀವು ಯಾರೂ ಇವತ್ತು ರಿಯಾಯಿತಿ ಕೊಡಬೇಕಾದುದಿಲ್ಲ, ತಪ್ಪು ಮಾಡಿದಾಗ ಈ ಸಭೆಯಲ್ಲಿ ಸಂಸದೀಯ ಚೌಕಟ್ಟಿನಲ್ಲಿ ಯಾವ ಶಬ್ದಗಳನ್ನಾದರೂ ಪ್ರಯೋಗ ಮಾಡಿ. ಅದನ್ನು ನಾನು ಸ್ವೀಕಾರ ಮಾಡುತ್ತೇನೆ. ಆದರೆ ಒಂದೇ ಒಂದನ್ನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾವ ಸದನದ ಸದಸ್ಯನಾಗಿ ಆವತ್ತು ಇಲ್ಲಿ ಇಲ್ಲವೋ ಅಂತಹ ಒಬ್ಬ ಸದಸ್ಯರ ಹೆಸರನ್ನು ತೆಗೆದು ಅಗೌರವ ಮಾಡುವಂತಹ ಪ್ರಯತ್ನ ಮಾಡತಕ್ಕ ಸನ್ನಿವೇಶ ಏನು ಇದೆ, ಅದನ್ನು ಸ್ವಲ್ಪ ಮಟ್ಟಿಗೆ, ನಾನು ನಿಮಗೇ ಬಿಡುತ್ತೇನೆ. ಅಂತಹ ವಾತಾವರಣ ನಿರ್ಮಾಣಕ್ಕೆ ಬಹಳ ಜನ ಕಾದಿರುತ್ತಾರೆ. ಗೊತ್ತಿದೆ ನನಗೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅದರ ಕಹಿ ಸಿಹಿಯನ್ನು ಊಟ ಮಾಡಿದ್ದೇನೆ. ಆದರಿಂದ ವಿಚಲಿತನಾಗುವುದಿಲ್ಲ, ಧೃತಿಗೆಡುವುದಿಲ್ಲ,

ಮಾನ್ಯ ವೀರಪ್ಪ ಮೊಯಿಲಿಯವರು, ನೀವು ಕಾರಣ ಎಂದು ಹೇಳಲಿಲ್ಲ, ಯಾರು ಹೇಳಿದರು? ಆವತ್ತಿನ ಘಟನೆಗೆ ಬೇಷರತ್ತಾಗಿ ನಾನು ಕ್ಷಮೆ ಯೋಚನೆ ಮಾಡಿದ್ದೇನೆ. ಅದನ್ನು ನಾನು ಯಾರಿಗೂ ಹೇಳಿ ಮಾಡಲಿಲ್ಲ, ಮುಂದೆ ಇದು ಸದನದಲ್ಲಿ ಚರ್ಚೆಗೆ ಬರುತ್ತದೆ, ಆ ಕಾರಣಕ್ಕಾಗಿ ಮೊದಲೇ ನಾನು ಬೇಷರತ್ತಾಗಿ ಈ ಕ್ಷಮೆ ಕೇಳಬೇಕು ಎಂದು ಕೇಳಲಿಲ್ಲ, ವೆಸ್ಟ್ ಬೆಂಗಾಳ್ನಲ್ಲಿ ಅಸೆಂಬ್ಲಿಯಲ್ಲಿ ಪೋಲೀಸ್ನವರು ನುಗ್ಗಿ ಹೊಡೆದಿದ್ದಾರೆ. ನನಗೆ ಗೊತ್ತಿದೆ. ಒಂದೊಂದು ಪ್ರಕರಣಗಳನ್ನೂ ವಿಶ್ಲೇಷಣೆ ಮಾಡಬಲ್ಲೆ, ಈ ದೇಶದ ರಾಜಕಾರಣದ ಬಗ್ಗೆ ಸ್ವಲ್ಪ ಅರಿವು ಇದೆ. ಇದೇ ಸದನದಲ್ಲಿ ಒಬ್ಬ ಮಾಜಿ ಮುಖ್ಯ ಮಂತ್ರಿಗಳು ಆ ಕಡೆ ಕುಳಿತಿರತಕ್ಕವರು ಇವತ್ತು ನನ್ನ ಜೊತೆಯಲ್ಲಿ ಸಹೋದ್ಯೋಗಿಯಾಗಿದ್ದಾರೆ. ಕೈ ಕೈ ಮಿಲಾಯಿಸುವ ಹಂತ ಬಂತು. ಆದ್ದರಿಂದ ಘನತೆ ಗೌರವದ ಬಗ್ಗೆ ಬಹಳ ದೊಡ್ಡ ವ್ಯಾಖ್ಯಾನ ಮಾಡುವುದು ಬೇಕಾಗಿಲ್ಲ, ಹಿಂದೆ ನಡೆದ ಘಟನೆಗಳನ್ನು ಪುನರುಚ್ಚಾರ ಮಾಡುವುದಾಗಲಿ, ಅದನ್ನು ಮೆಲಕು ಹಾಕಿ ನೋಡಬೇಕಾದ ಅವಶ್ಯಕತೆ ಇಲ್ಲ, ಈ ಸಭೆಯ ಘನತೆ ಗೌರವವನ್ನು ಎತ್ತಿ ಹಿಡಿಯ ಪ್ರಯತ್ನ ಮಾಡೋಣ.

ನಾನೂ ನಿಮ್ಮ ಜೊತೆಗೆ ಭಾಗಿಯಾಗುತ್ತೇನೆ. ಅವೊತ್ತಿನ ಘಟನೆ ಎಲ್ಲೇ ನಡೆದಿರಲಿ, ಅದು ಯಾವ ಭಾಗದಲ್ಲಿಯೇ ನಡೆದಿರಲಿ ಅದರಲ್ಲಿ ಯಾರು ಇದ್ದಾರೆಂದು ಹೇಳುವುದಕ್ಕೆ ಬರುವುದಿಲ್ಲ, ಕೇವಲ ಶ್ರೀಮಾನ್ ಯಡಿಯೂರಪ್ಪನವರಿಗೆ ಮಾತ್ರ ಅಭಿಮಾನಿಗಳಿದ್ದಾರೆ ಅಥವಾ ಮೊಯಿಲಿ ಯವರಿಗೆ ಮಾತ್ರ ಅಭಿಮಾನಿಗಳಿದ್ದಾರೆಂದೂ, ದೇವೇಗೌಡರಿಗೆ ಅಭಿಮಾನಿಗಳು ಇಲ್ಲವೆನ್ನುವ ಮಾತನ್ನು ಹೇಳಬೇಕಾದ ಅವಶ್ಯಕತೆಯಿಲ್ಲ, ಒಂದು ಸರ್ಕಾರ ಬದಲಾವಣೆಯಾದಾಗ ಸಹಸ್ರಾರು ಜನ ಸೇರುತ್ತಾರೆ, ಅದು ಸ್ವಾಭಾವಿಕ. 1983ರಲ್ಲಿ ನಾವೆಲ್ಲಾ ಒಟ್ಟಿಗೆ ಸೇರಿ ಸರ್ಕಾರವನ್ನು ಮಾಡಿದಾಗ, ನನ್ನ ಆತ್ಮೀಯ ಗೆಳೆಯರಾದ ಜೀವರಾಜ ಆಳ್ವರವರು ಇಲ್ಲೇ ಕುಳಿತಿದ್ದಾರೆ. ಆವತ್ತು ಏನು ಬಾಡಿಗೆ ಜನರನ್ನು ಕರೆದುಕೊಂಡು ಬಂದಿದ್ದವೇನು? ಇಲ್ಲ. 1985ರಲ್ಲಿ ಪುನಃ ನಾವು ರಾಜೀನಾಮೆಯನ್ನು ಕೊಟ್ಟು ಜನ ನಮ್ಮ ಸರ್ಕಾರ ಬರುವುದಕ್ಕೆ ಆಶೀರ್ವಾದ ಮಾಡಿದಾಗ ಅವೊತ್ತು ಬಾಡಿಗೆ ಜನರನ್ನು ಕರೆದುಕೊಂಡು ಬಂದಿದ್ದವೇನು? ಇಲ್ಲ. ಮಾನ್ಯ ಬಂಗಾರಪ್ಪನವರ ಮನೆಯ ಮುಂದೆ ಹೋದಂತಹ ಕಾಲದಲ್ಲಿ ದೇವೇಗೌಡರಿಗೆ ಏಟು ಬಿದ್ದಾಗ ಇಂತಹವರೇ ಹೊಡೆಸಿದರು ಎಂದು ನಾನು ಹೇಳಲಿಲ್ಲ. ಬಂಗಾರಪ್ಪನವರು ಈ ಸಭೆಯಲ್ಲಿಲ್ಲ, ಅವರು ನನ್ನನ್ನು ಹೊಡೆಸಿದರು ಎಂದೂ ಕೂಡ ಹೇಳಲಿಲ್ಲ. ಯಾರೋ ಅವೊಂದು ಸನ್ನಿವೇಶದಲ್ಲಿ ಅವರ ಒಂದು ಮನಸ್ಸಿನ ಭಾವೋದ್ರೇಕದಿಂದ ಅಥವಾ ಅವರ ಮನಸ್ಸಿನಲ್ಲಿ ಒಬ್ಬ ವ್ಯಕ್ತಿಯ ಮೇಲಿನ ಮಮತೆಯಿಂದ ಇರಬಹುದು. ಅಷ್ಟೇ ಅಲ್ಲದೆ ಕೆಲವು ಸಮಾಜಘಾತುಕ ಶಕ್ತಿಗಳು ಇಂತಹ ದೊಡ್ಡ ಸಭೆಗಳಲ್ಲಿ ಸೇರಿ ಕುಚೋದ್ಯ ಮಾಡಲಿಕ್ಕೆ ಸಾಧ್ಯವಿದೆ. ಬಂಗಾರಪ್ಪನವರ ಮನೆಯ ಮುಂದೆ ಏಟು ತಿಂದಂತಹ ಕಾಲದಲ್ಲಿ ನೀವು ನಮ್ಮ ಜೊತೆಯಲ್ಲಿದ್ದಿರಿ.

ಬಂಗಾರಪ್ಪನವರು ಹೊಡೆಸಿದರು ಎಂದು ನಾನು ಹೇಳಲಿಲ್ಲ, ನಾಯಕರಾಗಿರುವವರು ಇಂತಹ ಕೀಳು ಮಟ್ಟಕ್ಕೆ ಇಳಿಯುತ್ತಾರೆಂದು ಆ ಮಾತನ್ನು ನಾನು ಆಡಲಿಲ್ಲ, ಈ ಸದನದಲ್ಲಿ ನಾನು ಒಬ್ಬ ಮುಖ್ಯಮಂತ್ರಿಯಾಗಿ ಈ ಮಾತನ್ನು ಹೇಳುತ್ತಿಲ್ಲ, ಒಬ್ಬ ಸಾಮಾನ್ಯ ಪ್ರಜೆಯಾಗಿ ಈ ಮಾತನ್ನು ಹೇಳುತ್ತೇನೆ. 35 ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ಯಾವುದೇ ಒಂದು ಸಂದರ್ಭದಲ್ಲಿ ಹಿಂಸಾಚಾರಕ್ಕೆ ಎಡೆಕೊಡುವ ರಾಜಕಾರಣವನ್ನು ನಾನು ಮಾಡಲಿಲ್ಲ, ದಿವಂಗತ ದೇವರಾಜ ಅರಸ್ರವರು ಇದೇ ಸ್ಥಾನದಲ್ಲಿ ಕುಳಿತು ಹೇಳಿದರು. ದೇವೇಗೌಡರು ವಿರೋಧಪಕ್ಷದ ನಾಯಕರಾಗಿ ಅವರು ಯಾವುದೇ ಸನ್ನಿವೇಶದಲ್ಲಿ ಹಿಂಸೆಯ ಒಂದು ರಾಜಕಾರಣವನ್ನು ಮಾಡಿದವರಲ್ಲ, ವಿದ್ಯಾರ್ಥಿಗಳ ಸಂಘದ ಚುನಾವಣೆಯಲ್ಲಿ ನಡೆದ ಘಟನೆಗಳನ್ನು ತೆಗೆದು ಹೇಳಿದ್ದಾರೆ. ಅದು ಪ್ರೊಸಿಡಿಂಗ್ಸ್ನಲ್ಲಿದೆ. 'They never indulged in sinister Politics.

ಈ ಮಾತನ್ನು ಹೇಳಿದ್ದಾರೆ. ಈ ಸದನದ ಕಾರ್ಯಕಲಾಪಗಳ ಕಡತದಲ್ಲಿದೆ. ನಾನು ಇಷ್ಟು ಹೇಳುವುದಕ್ಕೆ ಇಚ್ಛಿಸುಡುತ್ತೇನೆ, ಅದು ಏನೇ ಇರಲಿ ಯಾವುದಕ್ಕೂ ಮನಸ್ಸು ನೋವು ಮಾಡಿಕೊಳ್ಳದೆ ಆ ಘಟನೆಗಳ ಬಗ್ಗೆ ಬೇಸರತ್ತಿನ ಮಾತನ್ನು ಹೇಳಿದ್ದೇನೆ. ಯಾರು ಘಟನೆ ನಡೆಯುವುದಕ್ಕೆ ಕಾರಣಕರ್ತರಿದ್ದಾರೆಂದು ಹೇಳುವುದಕ್ಕೆ ಹೋಗುವುದಿಲ್ಲ, ನನಗೆ ಗೊತ್ತಿದೆ. ಪೋಲೀಸ್ ಅಧಿಕಾರಿಗಳಿಗೂ ಪತ್ತೆ ಹಚ್ಚುವುದಕ್ಕೆ ಆಗುವುದಿಲ್ಲ, ವಿಧಾನಸೌಧದೊಳಕ್ಕೆ ನುಗ್ಗಿದರು ಎಂದು ಹೇಳಿದಾಗ, ಹಳ್ಳಿಗಳಿಂದ ಬಂದಿರತಕ್ಕವರಿಗೆ ವಿಧಾನಸೌಧಕ್ಕೆ ನುಗ್ಗುವ ಸಾಮರ್ಥ್ಯವಿರುವುದಿಲ್ಲ, ಅವರು ವಿಧಾನಸೌಧವನ್ನೇ ನೋಡುವುದು ಕಷ್ಟವಿದೆ. ಇನ್ನು ಆ ಶಕ್ತಿ ನಮ್ಮ ಹಳ್ಳಿಯವರಿಗೆ ಬಂದಿಲ್ಲ, ಶ್ರೀಮಾನ್ ಯಡಿಯೂರಪ್ಪನವರ ಹಿಂದೆ ಇರುವವರಿಗಾಗಲೀ ದೇವೇಗಡರ ಹಿಂದೆ ಇರುವವರಿಗಾಗಲೀ ಬೆಂಗಳೂರು ನೋಡುವುದೇ ಬಹಳ ಕಷ್ಟ. ಬೆಂಗಳೂರಿಗೆ ಬಂದ ಬೋರೇಗೌಡ, ಎಂಬ ಸಿನಿಮಾ ಬಂದಿತ್ತು. ಇನ್ನೂ ಅವರ ಸ್ಥಿತಿ ಹಾಗೆಯೇ ಇದೆ. ಆ ಸನ್ನಿವೇಶದಲ್ಲಿ ಯಾರು ಬಂದರು ಎನ್ನುವ ಬಗ್ಗೆ ಪೋಲೀಸ್ ಅಧಿಕಾರಿಗಳನ್ನು ಕರೆಯಿಸಿ ವಿಚಾರ

ಮಾಡಿದ್ದೇನೆ. ಅವರು ಪತ್ತೆಹಚ್ಚುವುದಕ್ಕಾಗುವುದಿಲ್ಲ. ಸುಮಾರು ಒಂದೂವರೆ ಲಕ್ಷ ಜನ ಸೇರಿದ್ದರು ಎನ್ನುವ ಮಾತನ್ನು ಹೇಳಿದರು. ವೀರಪ್ಪ ಮೊಯಿಲಿಯವರು ಜವಾಬ್ದಾರರು ಎಂದು ನನ್ನ ಬಾಯಿಂದ ಹೇಗೆ ಹೇಳಲಿಕ್ಕೆ ಸಾಧ್ಯ? ಅವರು ಏನು ಹೇಳಿದರು ಅಂದರೆ ಇನ್ನು ಪ್ರಮಾಣವಚನ ಸ್ವೀಕಾರ ಮಾಡಿಲ್ಲ ಎನ್ನುವ ಕಾಂಟೆಸ್ಟ್‌ನಲ್ಲಿ ಹೇಳಿದರು ಅಷ್ಟೆ. ನೀವು ಜವಾಬ್ದಾರರಲ್ಲ. ನಾನು ಬಂಗಾರಪ್ಪನವರ ಮನೆಯ ಮುಂದೆ ಏನು ತಿಂದ ದಿವಸ ಬಂಗಾರಪ್ಪನವರು ಹೊಡೆಸಿದರು ಎಂದು ಹೇಳಲಿಲ್ಲ. I never opened my lips.

ಇಷ್ಟು ಹೇಳಿ ಇಲ್ಲಿಗೆ ಬಿಡುತ್ತೇನೆ. ಈ ವಿಷಯವನ್ನು ಮುಂದುವರಿಸುವುದು ಬೇಡ. ದಯಮಾಡಿ ವಿನಂತಿ ಮಾಡುತ್ತೇನೆ, ನಮ್ಮ ಬಜಪ ಸ್ನೇಹಿತರು ನಿಮ್ಮನ್ನು ಜನ ಮೂರನೆಯ ಸ್ಥಾನಕ್ಕೆ ತಳ್ಳಿದ್ದಾರೆಂದು ಹೇಳಿದರು. I never said that you have not done anything to the State. ಏನೂ ಕೆಲಸ ಮಾಡದೆ ಮಲಗಿದ್ದಿರಿ, ನಿದ್ದೆ ಮಾಡುತ್ತಾ ಇದ್ದಿರಿ, ಅದಕ್ಕೆ ನಿಮ್ಮನ್ನು ಮೂರನೆಯ ಸ್ಥಾನಕ್ಕೆ ತಳ್ಳಿದ್ದಾರೆಂದು ರಾಜಕಾರಣದಲ್ಲಿ ಹೇಳುವುದಕ್ಕಾಗುವುದಿಲ್ಲ ನಾಳೆ ಏನಾಗುತ್ತದೆಂದು ಯಾರಿಗೂ ಗೊತ್ತಿಲ್ಲ, 1989ರಲ್ಲಿ ದೇವೇಗೌಡರ ಪಕ್ಷದವರು ಈ ಸದನಕ್ಕೆ ಕೇವಲ ಎರಡು ಜನ ಮಾತ್ರ ಗೆದ್ದು ಬಂದಿದ್ದರು. ಈಗ ಪರಿಸ್ಥಿತಿ ಬದಲಾವಣೆಯಾಗಿದೆ. ನಾವೆಲ್ಲಾ ಒಂದಾಗಿದ್ದೇವೆ, ಒಗ್ಗಟ್ಟಿನಿಂದ ಕೆಲಸ ಮಾಡಿದ್ದೇವೆ. ನಮಗೆ ನಿರೀಕ್ಷಿಸಿದ ಫಲ ಸಿಕ್ಕಿದೆ. ಆದ್ದರಿಂದ 1984ರ ರಾಜಕಾರಣ 1994ರಲ್ಲಿ ಇಲ್ಲ. 1994ರ ರಾಜಕಾರಣ 1999ಕ್ಕೆ ಬದಲಾವಣೆಯಾಗಬಹುದು. 1996ಕ್ಕೆ ಬದಲಾವಣೆಯಾಗಬಹುದು. ಪಾರ್ಲಿಮೆಂಟ್ ಚುನಾವಣೆಯಲ್ಲಿ ಏನಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಮುಂದೆ ಬರತಕ್ಕ ದಿವಸಗಳಲ್ಲಿ 6 ರಾಜ್ಯಗಳಲ್ಲಿ ಫೆಬ್ರುವರಿ ಮಾರ್ಚಿಯಲ್ಲಿ ಚುನಾವಣೆ ನಡೆದರೆ 1995ರಲ್ಲಿ ಈ ರಾಷ್ಟ್ರದ ರಾಜಕಾರಣದಲ್ಲಿ ಏನಾಗುತ್ತದೆಂದು ನೀವೂ ಹೇಳುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಕುಳಿತು ನಾವು ಹೇಳುವುದಕ್ಕೆ ಸಾಧ್ಯವಿಲ್ಲ. ಅಂತಹ ಒಂದು ಸನ್ನಿವೇಶದಲ್ಲಿ ನಾವು ಇದ್ದೇವೆ. ಕೇವಲ ಟೀಕೆಗೋಸ್ಕರ ಟೀಕೆ ಮಾಡುವುದು ಬೇಡವೆಂದು ನಿಮ್ಮಲ್ಲಿ ಕೈಜೋಡಿಸಿ ವಿನಂತಿ ಮಾಡಿಕೊಳ್ಳುತ್ತೇನೆ, ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ನನ್ನ ಮನಸ್ಸಿನಲ್ಲಿ ಕೆಲವು ಭಾವನೆಗಳಿವೆ. ಅದು ಆಡಳಿತದಲ್ಲಿ ಆ ಭಾವನೆಗಳು ಕೃತಿಗೆ ಇಳಿಯಬೇಕು ಎಂಬುದು ನನ್ನ ಮನಸ್ಸಿನ ಆಸೆ. ಕಾರಣ ಇಷ್ಟು ನಾನು ಯಾವುದೇ ವಿಚ್ ಹಂಟಿಂಗ್ ಮಾಡುವುದಿಲ್ಲವೆಂದು ಹೇಳಿದ್ದೇನೆ. ಹಾಗೆ ಅಂದ ಮಾತ್ರಕ್ಕೆ ಈಗ ಇರತಕ್ಕ 108 ಜನ ಗೌರವಾನ್ವಿತ ಸದಸ್ಯರು ಯಾರು ಇದ್ದೀರಿ ಮಾಜಿ ಮುಖ್ಯಮಂತ್ರಿಗಳು ಇಬ್ಬರು ಇದ್ದೀರಿ, ಹತ್ತಾರು ಜನ ಮಾಜಿ ಮಂತ್ರಿಗಳು ಇದ್ದೀರಿ ಈ ಸದನದ ಕಾರ್ಯಕಲಾಪಗಳಲ್ಲಿ ಸಾಕಷ್ಟು ಅನುಭವ ಮತ್ತು ಪರಿಶ್ರಮವನ್ನು ಹೊಂದಿರತಕ್ಕ ಮಾಜಿ ಮಂತ್ರಿಗಳು ಇದ್ದೀರಿ, ನಾನು ಒಂದು ವಿಷಯದಲ್ಲ ಯಾವುದೇ ರಿಯಾಯಿತಿಯನ್ನು ನಿಮ್ಮಲ್ಲಿ ಕೇಳುವುದಿಲ್ಲ. ಈ ಸರ್ಕಾರ 11ನೇ ಡಿಸೆಂಬರ್ ಆವೊತ್ತು ನಾವೇನು ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದೇವೆ ಅಲ್ಲಿಂದ ಮುಂದೆ ಅದು ಐದು ವರ್ಷಗಳು ಇರಬಹುದು. ಜನತೆಯ ಆಶೀರ್ವಾದ ಇದ್ದರೆ ಮುಂದುವರಿಯಬಹುದು ಅಥವಾ ಹಿಂದೆ ಬೀಳಬಹುದು. ನಮ್ಮ ಸರ್ಕಾರ ಅಧಿಕಾರದಲ್ಲಿದಂತಹ ಕಾಲದಲ್ಲಿ ಯಾವುದೇ ತಪ್ಪನ್ನು ಮಾಡಿದರೆ ನಮ್ಮನ್ನು ನೀವು ಸ್ಪೇರ್ ಮಾಡಬೇಡಿ strip ಮಾಡಿ Tell the people that this Government is a Government mis-fit ಹಾಗೆ to rule.

ಹೇಳಿ ನಾನು ಸ್ವಾಗತ ಮಾಡುತ್ತೇನೆ. ಆದರೆ ಹಿಂದೆ ನಡೆದು ಹೋದ ಘಟನೆಗಳ ಬಗ್ಗೆ ನಾನು ಸೊಲ್ಲು ಕೂಡ ಎತ್ತುವುದಕ್ಕೆ ಸಿದ್ಧನಿಲ್ಲ. I don't want

to take that political vindictive attitude I don't want to have a political victismisation.

ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಬಗ್ಗೆ ಭ್ರಷ್ಟಾಚಾರದ ಆಪಾದನೆ ಬಂದಿತ್ತು. 47 ವರ್ಷಗಳ ರಾಜಕೀಯ ಇತಿಹಾಸದಲ್ಲಿ ನೂರಾರು ಆಯೋಗಗಳನ್ನು ನೇಮಕ ಮಾಡುತ್ತಾರೆ. ಯಾರನ್ನು ಜೈಲಿಗೆ ಹಾಕಿದ್ದಾರೆ? ನಾನು ಯಾರೋ ಒಬ್ಬರಿಗೆ ಈ ಮಾತನ್ನು ಹೇಳುತ್ತಿಲ್ಲ, There are 101 cases. ನೀವು ಏನು ಬೇಕಾದರೂ ಕೇಳಿ ಉತ್ತರ ಕೊಡುತ್ತೇನೆ. ಈ ದೇಶದಲ್ಲಿ ಯಾವುದೇ ರಾಜಕೀಯ ವ್ಯಕ್ತಿಯನ್ನು......

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ದಯಮಾಡಿ ಒಂದು ನಿಮಿಷ ಅವಕಾಶ ಕೊಡಿ. ಸಾಮಾನ್ಯ ಸದಸ್ಯರು ಮಾತನಾಡಿದ್ದರೆ ನಾನು ಮಧ್ಯೆ ಪ್ರವೇಶ ಮಾಡುತ್ತಿರಲಿಲ್ಲ, ತಾವು ಈ ರಾಜ್ಯದ ಮುಖ್ಯಮಂತ್ರಿಗಳಿದ್ದೀರಿ. ಈಗ ಏನು ಹೇಳುತ್ತಾ ಇದ್ದೀರಿ, ರಾಜಕಾರಣಿಯಾದವನು. ಏನೇ ಅಪರಾಧ ಮಾಡಿ ಈ ರಾಷ್ಟ್ರದಲ್ಲಿ ಕೈ ಆಡಿಸಿಕೊಂಡು ಮೀಸೆ ತಿರಿವಿಕೊಂಡು ಹೊರಟು ಹೋಗಬಹುದು ಎಂದು ಅವನಿಗೆ ಏನೂ ಮಾಡುವುದಿಲ್ಲ. ನೀವು ದೊಡ್ಡವರಾಗಿ ಬಿಡುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲ ನಾಯಕರೇ ಪೊಲಿಟಿಕಲ್ ವಿಕ್ಟಿಮೈಸೇಷನ್ ಬೇಡ. ಆದರೆ ಈ ರಾಜ್ಯದ ಖಜಾನೆಯನ್ನು ಲೂಟಿ ಮಾಡಿದವರನ್ನು ಬದಲಾವಣೆ ಮಾಡಿ ಎಂದು ನಿಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಅವರನ್ನು ರಕ್ಷಣೆ ಮಾಡತಕ್ಕ ಮಾತನ್ನು ಆಡಿದರೆ......

ಶ್ರೀ ಹೆಚ್.ಡಿ. ದೇವೇಗೌಡ : ನಾನು ಏನು ಹೇಳುತ್ತಿದ್ದೆ ಅಂದರೆ, ಪೊಲಿಟಿಕಲ್ ವಿಕ್ಟಿಮೈಸೇಷನ್ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿದೆ. ಈಗಲೂ ಸಮರ್ಥನೆ ಮಾಡುತ್ತೇನೆ. ರಾಜ್ಯದ ಬೊಕ್ಕಸಕ್ಕೆ ಹಾನಿಯಾಗಿದ್ದರೆ, ನಾಳೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯಿಂದ ರಿಪೋರ್ಟ್ ಬರುತ್ತದೆ. ಆಡಿಟ್ ರಿಪೋರ್ಟ್ ಬರುತ್ತದೆ. ಆಡಿಟ್ ರಿಪೋರ್ಟ್ ಇವತ್ತಿನದು ಬರುವುದಿಲ್ಲ, 1989-90ರ ಆಡಿಟ್ ರಿಪೋರ್ಟ್ ಬರುತ್ತದೆ. 1990-91ರ ಆಡಿಟ್ ರಿಪೋರ್ಟನ್ನು ಕಮಿಟಿ ಎಕ್ಸಾಮಿನ್ ಮಾಡಿ ಈ ಸದನದ ಗೌರವಾನ್ವಿತ ಸಭೆಯ ಉಪ ಸಮಿತಿ ನಿರ್ಣಯ ಮಾಡುತ್ತದೆ. ಇಂತಹ ಕಡೆ ಹಣಕಾಸು ಅಕ್ರಮವಾಗಿದೆಯೆಂದು ತಮ್ಮ ರಿಪೋರ್ಟ್‌ನಲ್ಲಿ ವರದಿ ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ನಾನು ಹೇಳಲಿಲ್ಲ, ನಾನು ಹೇಳಿರುವಂತಹದ್ದು ಪೊಲಿಟಿಕಲ್ ವಿಕ್ಟಿಮೈಸೇಷನ್‌ಗೆ ಹೋಗುವುದಿಲ್ಲವೆಂದು ನನಗೆ ಇರತಕ್ಕ ಕಾಲದಲ್ಲಿ, ಎಷ್ಟು ದಿವಸ ಇರುತ್ತೇನೆಂಬ ಬಗ್ಗೆ ಚಿಂತೆಯಿಲ್ಲ, ಪ್ರತಿಗಳಿಗೆ, ಪ್ರತಿ ನಿಮಿಷ ಈ ರಾಜ್ಯದ ಅಭಿವೃದ್ಧಿಯ ಕಡೆಗೆ ನಾನು ಗಮನ ಕೊಡುತ್ತೇನೆ. ಆ ಹಿನ್ನೆಲೆಯಲ್ಲಿ ನಾನು ಪೊಲಿಟಿಕಲ್ ವಿಕ್ಟಿಮೈಸೇಷನ್ಗೆ ಹೋಗುವುದಿಲ್ಲವೆನ್ನುವ ಮಾತನ್ನು ಹೇಳಿದ್ದೇನೆ. ಹಣಕಾಸಿನ ವಿಷಯದ ಬಗ್ಗೆ ಅದರ ಬಗ್ಗೆ ಚರ್ಚೆಯಿಲ್ಲ, ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಹೋಗುತ್ತೇವೆ.

ಡಾ|| ಜೀವರಾಜ ಆಳ್ವ : ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ ಕೂಲ್ಡ್ ಆಗಬೇಕು. It will help you, sir. Very sensitive, very emotional, very gracious also.

ತಾವು ಒಂದು ಮಾತು ಹೇಳಿದದ್ದು ನನಗೆ ನೆನಪಿದೆ. ಜೀವರಾಜ್ ಆಳ್ವರವರೇ ಇಲ್ಲಿ ಒಂದು ಇನ್ಸ್ಟಿಟ್ಯೂಷನ್ ಆಫ್ ಕರಪ್ಷನ್ ಆಯಿತು. ಗ್ರೋವರ್ ಕಮಿಷನ್ ಅನ್ನು ನಾವು ಅಪಾಯಿಂಟ್ ಮಾಡಿದ್ದೆವು. ಜನತೆ ಅದೇ ವ್ಯಕ್ತಿಯನ್ನು ಪುನಃ ಮುಖ್ಯಮಂತ್ರಿ ಮಾಡುವುದಕ್ಕೆ ತೀರ್ಮಾನ ತೆಗೆದುಕೊಂಡು ಎಂದು ಹೇಳಿದ ಮಾತು ತಮಗೆ ನೆನಪಿರಬೇಕು ಸ್ವಾಮಿ. ಇದನ್ನೇ ಹೇಳಿದ್ದೀರಿ. ನಾನು ಬೆಳಿಗ್ಗೆ ಹೇಳಿದ್ದೇನೆ.

ಅದಕ್ಕೆ ಗಮನ ಕೊಟ್ಟಿದ್ದೀರೋ ಇಲ್ಲವೋ ಗೊತ್ತಿಲ್ಲ. They cannot go scot-free. His grace or his generosity, nonËvictimisation.

ಶ್ರೀ ಹೆಚ್.ಡಿ. ದೇವೇಗೌಡ : ಟೈಮ್ ಹೋಗುತ್ತದೆ. Please make a note. ಏಕೆ ನಾನು ಹೇಳಿದ್ದೇನೆ, ಯಾವುದೇ ಹಣಕಾಸಿನ ಅಕ್ರಮ ನಡೆದಿರತಕ್ಕದ್ದರ ಬಗ್ಗೆ ಒಂದು ಕಡೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ತನಿಖೆ ಮಾಡುತ್ತಾರೆ.

ಸರ್ಕಾರದ ಎಲ್ಲಾ ದಾಖಲಾತಿಗಳೂ ಅವರ ಮುಂದೆ ಹೋಗುತ್ತವೆ. ಮತ್ತೊಂದು ಕಡೆ ಈ ರಾಜ್ಯದ ಅಕೌಂಟೆಂಟ್ ಜನರಲ್ ಯಾರಿದ್ದಾರೆ, ಅವರು ನೋಡುತ್ತಾರೆ. ಅದರ ಮೇಲೆಯೇ ನೀವು ತನಿಖೆ ಮಾಡಿಸಿ. ಆ ಸನ್ನಿವೇಶದಲ್ಲಿ ಈ ನಾಡಿನ ಹಣಕಾಸಿನ ಅವ್ಯವಹಾರ ನಡೆದಿದ್ದು, ನಿಮ್ಮ ವರದಿಯಲ್ಲಾಗಲೀ ಅಥವಾ ಬೇರೆ ರೂಪದಲ್ಲಾಗಲೀ ಸರ್ಕಾರದ ಗಮನಕ್ಕೆ ಬಂದರೆ, ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಇದನ್ನು ಮಾತ್ರ ಹೇಳುತ್ತೇನೆ, ಬೇರೆ ವಿಷಯವನ್ನು ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಮಹಾರಾಷ್ಟ್ರದ ಮುಖ್ಯ ಮಂತ್ರಿ ಹೆಸರೂ ಕೂಡ ನಾನು ಹೇಳಲಿಲ್ಲ, ಒಂದು ಕೇಸ್ 12 ವರ್ಷ ನಡೆದಿದೆ. Ultimately what happened? ಆದ್ದರಿಂದ ಈ ದೇಶದಲ್ಲಿ ಇಷ್ಟೊಂದು ಸುಲಭ ಸಾಧ್ಯವಲ್ಲ, ಕರಪ್ಷನ್ ಚಾರ್ಜ್ ಮೇಲೆ ರಾಜಕಾರಣಗಳಿಗೆ ಶಿಕ್ಷೆ ಕೊಡತಕ್ಕಂಥ ಹಿನ್ನೆಲೆಯಲ್ಲಿ ಹೇಳಿ, ಮುಂದಕ್ಕೆ ಏನು ಮಾರ್ಪಾಡು ಮಾಡಬೇಕೆಂಬ ಬಗ್ಗೆ ಮುಂದೆ ಬರುತ್ತೇನೆ.

ಅಧ್ಯಕ್ಷರು : ಮಾನ್ಯ ನಂಜೇಗೌಡರ ಮಾತಿನ ಅರ್ಥ, ಅಧಿಕಾರದ ದುರುಪಯೋಗ ಮಾಡಿಕೊಂಡವರ ವಿರುದ್ಧ ಕ್ರಮ ತೆಗೆದುಕೊಂಡರೆ, ಅದು ಪೊಲಿಟಿಕಲ್ ವಿಕ್ಟಿಮೈಸೇಷನ್ ಆಗಲೀ, vindictive attitude ಆಗಲೀ ಆಗುವುದಿಲ್ಲ ಎನ್ನುವುದು ಅದರ ಬಗ್ಗೆ ಮುಂದೆ ಹೋಗುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ : ಇವತ್ತು ಕರ್ನಾಟಕದ ರಾಜಕಾರಣದಲ್ಲಿ, ಲೋಕಾಯುಕ್ತ ಇದೆ. ಅದರ ಉದ್ದೇಶ ಏನು, ಭ್ರಷ್ಟಾಚಾರ ಕಡಿಮೆ ಮಾಡುವುದು ಅಷ್ಟೇ. ಲೋಕಾಯುಕ್ತ ಸಂಸ್ಥೆಯನ್ನು ನಾವೇ ಜಾರಿಗೆ ತಂದೆವು. ಆದರೆ, ಭ್ರಷ್ಟಾಚಾರ ಕಡಿಮೆ ಆಗಿದೆಯೇ, ಆಗಿಲ್ಲ, ಭ್ರಷ್ಟಾಚಾರ ಕಡಿಮೆಯಾಗಲಿ ಎಂಬುದನ್ನು ನೀವು ಒಪ್ಪಿಕೊಳ್ಳುತ್ತೀರಿ, ನಾನೂ ಒಪ್ಪಿಕೊಳ್ಳುತ್ತೇನೆ, ಆದರೆ, ಇವತ್ತು ನಾನಂತೂ ಒಪ್ಪಿಕೊಳ್ಳುವುದಕ್ಕೆ ಸಿದ್ಧನಿಲ್ಲ, ಭ್ರಷ್ಟಾಚಾರ ನಡೆಯುತ್ತಲಲೇ ಇದೆ. ಇದು ಹೇಗೆ ನಡೆಯುತ್ತಿದೆ, ಅದರ ಸ್ವರೂಪ ಹೇಗೆ, ಇದರ ಬಗ್ಗೆ ದೊಡ್ಡ ವಿಶ್ಲೇಷಣೆ ಮಾಡತಕ್ಕ ಅವಶ್ಯಕತೆ ಇಲ್ಲ, ಶಾಸಕರ aasets and liabilities ಬಗ್ಗೆ ವಿವರಣೆ ಕೊಡಬೇಕೆಂದು ಹೇಳಿದ್ದರು. ನಾನೇ ಲೋಕಾಯುಕ್ತದ ಮುಂದೆ ಹೋದೆ. ಬಹುಶಃ ಯಾವ ರಾಜಕಾರಣಿಯೂ ಹೋಗಲಿಲ್ಲ, ಕರ್ನಾಟಕದಲ್ಲಿ ದೇವೇಗೌಡ ಒಬ್ಬರನ್ನು ಬಿಟ್ಟರೆ, ಯಾವ ರಾಜಕಾರಣಿಯೂ ಅಕ್ರಮಗಳಲ್ಲಿ ತೊಡಗಿಲ್ಲ ಎಂದು ಸಾಬೀತಾಗಿದೆ. Law of the land should be applicable to me. ನಾವೇ ಮಾಡಿದಂಥ ಒಂದು ಸಂಸ್ಥೆ. ಅಲ್ಲಿ ಹೋದ ಮೇಲೆ, ಅಲ್ಲಿ ನಡೆದಂಥ ನಡೆವಳಿಕೆಗಳನ್ನು ನೋಡಿ, ನಾನು ಅಂದಿನ ಮುಖ್ಯಮಂತ್ರಿಗಳಿಗೆ ಪತ್ರ ಬರೆದೆ. This act must be amended. That is in writing. He is my own Chief Minister. On the basis of that experience, I am going to bring the amendment.

ಇದನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದೆ. ಇವತ್ತು ಯಾವ ಲೋಕಾಯುಕ್ತ ಬಿಲ್ ಇದೆಯೋ ಅದಕ್ಕೆ ಎಷ್ಟು ತೀವ್ರತರವಾದ ತಿದ್ದುಪಡಿ ತರಬೇಕೋ, ಅದನ್ನು ತನ್ನಿ ಎಂದು ಈಗಾಗಲೇ ಕಾನೂನು ಸಚಿವರಿಗೆ ಹೇಳಿದ್ದೇನೆ. Bring the amendment.

12 ವರ್ಷ ಒಬ್ಬ ಮುಖ್ಯ ಮಂತ್ರಿಯಾಗಿದ್ದವರನ್ನು ಶಿಕ್ಷೆಗೆ ಗುರಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೋ ಆ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. Futile Exercise ಎಂದು ನಾವೇನು ಕರೆಯುತ್ತೇವೆ. ಇದನ್ನು ಮಾಡಲೇಬೇಕೆಂದು ಹೇಳಿದರೆ, ನಾವೆಲ್ಲರೂ ಕುಳಿತು ಯೋಚನೆ ಮಾಡಬೇಕಾಗುತ್ತದೆ. ಇವತ್ತು ನಾನು ರಾಜ್ಯದ ಒಬ್ಬ ಮುಖ್ಯ ಮಂತ್ರಿಯಾಗಿ ಇಲ್ಲಿ ಕುಳಿತುಕೊಂಡಿದ್ದೇನೆ. ಹಿಂದೆ ನಂಜೇಗೌಡರು ಇದ್ದರೆಂದು ಕಾಣುತ್ತದೆ. ರಾಜಾಜಿನಗರದಲ್ಲಿ ಆರು ಮನೆಗಳು ಇವೆಯೆಂದು ಹೇಳಿದ್ದರು, ಇದೇ ಸದನದಲ್ಲಿ ಚರ್ಚೆಯಾಯಿತು. ಆರು ಮನೆಗಳಲ್ಲ, ಆರು ಅಡಿ ಜಾಗವೂ ಇಲ್ಲ, ಆದರೆ, ಚರ್ಚೆ ಮಾತ್ರ ನಡೆಯಿತು. ಯಾರು ಕೇಳುವವರು? ರಾಜಕಾರಣದಲ್ಲಿ ಏನಾಗಿದೆ ಎಂದರೆ, ಈ ಸ್ಥಾನವನ್ನು ನನ್ನಿಂದ ಹೇಗೆ ಕಿತ್ತುಕೊಳ್ಳಬೇಕೆಂದು ಇನ್ನೊಬ್ಬರು, ನಾನು ಇನ್ನೊಬ್ಬರಿಂದ ಹೇಗೆ ಕಿತ್ತುಕೊಳ್ಳಬೇಕೆಂಬ ನಾನು ಇವೆಲ್ಲಾ ನಡೆಯುತ್ತವೆ. ಈ ವಿದ್ಯಮಾನಗಳು ಹೊಸದೇನೂ ಅಲ್ಲ. ಆದ್ದರಿಂದ, ಇವತ್ತು ಯಾವುದೇ ಆಪಾದನೆ, ಯಾರ ಮೇಲೆಯೇ ಬರಲಿ. ಅವರ ಮೇಲೆ ಕಾನೂನು ಚೌಕಟ್ಟಿನಲ್ಲಿ ಗುರಿ ಮಾಡುವಾಗ ಇರತಕ್ಕಂಥ ಕಾನೂನು ಬಲ ಸಾಕಾಗುವುದಿಲ್ಲ ಎನ್ನುವ ಕಾರಣಕ್ಕೆ ಲೋಕಾಯುಕ್ತ ಬಿಲ್ಲನ್ನು ತಿದ್ದುಪಡಿ ಮಾಡುತ್ತೇನೆಂದು. ನಾನು ಈ ರಾಜ್ಯದ ಜನತಾ ದಳದ ಅಧ್ಯಕ್ಷನಾಗಿ ವಚನ ಕೊಟ್ಟಿದ್ದೇನೆ. ಇನ್ನೊಂದು ಮಾತು ಹೇಳುತ್ತೇನೆ. ಈ ಸರ್ಕಾರಕ್ಕೆ ಅಷ್ಟೇ ಕಾಳಜಿ ಇದೆ ಎನ್ನುವುದನ್ನು ಚುನಾವಣೆಗೆ ಮುಂಚೆ ಹೇಳಿದ್ದೇನೆ. ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮತ್ತೆ ಅಫಿಷಿಯಲ್ ಸೀಕ್ರೆಟ್ ಆಕ್ಟ್ ಏನಿದೆ, ಆ ಆಕ್ಟಿನ ಚೌಕಟ್ಟಿನಲ್ಲಿ ಯಾರೇ ಮಂತ್ರಿಗಳಿರಲಿ, ಇವತ್ತು ಯಾವುದೇ ಭ್ರಷ್ಟಾಚಾರದ ಅಪಾದನೆಗೆ ಗುರಿಯಾದರೆ, ನಾವು ಈ ಸಭೆಯಲ್ಲಿ ಆ ಚೌಕಟ್ಟಿನ ರಕ್ಷಣೆ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ, ನಾನು ಮೊದಲೇ ಹೇಳಿದ್ದೇನೆ, ಯಾರೇ ಮಂತ್ರಿ including the Chief Minister or his relatives ಈ ಒಂದು ಅಧಿಕಾರ ಸ್ಥಾನದ ದುರುಪಯೋಗ ಮಾಡಿ, ನಾವು ಯಾವುದೇ ಕಡತದ ಮೇಲೆ ನಿರ್ಣಯ ತೆಗೆದುಕೊಂಡರೆ, ಅವು ನಿಮ್ಮ ಗಮನಕ್ಕೆ ಬಂದರೆ ಈ ಸದನದಲ್ಲಿ ನೀವು ಡಿಮ್ಯಾಂಡ್ ಮಾಡಿ ನಾನು ಅದನ್ನು ಸ್ಪೀಕರ್ ಅವರ ಅನುಮತಿ ಪಡೆದು ಇಡುತ್ತೇನೆ. ಏಕೆಂದರೆ ನಿಮ್ಮನ್ನು ಬಿಟ್ಟು ನಾವು ರಾಜಕಾರಣ ಮಾಡಬೇಕಾದುದಿಲ್ಲ. ಯಾವುದೇ ವಿಷಯವನ್ನು ಈ ಸದನಕ್ಕೆ ಮುಚ್ಚಿಡಬೇಕಾದುದಿಲ್ಲ. 5 ಕೋಟಿ ಜನರು ವಿಶ್ವಾಸವಿಟ್ಟು ಕಳುಹಿಸಿರತಕ್ಕಂಥ 224 ಜನ ಗೌರವಾನ್ವಿತ ಸದಸ್ಯರುಗಳಿಗೆ ದೇಗುಲ ಎಂದು ಏನು ಕರೆಯುತ್ತೇವೆ, ಇಲ್ಲಿ ನಿಮಗೆ ಮರೆ ಮಾಚಿ ಮಾಡಬೇಕಾದುದ್ದು ಏನೂ ಇಲ್ಲ. ಆದರೆ ಎಲ್ಲಾ ಕಡತವನ್ನು ಇಲ್ಲಿ ತಂದಿಡಿ ಎಂದರೆ ಅದು ವಾಸ್ತವಾಂಶಕ್ಕೆ ದೂರವಾಗುತ್ತದೆ. ಎಲ್ಲಿ ಭ್ರಷ್ಟಾಚಾರದ ಅಪಾದನೆಗೆ ಕಂಡುಬರುತ್ತದೆಯೋ ಅದನ್ನು ದಯಮಾಡಿ ಹೇಳಿ. We want to go through that ಎಂದು ಹೇಳಿದರೆ ......

ಶ್ರೀ ಹೆಚ್. ಎನ್. ನಂಜೇಗೌಡ : ತಾವು ಕಾಂಟೆಸ್ಟ್ ಅನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ತಾವು ದೆಹಲಿಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿರಿ.

ಶ್ರೀ ಹೆಚ್. ಡಿ. ದೇವೇಗೌಡ : ಆ ವಿಷಯಕ್ಕೂ ಬರುತ್ತೇನೆ. ಅಫಿಷಿಯಲ್ ಸೀಕ್ರೆಟ್ ಆಕ್ಟ್ ಕೆಳಗಡೆ ನಾವು ರಕ್ಷಣೆ ತೆಗೆದುಕೊಳ್ಳುವುದಿಲ್ಲ, ಎರಡನೆಯದಾಗಿ ಪ್ರಿವೆನ್ಷನ್ ಆಫ್ ಕರಪ್ ಷನ್ ಆಕ್ಟಿಗೆ ಮತ್ತಷ್ಟು ಶಕ್ತಿ ತುಂಬಲಿಕ್ಕೆ ಈ ಸರ್ಕಾರ ತನ್ನ ನಿಲುವನ್ನು ತೆಗೆದುಕೊಳ್ಳುತ್ತದೆಂದು ನಾನು ಹೇಳಿದ್ದೇನೆ. ಈ ವಿಷಯಗಳಲ್ಲಿ ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಏನು ತಿದ್ದುಪಡಿ ತರಬೇಕೋ ಅದನ್ನು ಮುಂದಿನ ಅಧಿವೇಶನದಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಸ್ವಾಮಿ ಕೇಂದ್ರದ ಸಚಿವರೊಬ್ಬರ ಮೇಲೆ ಅಪಾದನೆ ಬಂದಿರುವುದು ನನಗೆ ಗೊತ್ತಿದೆ. ಅದರಲ್ಲಿ ತಿರುಳು ಇಲ್ಲವೆಂದು ನಾನು ವಾದ ಮಾಡುತ್ತಿಲ್ಲ. ಹಾಗೆ ಎಲ್ಲೂ

ಹೇಳಲಿಲ್ಲ, ದೆಹಲಿಯಲ್ಲಿ ನನ್ನನ್ನು ಕೇಳಿದರು. ಪೊಲಿಟಿಕಲ್ ವಿಕ್ಟಿಮೈಸೇಷನ್ ಮಾಡುವುದಿಲ್ಲವೆಂದು ಹೇಳಿದ್ದೀರಿ. ಆದರೆ ಇಂಥಾ ಪ್ರಕರಣದ ಬಗ್ಗೆ ತಮ್ಮ ಅಭಿಪ್ರಾಯವೇನು ಎಂದು, ಪರ್ಸನಲ್ ಆಗಿ ಒಬ್ಬ ವ್ಯಕ್ತಿ ಚಾರಿತ್ರ್ಯ ಹಾಳು ಮಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲವೆಂದು ನಾನು ಹೇಳಿರುವುದು ನಿಜ. ಅದು ಹೇಗೆ ಸೃಷ್ಟಿಯಾಯಿತು? ಎಲ್ಲಿ ಸೃಷ್ಟಿಯಾಯಿತು? ಅದಕ್ಕೆ ಕಾರಣ ಯಾರು? ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಖರ್ಗೆಯವರು ರೆವಿನ್ಯೂ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಮಾನ್ಯ ವೈ. ರಾಮಕೃಷ್ಣರವರು ಮತ್ತು ಜೀವರಾಜ ಆಳ್ವರವರೂ ಕೂಡಾ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಇವತ್ತು ನಾನು ಕೇಳುವುದು, ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಕೆಳಗಡೆ 12 ಸಾವಿರ ರೂಪಾಯಿಗಳ ಏನು ಮಿತಿ ಹಾಕಿದ್ದಾರೋ ಅದನ್ನು ಬೆಂಗಳೂರು ಸುತ್ತಮುತ್ತ ಉಲ್ಲಂಘನೆ ಮಾಡಿರುವ 5 ನೂರು ಕೇಸ್ ಬೇಕೆ ಒಂದು ಸಾವಿರ ಕೇಸ್ ಬೇಕೇ? 2 ಸಾವಿರ ಕೇಸ್ ಬೇಕೆ?

ಶ್ರೀ ಬಿ. ಎಸ್. ಯಡಿಯೂರಪ್ಪ : ಅದು ಹಾಗೆ ನಡೆದುಕೊಂಡು ಹೋಗಬೇಕೆ?

ಶ್ರೀ ಹೆಚ್.ಡಿ. ದೇವೇಗೌಡ : ಹಾಗೇ ನಡೆದುಕೊಂಡು ಹೋಗಬೇಕೆಂದು ನಾನು ವಾದ ಮಾಡುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಿ ಸ್ವಚ್ಛತೆಗೆ ತರುತ್ತೇನೆಂಬ ಧೀರೋದಾತ್ತ ಮಾತು ತಮ್ಮ ಬಾಯಿಯಿಂದ ಬರಬೇಕಾಗಿತ್ತು. ತಾವು ಮುಂದುವರಿಸುತ್ತಿರುವಂಥ ರೀತಿ ಹೇಗಿದೆ ಎಂದರೆ ಇಂಥಾ 500 ಘಟನೆಗಳು ಇವೆ, ಕೇಂದ್ರ ರೈಲ್ವೆ ಸಚಿವರು ಘಟನೆ ಏನು ಮಹಾ ಎನ್ನುವ ಧಾಟಿಯಲ್ಲಿ ತಾವು ಮಾತನಾಡಿದರೆ ಆ ಸ್ಥಾನಕ್ಕೆ ಗೌರವ ಬರುವುದಿಲ್ಲವೇನೋ ಎನ್ನುವ ಭಾವನೆ ನನಗೆ ಉಂಟಾಗಿದೆ. ಜನ ನಂಬಿ ತಮ್ಮನ್ನು ಅಲ್ಲಿ ಕೂರಿಸಿದ್ದಾರೆ. ದಯಮಾಡಿ ಆ ಮಾತು ತಮ್ಮಿಂದ ಬರಬಾರದು. ಕೊಲೆ ಮಾಡುವುದೂ ಅಪರಾಧ ಹಾಗೂ ಅದಕ್ಕೆ ಬೆಂಬಲ ಕೊಡುವುದೂ ಅಪರಾಧವಾಗುತ್ತದೆ.

ಅಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯನ್ನು ಪೂರ್ಣ ಮಾಡಿಲ್ಲ. ಅದಕ್ಕೂ ಮೊದಲೇ ಅವರು ಹೀಗೆ ಹೇಳುತ್ತಾರೆಂದು ಊಹೆ ಮಾಡಿಕೊಂಡು ವಿರೋಧ ಪಕ್ಷದ ನಾಯಕರಾದ ತಾವು ಈಗಲೇ ಪ್ರತಿಕ್ರಿಯೆ ವ್ಯಕ್ತಪಡಿಸುವುದು ಸಾಧುವಾದುದಲ್ಲ. ಸಭಾನಾಯಕರು ತಮ್ಮ ಪೂರ್ಣ ಹೇಳಿಕೆ ಕೊಟ್ಟಾದ ಮೇಲೆ ಅದರ ಆಧಾರದ ಮೇಲೆ ತಾವು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತ ಮಾಡಬಹುದೆಂದು ವಿನಂತಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಬಗ್ಗೆ ದೆಹಲಿಯಲ್ಲಿ ಆಗಲೇ ಹೇಳಿಕೆ ಕೊಟ್ಟಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ : ಪೊಲಿಟಿಕಲ್ ವಿಕ್ಟಿಮೈಸೇಷನ್ ಅಂದರೆ ಇದೇ. ಒಬ್ಬರ ಮೇಲೆ ಒಬ್ಬರು ರಾಡಿ ಎರಚುವುದಕ್ಕೆ ನಾವು ಸಿದ್ಧರಿದ್ದೇವೆ. ಈ ದೇಶದ ರಾಜಕಾರಣದ ಒಂದು ಸನ್ನಿವೇಶದಲ್ಲಿ 2 ಸಾವಿರ ಎಕರೆ, 1 ಸಾವಿರ ಎಕರೆ ಭೂಮಿ ಇಟ್ಟುಕೊಂಡಿರುವವರ ಬಗ್ಗೆ ನಾವು ಚರ್ಚೆ ಮಾಡುವುದಿಲ್ಲ, ಅದೇ ಯಾವನೋ ಒಬ್ಬ ರಾಜಕಾರಣಿ 5 ಎಕರೆ ಭೂಮಿ ತೆಗೆದುಕೊಂಡರೆ ಚರ್ಚೆ ಮಾಡಬೇಕು. ಸಾವಿರ, ಎಂಟನೂರು ಎಕರೆ ಜಮೀನಿನಲ್ಲಿ ಫಾರಂ ಮಾಡಿರುವವರು ನಮ್ಮ ರಾಜ್ಯದಲ್ಲಿ ಇದ್ದಾರೆ. ಅವರ ಬಗ್ಗೆ ಚರ್ಚೆ ಮಾಡುವುದಕ್ಕೆ ನಮಗೂ ಕೂಡ ಧೈರ್ಯ ಸಾಲದು. ಪ್ರತಿಯೊಂದು ರಾಜಕೀಯ ಪಕ್ಷದ ಮುಖಂಡರುಗಳಿಗೂ ನಾನಾ ತರಹದ ಎಡರು ತೊಡರುಗಳಿದ್ದಂತೆ. ಇದು ಎಲ್ಲರಿಗೂ ಗೊತ್ತಿದೆ. ಆದರೆ ಹೇಳಲಿಕ್ಕೆ ತಯಾರಿಲ್ಲ. ಈ ವಿಷಯದ ಬಗ್ಗೆ ಚರ್ಚೆ ಬಂದು ಈಗಾಗಲೇ ದೊಡ್ಡ ವ್ಯಾಖ್ಯಾನ

ಆಗಿದೆ. ಇದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು ಎಂಬ ಬಗ್ಗೆ ಘೋಷಣೆ ಮಾಡಬೇಕಾಗುತ್ತದೆ. ದೇಶದ ಉದಾರೀಕರಣದ ಆರ್ಥಿಕ ನೀತಿ ಹಿನ್ನೆಲೆಯಲ್ಲಿ ಖಾಸಗಿ ಬಂಡವಾಳವನ್ನು ನಾವು ಆಕರ್ಷಣೆ ಮಾಡಬೇಕೆಂಬ ಬಗ್ಗೆ ಒಂದೇ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ಏನು ಮಾಡಿವೆ ಎಂದರೆ ಈ ಕ್ಲಾಸ್ ಏನಿದೆ ನಿರ್ಬಂಧ ಹಾಕಿರುವುದನ್ನು ಅವರು ಸಡಿಲ ಮಾಡಿದ್ದಾರೆ. ಭೂ ಸುಧಾರಣಾ ಕಾನೂನನ್ನು ಸಡಿಲ ಮಾಡಿ ಹೊಸ ಹೊಸ ಕೈಗಾರಿಕೆಗಳವರು ಹೆಚ್ಚು ಬಂಡವಾಳ ಹೂಡುವ ಹಾಗೆ ಅಲ್ಲಿ ಮಾಡಿದ್ದಾರೆ. ಅಲ್ಲಿರುವ ಭೂಸುಧಾರಣಾ ಕಾನೂನಿನ ಕೆಲವು ಕ್ಲಾಸ್‌ಗಳನ್ನು ಎಕ್ಸಂಪ್ಷನ್ ಮಾಡಿದ್ದಾರೆ. ಅದೇ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕ ರಾಜ್ಯದ ಕೈಗಾರಿಕಾ ನೀತಿಯನ್ನೂ ನಾವು ರೂಪಿಸುವುದಕ್ಕಾಗಿ ಕೆಲವು ಕಾನೂನುಗಳಿಗೆ ಮಾರ್ಪಾಡು ಮಾಡಬೇಕಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಹೇಳಿದ್ದೇನೆ. ಸ್ಪೆಸಿಫಿಕ್ ಆಗಿ ಈ ಹಗರಣದ ಬಗ್ಗೆ ಹೇಳುವುದಾದರೆ, ಇಧರ ಬಗ್ಗೆ ತನಿಖಾ ವರದಿ ಕೊಡಲು ಈಗಾಗಲೇ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಲಾಗಿದೆ. ಅದರ ವರದಿ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ನಾನು ಒಂದು ಮಾತನ್ನು ಹೇಳುವುದಾದರೆ ನಮ್ಮ ದೇಶದಲ್ಲಿ ಪೊಲಿಟಿಕಲ್ ವಿಕ್ಟಿಮೈಸೇಷನ್ ನಡೆದಿದೆ. ನಾನು ಇಷ್ಟೇ ತಮಗೆ ಹೇಳುವುದು ನನ್ನ ಸರ್ಕಾರ ಏನಾದರೂ ತಪ್ಪು ಮಾಡಿದರೆ ಯಾವುದೇ ಛಾವಟಿ ನಿಮಗೆ ಸಿಕ್ಕಿದರೆ ಯಾವುದೇ ಸಂದರ್ಭದಲ್ಲಿ ನೀವು ಅದನ್ನು ಉಪಯೋಗಿಸಬಹುದು. ಇನ್ನು ಮುಂದೆ ಜನ ಸಾಮಾನ್ಯರು ಯಾವುದೇ ಆಫೀಸ್‌ಗೆ ಹೋಗಲಿ, ಪೋಲೀಸ್ ಸ್ಟೇಷನ್‌ಗೆ ಹೋಗಲಿ, ಬಿ.ಡಿ.ಎ. ಆಫೀಸ್‌ಗೆ ಹೋಗಲಿ ಅವನಿಗೆ ಅನುಕೂಲವಾಗಬೇಕೆನ್ನುವ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ. ನಮ್ಮ ಹಿಂದೂಸ್ಥಾನದ ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡರೆ ನಮ್ಮ ಕರ್ನಾಟಕದಲ್ಲಿ ಸಾಕಷ್ಟು ಉತ್ತಮ ಅಧಿಕಾರಿಗಳಿದ್ದಾರೆಂದು ಹೆಮ್ಮೆಯಿಂದ ಹೇಳಬೇಕಾಗಿದೆ. ಇವರ ಜೊತೆಗೆ 2 ಮತ್ತು 3ನೇ ದರ್ಜೆ ಅಧಿಕಾರಿಗಳೂ ಸಹಾ ಸಾಕಷ್ಟು ಸಂಖ್ಯೆಯಲ್ಲಿ ಪ್ರಾಮಾಣಿಕರಿದ್ದಾರೆ. ಆದರೆ ದುರಂತ ಎಂದರೆ ಕೆಳಗಡೆ ಇರತಕ್ಕಂಥ ಅಧಿಕಾರಿಗಳಿಗೆ ರಾಜಕೀಯ ಒತ್ತಡ ಬಂದು ಅವರು ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ.

ಇದರ ಜೊತೆಗೆ ಅವರ ಕರ್ತವ್ಯದಲ್ಲಿ ಕೂಡ ನುಣುಚಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಂಥ ಕೆಲವು ಸುಧಾರಣೆಗಳನ್ನು ನಾವು ತರಲೇಬೇಕಾಗುತ್ತದೆ. ಇದು ವಿಧಾನ ಸೌಧದಲ್ಲಿ ಯಾರೋ ಒಬ್ಬ ಸೆಕ್ರೆಟರಿಯನ್ನು ಬದಲಾವಣೆ ಮಾಡಿ ಅವರಿಂದ ನಾವು ತುಂಬಾ ಬದಲಾವಣೆಗಳನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೈಕೋರ್ಟ್ ಆರ್ಡರ್‌ಗಳನ್ನು ಇಂಪ್ಲಿಮೆಂಟ್ ಮಾಡುವ ಕೆಲವು ಸಂದರ್ಭಗಳು ಬಂದಾಗ ಡೆಪ್ಯುಟಿ ಕಮಿಷನರ್‌ಗಳು ಹೇಳುತ್ತಾರೆ. " I am helpless to implement the High Court order."

ನಾನು ಇಲ್ಲಿ ರಿಕಾರ್ಡ್ಗಳನ್ನು ಇಟ್ಟುಕೊಂಡಿದ್ದೇನೆ. ಹೀಗೆ ಹೈಕೋರ್ಟ್ ಆರ್ಡರ್ ಗಳನ್ನು, if the Deputy Commissioner of a district says that " I am helpless to implement the High Court order, ಏನು ಮಾಡಬೇಕು. ನಾನು ಈ ಸದನದ ಯಾವುದೇ ಒಬ್ಬ ಸದಸ್ಯರನ್ನು ಕುರಿತು ಮಾತನಾಡುವುದಿಲ್ಲ. This Government will never allow such a thing to happen. I will take that responsibility.

ಅವನು ಯಾವ ಡೆಪ್ಯುಟಿ ಕಮೀಷನರ್‌ನೇ ಇರಲಿ, If he is not going to act in accordance with law, his suspension order will go. I am not under the mercy of any Deputy Commissioner or the S.P.

ನಮ್ಮ ಸರಕಾರಕ್ಕೆ ಅಂಥವರಿಂದ ಯಾವುದೇ ದಾಕ್ಷಿಣ್ಯ ಇಲ್ಲ. ಹೈಕೋರ್ಟ್ನ ಆರ್ಡರನ್ನು ಜಾರಿಗೆ ತರಬೇಕೆಂದರೆ ಆಗುವುದಿಲ್ಲ ಎಂದು ಹೇಳುವ, ಜಾರಿಗೆ ಕೊಡಲು ಸ್ಥಳೀಯ ಎಂ.ಎಲ್.ಎ. ನಮ್ಮನ್ನು ಬಿಡುವುದಿಲ್ಲ. If this is the attitude, of the government, I am sorry.

ನನ್ನ ಮುಂದೆ ರಿಕಾರ್ಡ್ಗಳನ್ನು ಇಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಆದ್ದರಿಂದ ನಾನು ಇಲ್ಲಿ ಯಾರ ಹೆಸರನ್ನೂ ಕೂಡ ಎತ್ತಿಲ್ಲ, ಅಂಥ ಯಾವ ಸನ್ನಿವೇಶ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರು ಬಹಳ ಪ್ರಾಮುಖ್ಯವಾದ ವಿಚಾರವನ್ನು ಹೇಳಿದ್ದಾರೆ. ಯಾವುದೇ ಜಿಲ್ಲಾಧಿಕಾರಿ ಉಚ್ಚ ನ್ಯಾಯಾಲಯದ ಆಜ್ಞೆಯನ್ನು ನಾನು ಜಾರಿ ಮಾಡುವುದಿಲ್ಲ, ಅದಕ್ಕೆ ಸ್ಥಳೀಯ ಶಾಸಕರ ಒತ್ತಡ ಇದೆ ಎಂದು ಹೇಳಿದರೆ, ಈ ವಿಚಾರವು ಬಹಳ ಗುರುತರವಾದುದಾಗುತ್ತದೆ. ನಾವು ಸರಕಾರ ಮಾಡಿದ್ದೇವೆ. ನನ್ನ ಗಮನಕ್ಕೆ ಈ ವಿಚಾರವು ಒಂದು ದಿವಸವೂ ಬಂದಿಲ್ಲ, ಅಂಥಾದ್ದು ಇದ್ದರೆ I would have sacked that Deputy Commissioner. I think you must show the guts to sack and to suspend that Deputy Commissioner right now. Don't delay.

ಶ್ರೀ ಹೆಚ್. ಎನ್. ನಂಜೇಗೌಡ : ನಾನು ತಮ್ಮನ್ನು ಪ್ರಶ್ನೆ ಮಾಡುವ ರೀತಿಯಲ್ಲಿ ಇಲ್ಲ, ಏಕೆಂದರೆ ತಾವು ಬಹಳ ಚೆನ್ನಾಗಿ ಮಾತನಾಡುತ್ತಾ ಇದ್ದೀರಿ. ನಿಮ್ಮ ಧ್ವನಿ ಏನಿದೆಯಲ್ಲಾ ಅದು ಬಹಳ ಅರ್ಥಪೂರಿತವಾದುದು. ಅದನ್ನು ಬರೆದರೆ ಏನೂ ಅರ್ಥವಾಗುವುದಿಲ್ಲ, ಒಂದು ರೀತಿಯಲ್ಲಿ ಸಂಗೀತ ಬರೆದ ಹಾಗೆ. ಸಂಗೀತವನ್ನು ರುಚಿಸಬೇಕಾದರೆ ಹಾಡು ಕೇಳಬೇಕಾಗುತ್ತದೆ. ನೀವು ಈಗ ಶಾಸಕರ ಒತ್ತಾಯ ಎಂದು ಹೇಳಿದ್ದೀರಿ. ಹಾಗೆ ತಾವುಗಳು ಹೇಳಿದ ಮೇಲೆ ಆ ಕುರಿತಾದ ಎಲ್ಲಾ ವಿಚಾರಗಳನ್ನು ಹೊರಕ್ಕೆ ಬರಬೇಕು.

Sri H.D. Deve Gowda : Shall I read this?

Sri H.N. Nanje Gowda : Please , Otherwise, what will be the estimate of the Legislators in the eyes of the public?

ಶ್ರೀ ವಾಟಾಳ್ ನಾಗರಾಜ್ : ತಾವುಗಳು ಆ ರೀತಿಯಲ್ಲಿ ಹೇಳುವುದರ ಮೂಲಕ ಸತ್ಯ ಬಯಲಾಗಲಿ ಮತ್ತು ಸಾರ್ವಜನಿಕವಾಗಿ ಹೊರಬರಲಿ. ಅಂಥ ಶಾಸಕರು ಯಾರು? ಏನಾಗಿದೆ ಎಂಬ ವಿಚಾರ ಹೊರಗೆ ಬಂದು ಬಿಡಲಿ.

ಶ್ರೀ ಹೆಚ್. ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಇದು ನನ್ನ ಕಾಲದಲ್ಲಿ ರಿಪೋರ್ಟ್ ಆಗಿರುವುದು ಅಲ್ಲ, ಏಕೆಂದರೆ ಅನಾವಶ್ಯಕವಾಗಿ ಈ ಸದನದಲ್ಲಿ ಯಾರ ಹೆಸರನ್ನೂ ತೆಗೆದುಕೊಂಡು ಮಾತನಾಡಲು ಹೋಗಲಿಲ್ಲ, ನಿನ್ನೆ ನಾನು ಟೀಕೆಗೆ ಒಳಗಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರದಲ್ಲಿ ಯಾವ ಶಾಸಕರು ಅಡ್ಡಿ ಪಡಿಸಿದರು, ಯಾವ ಜಿಲ್ಲಾ ಅಧಿಕಾರಿ ಆರ್ಡರನ್ನು ಜಾರಿಗೆ ಕೊಟ್ಟಿಲ್ಲ ಎಂಬುದು ಹೊರಗೆ ಬರಲಿ. ಇದೊಂದು ಒಳ್ಳೆಯ ಸಂಪ್ರದಾಯವಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ಇದು ಆದುದು ನನ್ನ ಸ್ವಂತ ಜಿಲ್ಲೆಯಲ್ಲಿಯೇ. ಅದು ಬೆಂಗಳೂರು ಜಿಲ್ಲೆಯಲ್ಲ, ಹಾಸನ ಸ್ವಂತ ಜಿಲ್ಲೆಯಲ್ಲಿ ಸ್ಟೇ ಆರ್ಡರ್‌ಗಳನ್ನು ಅಟ್ಯಾಚ್ ಮಾಡಿ ಕಾಪಿಗಳನ್ನು, ಹಿಂದಿನ ಸರಕಾರಕ್ಕೆ ನಾನೇ ನನ್ನ ಕವರಿಂಗ್ ಲೆಟರ್ ಇಟ್ಟು ಬರೆದಿರತಕ್ಕಂಥಾದ್ದು ಇದೆ. ನಾನು ಬರುವುದಕ್ಕಿಂತ ಮುಂಚೆ

ಅಧಿಕಾರಿಯ ಟ್ರಾನ್ಸ್‌ಫರ್ ಕೂಡ ಆಗಿದೆ. He has already been transfferred now. ನಾನು ಬರುವುದಕ್ಕೆ ಮುಂಚೆ.

ಶ್ರೀ ವಾಟಾಳ್ ನಾಗರಾಜ್ : ಈ ವಿಷಯವನ್ನು ಅಷ್ಟು ಸುಲಭವಾಗಿ ಬಿಡುವುದಕ್ಕಾಗುವುದಿಲ್ಲ, ಕೇವಲ ಅಧಿಕಾರಿಯ ವರ್ಗಾವಣೆಯಿಂದ ಸಮಸ್ಯೆಯು ಬಗೆಹರಿಯುವುದಿಲ್ಲ, ನಾನು ಅತ್ಯಂತ ಗುರುತರ ಮತ್ತು ಜವಾಬ್ದಾರಿಯುತವಾಗಿ ಹೇಳುತ್ತಾ ಇದ್ದೇನೆ, ಇದೊಂದು ಗಂಭೀರವಾದಂಥ ಪ್ರಶ್ನೆ. ಈ ಅಧಿಕಾರಿ ಯಾರು? ಇಂಥ ತಪ್ಪು ಮಾಡಿದವರಿಗೆ ಯಾವ ಕ್ರಮ ಜರುಗಿಸಿದ್ದೀರಿ? ಹೈಕೋಟ್ ಆರ್ಡರ್‌ನ್ನು ನಾನು ಒಪ್ಪುವುದಿಲ್ಲ, ಅದಕ್ಕೆ ಮಾನ್ಯತೆಯನ್ನು ಕೊಡುವುದಿಲ್ಲ ಎಂದು ಹೇಳುವುದಾದರೆ, ಇದು ಬಹಳ ತೀವ್ರವಾದ ವಿಚಾರ. ಆ ಅಧಿಕಾರಿಯನ್ನು ಎಲ್ಲಿದ್ದರೂ ಬಿಡಬಾರದು. ಈ ಸಂದರ್ಭದಲ್ಲಿ ಒಂದು ತೀರ್ಮಾನವನ್ನು ಕೈಗೊಳ್ಳಿ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಅವರು ಎರಡು ವಿಚಾರಗಳನ್ನು ಹೇಳಿದ್ದನ್ನು ಗಮನಕೊಟ್ಟು ಕೇಳಿದ್ದೇನೆ. ಮೊದಲು ಏನು ಹೇಳಿದರು ಅಂದರೆ, ಸಾಮಾನ್ಯವಾಗಿ ಬೆಂಗಳೂರು ಸುತ್ತ ಯಾರಾದರೂ ಜಮೀನು ಮಾಡುತ್ತಾರೆ, ರಾಜಕಾರಣಿಗಳು ಯಾರಾದರೂ ಸ್ವಲ್ಪ ಜಮೀನು ಮಾಡಿದರೆ, ... ಈಗ ಯಾರೋ ಏನೋ ಮಾಡುತ್ತಾರೆ ಎಂಬ ವಿಚಾರ ಅಲ್ಲ, ಕೊತವಾಲ್ ರಾಮಚಂದ್ರ ಕೊಲೆ ಮಾಡುತ್ತಾನೆ ಅಂದರೆ ನಂಜೇಗೌಡ ಮಾಡುವುದಕ್ಕಾಗುವುದಿಲ್ಲ. People don't expect Nanje Gowda to become a murderer. They may tolerate Kotwal Ramachandra. That is not the expectation of the people. ಒಬ್ಬ ರಾಜಕಾರಣಿ ಬೆಂಗಳೂರು ಸುತ್ತ ಜಮೀನು ಮಾಡುತ್ತಾನೆ ಅಂದರೆ that is not the expectation of the people. Caesar's wife must be above board. This is No.1.

ನೀವು ಆಡಿದ ಧ್ವನಿಯಲ್ಲಿ ಇದು ಏನೋ ಮಾಮೂಲು, ಏನೋ ಅನಾಹುತವಲ್ಲ, ಅಂದರೆ ಹೇಳಿ. law makers, if we violate the law are you to tolerate?

ಯಾರೇ ರಾಜಕಾರಣಿ ಬೆಂಗಳೂರಿನ ಸುತ್ತ ಜಮೀನು ಮಾಡಿಬಿಟ್ಟರೆ; you scrap that land Reforms Act.

ನಾನೇನು ಒಂದು ಎಕರೆ ಜಮೀನು ಮಾಡಲು ಹೋಗಲಿಲ್ಲ. Any man will become angry if he is a man of righteous indignation.

ಎರಡನೆಯದು ಹೈಕೋರ್ಟಿನ ತೀರ್ಮಾನವನ್ನು ಅನುಷ್ಠಾನಕ್ಕೆ ತರುವುದಕ್ಕೆ ಶಾಸಕರಾದವರು ಅಡ್ಡ ಬಂದಾ ಆತನಿಂದಾಗಿ ಒಬ್ಬ ಡಿ.ಸಿ. ಅನುಷ್ಠಾನಕ್ಕೆ ತರಲಿಲ್ಲ ಕಂಟೆಂಪ್ಟ್ ಆಫ್ ಕೋರ್ಟ್ ಆದರೆ ಅದು ವೆರಿ ಸೀರಿಯಸ್ ವಿಷಯ. ಬರೀ ಅಧಿಕಾರಿದಷ್ಟೇ ಆಗಲಿಲ್ಲ, ಶಾಸನಸಭೆಗೆ ಸದಸ್ಯರಾಗಿ ಬರುವವರ ಬಗ್ಗೆ ಜನಕ್ಕೆ ಏನು ಗೌರವ ಬರುತ್ತದೆ? ಅಟ್‌ಲೀಸ್ಟ್ ನಮ್ಮ ಸಭಾನಾಯಕರ ನಾಯಕತ್ವದಲ್ಲಾದರೂ ನಮ್ಮ ಸಭೆ ಸದಸ್ಯರಿಗೆ ಸಾರ್ವಜನಿಕವಾಗಿ ಗೌರವ ಬರುವ ರೀತಿಯಲ್ಲಿ ನಾವು ನಡೆದುಕೊಳ್ಳುವಂತಹ ಪರಿಪಾಠ ಬರುವ ಲೆಕ್ಕದಲ್ಲಾದರೂ ನಾವು ಕ್ರಮ ಕೈಗೊಳ್ಳಬೇಕಾಗಿದೆ. ದಯವಿಟ್ಟು ಇದನ್ನು ಇಷ್ಟಕ್ಕ ನಿಲ್ಲಿಸಬೇಡಿ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಹೆಸರನ್ನು ಹೇಳಬೇಕು. ಸ್ಟೇ ಆರ್ಡರ್ ಹೇಳಬೇಕು ಅಂದರೆ ನಾನು ಹೇಳಲಿಕ್ಕೆ ಸಿದ್ಧನಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಒಬ್ಬ ಸೀನಿಯರ್ ಜಿಲ್ಲಾಧಿಕಾರಿ, ಶಾಸಕ ಒತ್ತಡ ತರುತ್ತಾರೆ ಆದರಿಂದ ನಾನು ಅನುಷ್ಠಾನ ಮಾಡಲಿಲ್ಲ ಎಂದು ಹೇಳಿದರೆ, you must first keep that Deputy Commissioners under suspension. Don't spare

him. if you really mean. ಅದು ಯಾವ ವಾತಾವರಣದಲ್ಲಿ ಇದೆ, ನಮಗೆ ಗೊತ್ತಿಲ್ಲ, ಆದರೆ ನಮ್ಮ ಗಮನಕ್ಕೆ ಬರಲಿಲ್ಲ. ಅಂಥಾದ್ದು ಬಂದಿದ್ದರೆ we would not have spared that Deputy Commissioner. ಆತ ಜಿಲ್ಲಾಧಿಕಾರಿಯಾಗಲಿಕ್ಕೆ ಒಂದು ನಿಮಿಷವೂ ಅವನಿಗೆ ಅರ್ಹತೆ ಇಲ್ಲ. ದಯಮಾಡಿ ಆ ಜಿಲ್ಲಾಧಿಕಾರಿ ಜವಾಬ್ದಾರಿಯನ್ನು ಅವನಿಗೆ ವಹಿಸಬೇಡಿ. ಅದನ್ನು ಪರಿಶೀಲನೆ ಮಾಡಿ. ತಮ್ಮ ಅನುಭವಕ್ಕೆ ಆ ಜಿಲ್ಲಾಧಿಕಾರಾರಿ ಹೇಳಿದುದ್ದು ಹೌದಾದರೆ, you own the responsibility to keep him under suspension. Don't spare him. None of us are going to defend.

ಶ್ರೀ ಎಚ್.ಡಿ. ದೇವೇಗೌಡ : ನಾನು ಮಾನ್ಯ ಮಾಜಿ ಮುಖ್ಯಮಂತ್ರಿಗಳಲ್ಲಿ ಒಂದೇ ಶಬ್ದ ಹೇಳುತ್ತಿದ್ದೇನೆ, ನಾನು ಯಾರ ಹೆಸರನ್ನೂ ತೆಗೆದು ವಾದ ಮಾಡಲಿಕ್ಕೆ ಹೋಗಲಿಲ್ಲ. ಆದರೆ ಒಂದು ಶಬ್ದ ಏನು ಹೇಳಿದೆ ಎಂದರೆ ಜಿಲ್ಲಾಧಿಕಾರಿಗಳಾದವರು ಪೋಲೀಸ್ ಸೂಪರಿಂಟೆಂಡೆಂಟ್ ಆದವರು ರಾಜಕೀಯ ಒತ್ತಡಕ್ಕೆ ಮಣಿದು ಇಲ್ಲಿಂದ ಮುಂದಕ್ಕೆ ಹೋಗಲು ಬಿಡುವುದಿಲ್ಲ, ಹಿಂದೆ ಮಾಡಿದ್ದವರ ಬಗ್ಗೆ ಕ್ರಮ ತೆಗೆದುಕೊಳ್ಳಲೂ ನಾನು ಹಿಂದೆ ಮುಂದೆ ನೋಡುವುದಿಲ್ಲ ಎಂದು. ಈವತ್ತು ವಿಲೇಜ್ ಅಕೌಂಟೆಂಟ್ ರೆವಿನ್ಯೂ ಇನ್ಸ್‌ಪೆಕ್ಟರ್ ಹೆಡ್ ಕಾನ್‌ಸ್ಟೇಬಲ್ ಹಿಡಿದುಕೊಳ್ಳುವ ಅವಶ್ಯಕತೆ ಬೇಕಾಗಿಲ್ಲ. ಆದರೆ ಒಂದೇ ಒಂದು ಎಂದರೆ ಐಎಎಸ್‌ಐಪಿಎಸ್ ಕೇಡರ್‌ಗಳನ್ನು ಸೃಷ್ಟಿ ಮಾಡಿದ್ದುದು ಅವರು ರಾಜಕೀಯ ಒತ್ತಡಕ್ಕೆ ಮಣಿಯದೇನೇ ಈ ದೇಶದಲ್ಲಿ ಆಡಳಿತ ನಿರ್ವಹಣೆ ಮಾಡುವಂತಹ ಕಾಲದಲ್ಲಿ ತಾವು ತಮ್ಮ ಕಾನೂನಿಗೆ ತಲೆಬಾಗಿ ನಿರ್ಣಯ ಮಾಡಬಕೇಂಬುದೇ ನನ್ನ ಆಸೆ. ಆ ಹಿನ್ನೆಲೆಯಲ್ಲಿ ಇಲ್ಲಿಂದ ಮುಂದಕ್ಕೆ ಅಂಥಹ ನಾನು ಅವಕಾಶ ನಾನು ಕೊಡುವುದಿಲ್ಲ.

ಜಿಲ್ಲಾಧಿಕಾರಿಗಳು ಎಸ್‌ಪಿಗಳು ಜವಬ್ದಾರರಾಗಬೇಕಾಗುತ್ತದೆ. ಯಾವುದೇ ಒಂದು ಸನ್ನಿವೇಶದಲ್ಲಿ ಕೆಳಗಡೆಯವನು ಏನೇ ಮಾಡಿದರೂ ಅದು ಅವನ ಲುಕೌಟ್, ನನ್ನದಲ್ಲ, ವಿಲೇಜ್ ಅಕೌಂಟೆಂಟ್ ಪಹಣಿ ಚೇಂಜ ಮಾಡಿದರೆ ಅಥವಾ ಇನ್ನೇನೋ ಮಾಡಿದರರೆ ಆ ವಿಲೇಜ್ ಅಕೌಂಟೆಂಟನ್ನು ಪನಿಷ್ ಮಾಡುವುದಕ್ಕೆ ಬದಲಾಗಿ ನನ್ನ ಮುಂದೆ ಇರುವುದು ಈ ರಾಜಕೀಯ ನಿರ್ಣಯವನ್ನು ಈವತ್ತು ಅಧಿಕಾರಿಗಳು ಪ್ರತಿಪಾದನೆ ಮಾಡಬೇಕೆಂದು ನಾನು ಹೇಳುವುದಿಲ್ಲ, ಅವನು ಕಾನೂನಿಗೆ ಮಾತ್ರ ತಲೆಬಾಗಬೇಕು. ಯಾವುದೇ ವ್ಯಕ್ತಿಯನ್ನು ಕುರಿತು ನಾನು ಅವಹೇಳನ ಮಾಡಲಿಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಆ ಶಾಸಕನ ಹೆಸರು ಹೇಳಬೇಕು. ಇಲ್ಲದೇ ಇದ್ದರೆ ಉನ್ನತ ಸ್ಥಾನದಲ್ಲಿರುವ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಳಂಕ ತರುವ ಮಾತು ಆಗುತ್ತದೆ. ಆದ್ದರಿಂದ ಆ ರೀತಿಯ ವ್ಯಕ್ತಿ ಇದ್ದರೆ ಅವನು ಒಂದು ಕ್ಷಣ ಜಿಲ್ಲಾಧಿಕಾರಿಯಾಗಿ ಮುಂದುವರಿಯಲು ಹಕ್ಕಿಲ್ಲ ಅವನಿಗೆ. ಸಸ್ಪೆಂಡ್ ಮಾಡಬೇಕಾಗುತ್ತದೆ. ನಾವು ಶಾಸಕರೂ ಎಚ್ಚರವಹಿಸಲು ಅನುಕೂಲವಾಗುತ್ತದೆ. ತಾವು ಮುಖ್ಯಮಂತ್ರಿಗಳಾದ ದಿನಾಂಕದಿಂದ ಮುಂದೆ ಹೀಗೆ ಮಾಡುತ್ತೇನೆಂದಲ್ಲ, ಹಿಂದೆ ಏನು ನಡೆದಿದೆ ಅದನ್ನೂ ನೋಡುವ ಜವಾಬ್ದಾರಿ ನಿಮ್ಮ ಮೇಲಿದೆ. ಅದಕ್ಕಾಗಿ ಇದನ್ನು ಮುಚ್ಚಿಡುವ ಅಗತ್ಯ ಇಲ್ಲ, ಇಲ್ಲದೇ ಇದ್ದರೆ ನಾವು ನಿಮ್ಮ ಮೇಲೆ ಸಂಶಯ ಪಡುವಂತಹ ಪರಿಸ್ಥಿತಿಗೆ ತರಬೇಡಿ. ಈಗಾಗಲೇ ನೀವು ಒಬ್ಬ ಶಾಸಕನ ಹೆಸರು ತಂದಿದ್ದೀರಿ. ಒಬ್ಬ ಜಿಲ್ಲಾಧಿಕಾರಿಯ ಹೆಸರು ತಂದಿದ್ದೀರಿ, ಹಾಗಿದ್ದ ಮೇಲೆ ಆ ಪೂರ್ಣ ವಿವರ ಸದನಕ್ಕೆ ನೀವು ಕೊಡಬೇಕಾಗುತ್ತದೆ.

SRI QUMURUL ISLAM : Otherwise, it will be a suspicion on many of the Deputy Commissioners. To-morrow the press will write stories.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರನ್ನೋ ಬೆದರಿಸುವುದಕ್ಕೆ ಈ ಅಸ್ತ್ರವನ್ನು ಉಪಯೋಗ ಮಾಡುತ್ತಿದ್ದೀರಿ ಎಂದು ನಾನು ನೇರವಾದ ಆರೋಪವನ್ನು ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ರಾಜಕಾರಣಿಗಳ ಬಗ್ಗೆ ಗೌರವ ಬರತಕ್ಕಂಥ ರೀತಿಯಲ್ಲಿ ನಡೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಅವರ ಸರ್ಕಾರದ ಧೋರಣೆ ಏನು, ಮುಂದೆ ಯಾವ ರೀತಿ ನಾವು ಅಧಿಕಾರವನ್ನು ನಡೆಸಬೇಕು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಎನ್ನುವುದನ್ನು ಎಳೆ ಎಳೆಯಾಗಿ ಬಿಡಿಸಿ ಹೇಳುತ್ತಿದ್ದಾರೆ. ಮತ್ತು ಹಿಂದೆ ಏನಾಗಿದೆ ಎನ್ನುವುದರ ಬಗ್ಗೆ ಅವರ ಮನನೊಂದು ಶಾಸಕರು ಹೈಕೋರ್ಟಿನ ತೀರ್ಪನ್ನು ಜಿಲ್ಲಾಧಿಕಾರಿಯವರು ಕಾರ್ಯರೂಪಕ್ಕೆ ತರದೇ ಇರತಕ್ಕಂಥ ಒತ್ತಡವನ್ನು ಶಾಸಕರ ಮಾತನ್ನು ಕೇಳಿಕೊಂಡು ಆ ಒತ್ತಡಕ್ಕೆ ಮಣಿದಿದ್ದಾರೆ, ನಿಜ, ಅವರು ಹೇಳುವ ಮಾತಿನಲ್ಲಿ ಅದು ನಡೆದಿದೆ, ನಡೆದಿಲ್ಲ ಎನ್ನುವುದು ಅವರಿಗೆ ಗೊತ್ತಿರುವಂಥದ್ದು. ಸರ್ಕಾರ ನಡೆಸತಕ್ಕಂಥವರಿಗೆ ಗೊತ್ತಿರುತ್ತದೆ. ಮತ್ತು ಎರಡನೆಯದು ಮುಂದೆ ಹೋಗಿ ಈ ಅನ್ಯಾಯದ ಬಗ್ಗೆ ನಾನು ಪತ್ರವನ್ನು ಬರೆದಿದ್ದೇನೆ, ಸಂಬಂಧಪಟ್ಟಂಥ ಸರ್ಕಾರದ ಮುಖ್ಯಮಂತ್ರಿಗಳಿಗೆ ನಾನು ಪತ್ರವನ್ನು ಬರೆದಿದ್ದೇನೆ ಎನ್ನುವ ಮಾತನ್ನು ಸ್ಪಷ್ಟವಾ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಸರ್ಕಾರ ಎಂದರೆ ಯಾರು? ಸರ್ಕಾರ ಎಂದರೆ ಕಸದ ತೊಟ್ಟಿಯೇ? ಸರ್ಕಾರ ಯಾರರಿಗೆ ಬರೆಯುವುದಕ್ಕಾಗುತ್ತದೆ? ಅಂದ ಮೇಲೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಬಯಲಾಗಲಿ, ಒಂದು ಸ್ವಚ್ಛ ಆಡಳಿತವನ್ನು ಕೊಡಿ. ನಾವು ಶಿರಸಾ-ವಹಿಸಿ ನಿಮ್ಮ ಜೊತೆಯಲ್ಲಿ ಇರುತ್ತೇವೆ. ದಯಮಾಡಿ ಶಾಸಕರು ಯಾರು, ಜಿಲ್ಲಾಧಿಕಾರಿಯಾರು? ಜಿಲ್ಲಾಧಿಕಾರಿ ವರ್ಗವಾಗಿದ್ದರೂ ಕೂಡ ಆ ಜಿಲ್ಲಾಧಿಕಾರಿಯನ್ನು ಒಂದು ನಿಮಿಷ ತಡಮಾಡದೆ ಸರ್ಕಾರ ಅವರಿಗೆ ಶಿಕ್ಷೆ ಕೊಡಬೇಕು ಎನ್ನುವುದು ಒಂದು. ಶಾಸಕರು ಯಾರು ಎಂದು ನಮ್ಮಲ್ಲೇ ಒಂದು ದೊಡ್ಡ ಜಿಜ್ಞಾಸೆ ಇದೆ. ಯಾರು ಶಾಸಕರು? ನಾವೋ? ಯಾರ ಮೇಲೆ ಇರಬಹುದು? ನಾನು ಯಡಿಯೂರಪ್ಪ ಎನ್ನಬಹುದು, ಯಡಿಯೂರಪ್ಪ ನನ್ನ ಮೇಲೆ ಹೇಳಬಹುದು, ಆ ರೀತಿ ಬಂದಿದೆ. ಆದ್ದರಿಂದ ತಾವು ನಿಖರವಾಗಿ ಶಾಸಕರು ಯಾರು? ಜಿಲ್ಲಾಧಿಕಾರಿ ಯಾರು? ಯಾವ ತೀರ್ಪು? ಸಂಬಂಧ ಯಾವುದು ಇದನ್ನು ಸ್ಪಷ್ಟಪಡಿಸಬೇಕು ಎಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರೇ, ಒಂದು ನಿಮಿಷ, I will call you ಒಂದು ನಿಮಿಷ ರಾಮಸ್ವಾಮಿಯವರೇ, ದಯಮಾಡಿ ಸಹಕರಿಸಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಹಾಸನ ಜಿಲ್ಲೆ ಎಂದತಕ್ಷಣ ಹೋದ ಸಲ ಶಾಸಕರಿದ್ದವರು. ರಾಮಸ್ವಾಮಿ ಈ ಸದನದಲ್ಲಿದ್ದಾರೆ. ಗಂಡಸಿ ಕ್ಷೇತ್ರದ ಶಿವರಾಮು ಇದ್ದಾರೆ. ಅದಕ್ಕಾಗಿ ನ್ಯಾಚುರಲ್ ಆಗಿ ಶಾಸಕರು ಈ ರೀತಿ ಮಾಡಿದ್ದಾರೆ ಎಂದರೆ ಅವರನ್ನೂ ಕೂಡ ಸಹಜವಾಗಿ ಕೇಳುತ್ತಾರೆ.

ಅಧ್ಯಕ್ಷರು : ಅವರಿಗೆ ಒಂದು ರಫ್ ಐಡಿಯಾ ಇರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಸರ್‌ಕ್ಯಾಸ್ಟಿಕ್ ಆಗಿ ಹೇಳಿಬಿಡುವುದು ಎಂದರೆ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತು ಇಡೀ ರಾಜ್ಯದ ಜನತೆಗೆ ....

(ಗೊಂದಲ)

ಅಧ್ಯಕ್ಷರು : ಇರಿ, ಇರಿ, ಪರವಾಗಿಲ್ಲ, ಸಿಂಧ್ಯಾರವರೇ, ನೀವು ಲಾಠಿ ಛಾರ್ಜ್ ಮೂಡ್‌ಲ್ಲೇ ಇದ್ದೀರಲ್ಲಾ!

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತು ಇಡೀ ರಾಜ್ಯದ ಜನತೆಯ ಒಂದು ರೀತಿ ಕಣ್ಣುತೆರೆಸುವ ಪ್ರಯತ್ನ ಮಾಡುತ್ತಾರೆ ಎಂದು ನಾನು ಭಾವಿಸುತ್ತೇನೆ. ಇದನ್ನು ಸ್ವಾಗತ ಕೂಡ ನಾನು ಮಾಡುತ್ತೇನೆ. ಏಕೆಂಪರೆ ಒಬ್ಬ ಶಾಸಕರಾದವರು ಜನತೆಯ ರಕ್ಷಣೆ ಮಾಡಬೇಕು, ಒಳ್ಳೆಯ ಕೆಲಸ ಮಾಡಬೇಕು ಎಂದು ಅಪೇಕ್ಷೆಪಟ್ಟಿರುವ ಸಂದರ್ಭದಲ್ಲಿ ಹೈಕೋರ್ಟ್ ಏನು ಹೇಳುತ್ತದೆ, ಅದನ್ನು ಮುಚ್ಚಿಡುವಂಥ ಪ್ರಯತ್ನಅಧಿಕಾರಿಗಳ ಮುಖಾಂತರ ಮಾಡುವುದಕ್ಕೆ ಈ ರಾಜ್ಯದಲ್ಲಿ ಆಗುತ್ತದೆ ಎನ್ನುವಂಥ ಸ್ಥಿತಿ ಬಂದರೆ ಅವನು ಶಾಸಕನಾಗುವುದಕ್ಕೆ ಅಯೋಗ್ಯನಾಗುತ್ತಾನೆ. ಮೊದಲನೆಯದು, ಅಂಥಹ ಅಧಿಕಾರಿಗಳು ಇದ್ದರೂ ಕೂಡ ಸರ್ಕಾರದ ಗಮನಕ್ಕೆ ಬಂದಿದ್ದರೂ ಕೂಡ ಅಂಥ ಅಧಿಕಾರಿಗಳು ಇನ್ನೂ ಇದ್ದರೆ ಆ ಸರ್ಕಾರ ಕೂಡ ಅಯೋಗ್ಯ ಸರ್ಕಾರ ಎನ್ನುವ ಭಾವನೆ ಬರುತ್ತದೆ.

ನಾನು ಅದಕ್ಕೋಸ್ಕರವಾಗಿ ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಈ ಒಂದು ಪ್ರಕರಣದಲ್ಲಿ ಆಕಸ್ಮಾತ್ ಶಾಸಕನಾಗಲಿ..

ಅಧ್ಯಕ್ಷರು : ಸಭೆಗೆ ಗೊತ್ತಾಯಿತಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ : ಅಂತಹ ಜಿಲ್ಲಾಧಿಕಾರಿಗಳನ್ನು ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳದೇ ಇದ್ದರೆ...

ಅಧ್ಯಕ್ಷರು : ನಿಮ್ಮ ಮಾತಿನ ಅರ್ಥ ಆಗಿ ಹೋಯಿತು.

ಶ್ರೀ ಕೆ.ಎಸ್. ಈಶ್ವರಪ್ಪ : ಅಂತಹ ಭ್ರಷ್ಟರನ್ನು ಈಗಿನ ಮುಖ್ಯಮಂತ್ರಿಗಳಾದ ದೇವೇಗೌಡರು ರಕ್ಷಣೆ ಮಾಡುತ್ತಾರೆ ಎಂದು ಈ ರಾಜ್ಯದ ಜನ ಇವರ ಮೇಲೆ ಅನುಮಾನ ಪಡುವಂತಹ ಪರಿಸ್ಥಿತಿ ಬರುತ್ತದೆ. ಅದಕ್ಕೋಸ್ಕರವಾಗಿ ನಾನು ಹೇಳುತ್ತಿದ್ದೇನೆ ಯಾವ ಕಾರಣಕ್ಕೂ ಕೂಡ ಈ ಸಂದರ್ಭದಲ್ಲಿ ಆ ಶಾಸಕನ ಹೆಸರನ್ನು ಹೇಳಲೇಬೇಕು. ಜೊತೆಗೆ ಸಂಬಂಧಪಟ್ಟ ಅಧಿಕಾರಿಯನ್ನು ಸಸ್ಪೆಂಡ್ ಮಾಡಲೇ ಬೇಕು. ಇಲ್ಲವೆಂದರೆ ಖಂಡಿತ ನಾವು ಬಿಡುವುದಿಲ್ಲ.

ಅಧ್ಯಕ್ಷರು : ಇಷ್ಟು ಅನುಮಾನ ಇರುವವರು ಎಲೆಕ್ಷನ್‌ನಲ್ಲಿ ಸುಮ್ಮ ಸುಮ್ಮನೇ ಜಗಳ ಮಾಡಿಕೊಂಡಿರಲ್ಲಾ!

ಶ್ರೀ ಕೆ.ಎಸ್. ಈಶ್ವರಪ್ಪ : ಜಗಳ ಅಲ್ಲ ಅಧ್ಯಕ್ಷರೆ, ಏಕೆಂದರೆ ನಿಮಗೆ ಬೇಕೇ ಎಂದು ಕೇಳುತ್ತಾರೆ. ಯಾರಿಗೆ ಬೇಡ? ಬೇಕೇ ಹೇಳಲೇ ಎಂಬಂತಹ ಪ್ರಶ್ನೆಯೇ ಇಲ್ಲಿಲ್ಲ. ಇವತ್ತು ಸರ್ಕಾರಿ ಅಧಿಕಾರಿಗಳು ಮಾಡಿರುವಂತಹ ದ್ರೋಹ ಮತ್ತು ಶಾಸಕ ಮಾಡಿರುವಂತಹ ಅನ್ಯಾಯ. ಇದು ಬಯಲಿಗೆ ಬರಬೇಕು, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕೀರ್ತಿ ಬರುತ್ತದೆ. ಮುಂದೆ ಶಾಸಕರು ಈ ರೀತಿ ಮಾಡದೇ ಇರುವುದಕ್ಕೆ ಅವಕಾಶ ಆಗುತ್ತದೆ.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ...ಸಾಕು...

ಶ್ರೀ ಕೆ.ಎಸ್. ಈಶ್ವರಪ್ಪ : ಮುಂದೆ ಈ ರೀತಿ ಮಾಡದೇ ಇರುವುದಕ್ಕೆ...

ಅಧ್ಯಕ್ಷರು : ಸಾಕು, ಪುನರಾವರ್ತನೆ ಆಗುತ್ತದೆ. ಖಮರುಲ್ ಅವರೇ ಮಾತನಾಡಿ.

SRI QUMARUL ISLAM : Mr. Speaker, Sir, this is a very serious matter. The Deputy Commissioner is not implementing the order of the Hon'ble High Court and it has been revealed in this house that one of the MLAs has brought pressure on the Deputy Commissioner not to implement that order. Now this has become prestige issue. It is thc privilege of the House. Let the Hon'ble Chief Minister reveal the name of that MLA as well as suspend the Deputy Commissioner concerned.

ಅಧ್ಯಕ್ಷರು : ಅವರಿಗೆ ಏನಾಗಿದೆ ಎಂದರೆ, ಒಂದು ನಿಮಿಷ ದಯಮಾಡಿ.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಹೈಕೋರ್ಟ್ ಆರ್ಡರನ್ನು ಜಾರಿಗೆ ತರುವುದಕ್ಕೆ ಆಗುವುದಿಲ್ಲ ಎಂದ ಮೇಲೆ.. does it not amount to contempt of the court?

ಅಧ್ಯಕ್ಷರು : ಸನ್ಮಾನ್ಯ ರಾಮಕೃಷ್ಣ ಅವರೇ, ತಾವು ಹಿರಿಯ ಸದಸ್ಯರು. ಮಾನ್ಯ ಬೆಲ್ಲದ್ ಅವರೇ ದಯಮಾಡಿ ಕುಳಿತುಕೊಳ್ಳಿ. ಎಲ್ಲರಿಗೂ ಅವಕಾಶ ಕೊಡೋಣ. ಅವರೆಲ್ಲರ ಮಾತಿನ ಅರ್ಥ ಏನೆಂದರೆ, ಮಾನ್ಯ ಸಭಾ ನಾಯಕರು ಸ್ವಲ್ಪ ತಮ್ಮ ಗಮನಕ್ಕೆ ತರುವುದು.

ಶ್ರೀ ಹೆಚ್.ಡಿ. ದೇವೇಗೌಡ : ತಮ್ಮ ಅಪ್ಪಣೆ ಪಡೆದು ಒಂದು ವಿಚಾರ ಹೇಳುತ್ತೇನೆ. ನಾನು ಯಾವ ಶಾಸಕರ ಹೆಸರನ್ನು ತೆಗೆದು ಅವಹೇಳನ ಮಾಡಬೇಕು ಎಂದು ನನ್ನ ಉದ್ದೇಶ ಇಲ್ಲ, ಆದರೆ ಏನು ಪ್ರಕರಣ ನಡೆದಿದೆ ಎನ್ನುವುದರ ಬಗ್ಗೆ ಸೂಕ್ಷ್ಮವಾಗಿ ಹೇಳಿದೆ. ಏನೆಲ್ಲಾ ಸ್ಟೇ ಆರ್ಡರ್ ಏನು ಪ್ರಕರಣ ನಡೆದಿದೆ ತಮಗೆ ಕಳುಹಿಸಿ ಕೊಡುತ್ತೇನೆ. If you feel like announcing ಇದು 9ನೆಯ ಅಸೆಂಬ್ಲಿಯಲ್ಲಿ ನಡೆದಿರತಕ್ಕ ವಿಚಾರ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರು ಏನು ತೀರ್ಮಾನ ಮಾಡುವುದು.

ಶ್ರೀ ಹೆಚ್.ಡಿ.ದೇವೇಗೌಡ : ಯಾವುದೇ, ಅಪಾದನೆ ಮಾಡಿದರೂ ನನಗೆ ಅದರಿಂದ ಕೀರ್ತಿ ಬರಬೇಕಾಗಿಲ್ಲ, ಆದರೆ ಒಂದೇ ಒಂದು ಮಾತು ಹೇಳುತ್ತೇನೆ. ಇನ್ನು ಮುಂದೆ ಅವಕಾಶ ಕೊಡುವುದಿಲ್ಲವೆಂದು ನಾನು ಹೇಳಿದ್ದೇನೆ. ಅದು ನನ್ನ ಜಿಲ್ಲೆಯಲ್ಲಿ ನಡೆದ ಪ್ರಕರಣ ಎಂದು ಹೇಳಿದ್ದೇನೆ. ಇಂತಹ ಶಾಸಕರು ಎಂದು ನಾನು ಹೇಳಲಿಲ್ಲ, ನಾನು ಇಷ್ಟೇ ಹೇಳುತ್ತೇನೆ. ಇವತ್ತೂ ಕೂಡ ಹಿಂದೆ ಏನು ತಪ್ಪು ಆಗಿದೆಯೋ ಅದಕ್ಕೆ ಅವಕಾಶ ಕೊಡಬರುವುದಿಲ್ಲ ಎಂದು ಹೇಳಿದ್ದೇನೆ. ಆದರೆ ಒಂದೇ ಒಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ನನ್ನ ಸರ್ಕಾರದಲ್ಲಿ ಯಾವುದೇ ಸನ್ನಿವೇಶದಲ್ಲಿ ಅಧಿಕಾರಿಗಳು ಅದಕ್ಕೆ ಬಲಿ ಆಗುವುದಕ್ಕೆ ಬಿಡುವುದಿಲ್ಲ ಎಂದು ಹೇಳಿದ್ದೇನೆ. Everything I can produce. but the problem is,

ನಾವು ಒಬ್ಬರೊಬ್ಬರ ಮೇಲೆ ಪರಸ್ಪರ ಆರೋಪ ಮಾಡಬೇಕೆಂದು ಹೊರಟಾಗ I should give notice or he should give notice to me,

ನಾನು ಯಾರ ಹೆಸರೂ ಇಲ್ಲಿ ತೆಗೆದಿಲ್ಲ, Documents are here.

ಶ್ರೀ ಬಿ.ಎಸ್. ಯಡಿಯೂರಪ್ಪ : ಸದನದಲ್ಲಿ ಆ ಸದಸ್ಯರು ಇದ್ದಾರೆಂದು ಅದಾದರೂ ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ : ಯಾವಾಗಲೂ ಅಷ್ಟು ಆತುರ ಮಾಡಬೇಕಾದದ್ದು ಇಲ್ಲ. There are certain rules. It has to go to the Hon'ble Speaker.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ನೀವು ನಮ್ಮ ರಕ್ಷಣೆಗೆ ಬರಬೇಕು. ನಾವು ಕೇಳುತ್ತಿದ್ದೇವೆ, ದಯಮಾಡಿ ಶಾಸಕರ ಹೆಸರು, ಡೆಪ್ಯೂಟಿ ಕಮೀಷನರ್ ಹೆಸರು ಅವರು ಹೇಳಬೇಕು. ಇಲ್ಲದಿದ್ದರೆ, ಹಾಸನ ಜಿಲ್ಲೆಯಲ್ಲಿ ಹಿಂದೆ ಇದ್ದವರು ಈಗ ಇರುವವರು ಎಲ್ಲರ ಮೇಲೂ ತಾವು ಗೂಬೆ ಕೂರಿಸಿದ ಹಾಗೆ ಆಗುತ್ತದೆ. ಆ ಡಿಸಿ ಯಾರು, ಯಾವ ಪೀರಿಯಡ್‌ನಲ್ಲಿ ಇದ್ದರು? ಯಾವ ಡೆಪ್ಯೂಟಿ ಕಮೀಷನರ್ ಪ್ರಾಮಾಣಿಕವಾಗಿ ಕೆಲಸಮಾಡುತ್ತಿದ್ದಾರೆ ಅವರೆಲ್ಲರೂ ತಲೆ ತಗ್ಗಿಸಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಬೆಲ್ಲದ ಅವರೇ, ನಾನು ನಾಗೇಗೌಡರವರನ್ನು ಕರೆದಿದ್ದೇನೆ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೇ, ಇದು ಗಂಭೀರವಾದ ವಿಚಾರ ಎಂದು ಹೇಳಿ ಯಾವುದೇ ಪಕ್ಷದ ಸದಸ್ಯರು ನಂಬಿಕೊಳ್ಳಬೇಕು. ಆಡಳಿತ ಪಕ್ಷ ಅಥವಾ ವಿರೋಧ ಪಕ್ಷ ಎಂಬ ವಿಚಾರ ಅಲ್ಲ, ಈ ರಾಜ್ಯದ ಮುಖ್ಯಮಂತ್ರಿಯವರ ಆದ್ಯ ಕರ್ತವ್ಯ ಎಂದು ನಾನು ಭಾವಿಸಿಕೊಂಡಿದ್ದೇನೆ. ಆದುದರಿಂದ ಆ ಜಿಲ್ಲಾಧಿಕಾರಿಗಳ ಹೆಸರನ್ನು ಮತ್ತು ಸಂಬಂಧಪಟ್ಟ ಶಾಸಕರ ಹೆಸರನ್ನು ಹೇಳಿ ನಮ್ಮ ಸರ್ಕಾರಕ್ಕೆ ಹೊಸ ಕೀರ್ತಿ ಬರಲಿ ಎಂದು ಅವರಲ್ಲಿ ವಿನಯ ಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಸನ್ಮಾನ್ಯ ಅಧ್ಯಕ್ಷರೇ, ನಾನು ಸಭೆಯು ಪ್ರಾರಂಭವಾಗುವ ಮೊದಲೇ ಒಂದು ಮಾತನ್ನು ಹೇಳಿದೆ. ಅದನ್ನು ತಾವು ಗಮನದಲ್ಲಿಟ್ಟುಕೊಂಡರೋ ಇಲ್ಲವೋ ಗೊತ್ತಿಲ್ಲ. ನಮ್ಮ ವ್ಯವಸ್ಥೆ ಲೆಜಿಸ್ಲೇಚರ್, ಎಗ್ಜಿಕ್ಯೂಟೀವ್ ಮತ್ತು ಜ್ಯುಡೀಷಿಯರಿ ಈ ಮೂರೂ ಸಹ ಇದರಲ್ಲಿ ಇನ್‌ವಾಲ್ವ್ ಆಯಿತು. ಕಾನೂನನ್ನು ಮಾಡುವವರೇ ಕಾನೂನನ್ನು ಬ್ರೇಕ್ ಮಾಡಲು ಹೊರಟಿದ್ದಾರೆ. The Executive is not at all giving respect to the judiciary or its decisions.

ನಾವು ಎಲ್ಲಿಗೆ ತಲುಪುತ್ತಿದ್ದೇವೆ? ರಾಷ್ಟ್ರಮಟ್ಟದಲ್ಲಿ ಲೀಡಿಂಗ್ ಪತ್ರಿಕೆಗಳು ನಮ್ಮನ್ನು *ಆ ಶಬ್ದ ತಪ್ಪು ಇರಬಹುದು ಆದರೆ ನನ್ನನ್ನು ಕ್ಷಮಿಸಿ. ಈ ರೀತಿ ಸಭೆಯಲ್ಲಿ ಆಯಿತು, ಮುಖ್ಯಮಂತ್ರಿಗಳು ಇದನ್ನು ಹೇಳಿಬಿಟ್ಟು ಹೊರಟು ಹೋದರು ಎಂದರೆ ನಾವು ಎಲ್ಲಿಗೆ ತಲುಪುತ್ತೇವೆ. ನಮ್ಮನ್ನೇನು ಸುಮ್ಮನೆ ಬಿಡುತ್ತಾರೆಂದು ತಿಳಿದುಕೊಳ್ಳಬೇಡಿ. ನಾವೇನಾಗಬೇಕು? ನೀವು ಅದನ್ನು ಪ್ರಸ್ತಾಪ ಮಾಡಬಾರದಿತ್ತು, ಮಾಡಿದಮೇಲೆ having come to the knowledge of this House that an ordinary officer is not caring at all for the implementation of the decision of the High court, if we keep quiet even then, then it is wrong. Who has to give notice. Here the Chief Minister himself is telling.

MR. SPEAKER : Mr. Ramaswamy from Hassan wants to speak.

ಶ್ರೀ ಎ.ಟಿ. (ಅರಕುಗೂಡು) : ಸನ್ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಬಹಳ ಗುರುತರವಾದ ಆಪಾದನೆಯನ್ನು ಮಾಡಿದ್ದಾರೆ. ಅದನ್ನು ಆಪಾದನೆ ಎಂದು ನಾನು

ಹೇಳುತ್ತಿಲ್ಲ, ನಾನು ಕೂಡ ಅದನ್ನು ಸ್ವಾಗತಿಸುತ್ತೇವೆ. ಅದು ನಮ್ಮ ಆಡಳಿತದ ಅವಧಿಯಲ್ಲಿ ಆಗಿಲ್ಲ, ಹಿಂದಿನ ಕಾಂಗ್ರೆಸ್ ಸರ್ಕಾರವಿದ್ದ ಅವಧಿಯಲ್ಲಿ ಆಗಿದೆ ಎಂದು ಹೇಳಿದ್ದಾರೆ. ಹಿಂದಿನ ಅವಧಿಯಲ್ಲಿ ನಾನೂ ಸಹ ಶಾಸಕನಾಗಿದ್ದೆ. ನಾನು ಕೂಡ ಐದು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಅವರು ಈಗ ಸಂಬಂಧಪಟ್ಟ ಶಾಸಕರ ಹೆಸರನ್ನು ಹೇಳದಿದ್ದರೆ ನನ್ನ ಮನಸ್ಸಿಗೆ ನೋವಾಗುತ್ತದೆ. ನನ್ನ ಹಕ್ಕಿಗೆ, ಕರ್ತವ್ಯಕ್ಕೆ ಚ್ಯುತಿ ಬಂದಂತಾಗುತ್ತದೆ. ನಾನೂ ಕೂಡ ಕಾನೂನಿಗಿಂತ, ನ್ಯಾಯಾಲಯದ ನಿರ್ಣಯಕ್ಕಿಂತ ದೊಡ್ಡವನಲ್ಲ.

ಅವರೇ ರಾಜ್ಯಪಾಲರ ಭಾಷಣದಲ್ಲಿ ನಮ್ಮದು ಪಾರದರ್ಶಕ ಸರ್ಕಾರವೆಂದು ಹೇಳಿದ್ದಾರೆ. ಆ ಪಾರದರ್ಶಕ ಸರ್ಕಾರವೆಂದು ಹೇಳಿದರೆ ಈಗ ಈ ವಿಷಯವನ್ನು ಮುಚ್ಚಿಡತಕ್ಕ ಅವಶ್ಯಕತೆ ಇಲ್ಲ. ಅವರೇನಾದರೂ ಮುಚ್ಚಿಟ್ಟರೆ ನಾವು ಇಲ್ಲಿ ನಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಲು ಚ್ಯುತಿ ಬಂದೇ ಬರುತ್ತದೆ. ಆ ದಿಕ್ಕಿನಲ್ಲಿ ಅವರು ಯಾರು ಎಂಬ ಬಗ್ಗೆ ದಯಮಾಡಿ ಹೇಳಿ. ಇಲ್ಲದಿದ್ದರೆ ನಮಗೂ ಅನುಮಾನವಾಗುತ್ತದೆ, ಜನರಿಗೆ ಅನುಮಾನವಾಗುತ್ತದೆ ಇವರೇ ಇರಬಹುದೇನೋ ಎಂದು. ಆದ್ದರಿಂದ ದಯಮಾಡಿ ಮುಖ್ಯಮಂತ್ರಿಗಳು ಆ ಹೆಸರನ್ನು ಹೇಳಬೇಕು. ನಾವೂ ಕೂಡ ಸ್ವಂತ ಹಿತಕ್ಕಾಗಿ ಈ ಕ್ಷೇತ್ರಕ್ಕೆ ಬಂದವರಲ್ಲ, ಸಾರ್ವಜನಿಕ ಹಿತವನ್ನೇ ಗಮನದಲ್ಲಿಟ್ಟುಕೊಂಡು ನಾವು ನಡೆದುಕೊಂಡು ಹೋಗುತ್ತಿದ್ದೇವೆ. ಹಾಸನ ಜಿಲ್ಲೆ ಎಂದು ಹೇಳಿರುವುದರಿಂದ ತಾವು ದಯಮಾಡಿ ಆ ಶಾಸಕರ ಹೆಸರನ್ನು ಪ್ರಕಟ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಜಿಲ್ಲಾಧಿಕಾರಿಗಳ ಹೆಸರನ್ನು ಹೇಳಲು ನನಗೇನೂ ತೊಂದರೆ ಇಲ್ಲ, ಆದರೆ ಈ ಸಭೆಯ ನಿಯಮಾವಳಿಗಳ ಪ್ರಕಾರ ಯಾರ ಹೆಸರನ್ನು ಇಲ್ಲಿ ಹೇಳಬೇಕಾದರೆ ನೋಟೀಸ್ ಕೊಡಬೇಕು.

ಶ್ರೀ ಹೆಚ್.ಎನ್. ನಂಜೇಗೌಡ : ಆ ನಿಯಮಾವಳಿಗಳನ್ನು ಸಸ್‌ಪೆಂಡ್ ಮಾಡಿ ಈ ಮಟ್ಟಿಗೆ.

ಶ್ರೀ ಹೆಚ್.ಡಿ.ದೇವೇಗೌಡ : ನನಗೆ ಅದನ್ನು ಹೇಳುವುದಕ್ಕೆ ಏನೂ ತೊಂದರೆ ಇಲ್ಲ. ಆದರೆ ಒಂದು ವಿಷಯವನ್ನು ಹೇಳುತ್ತೇನೆ. ಮಾನ್ಯ ನಂಜೇಗೌಡರೇನು ಉಗಿದು ಬರೆಯುತ್ತಾರೆ ಎಂಬ ಪದವನ್ನು ಪ್ರಯೋಗ ಮಾಡಿದ್ದಾರೆ, ಆ ಪದ ಪ್ರಯೋಗ ಮಾಡಬೇಕಾದ ಅವಶ್ಯಕತೆ ಇಲ್ಲ, ಏನು ಘಟನೆಗಳು ನಡೆದಿವೆ ಎಂದು ಹೇಳುವಾಗ ಇನ್ನು ಮುಂದಕ್ಕೆ ಜಿಲ್ಲಾಧಿಕಾರಿಗಳಿಗೆ, ಎಸ್‌ಪಿ ಗಳಿಗೆ ಅವಕಾಶ ಕೊಡುವುದಿಲ್ಲ ಎನ್ನುವುದಕ್ಕೆ ಕಾರಣ ಹೇಳಿದೆ. ಎಷ್ಟೇ ರಾಜಕೀಯ ಒತ್ತಡ ಬಂದರೂ ಸಹ ಅವಕಾಶ ಕೊಡುವುದಿಲ್ಲ. ಆ ಜಿಲ್ಲಾಧಿಕಾರಿಗಳ ಹೆಸರು ಕೌಶಿಕ್ ಮುಖರ್ಜಿ ಎಂದು, ಅವರ ಹೆಸರನ್ನು ಹೇಳಲು ನನಗೇನೂ ಭಯವಿಲ್ಲ. ಅವರು ಮೊದಲು ಹಾಸನದಲ್ಲಿ ಇದ್ದರು, ಈಗ ವರ್ಗಾವಣೆಯಾಗಿದ್ದಾರೆ. ಅವರು ಈಗಲೂ ಜಿಲ್ಲಾಧಿಕಾರಿಗಳಾಗಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡಬೇಕಾಗಿಲ್ಲ. ಆದರೆ ಸದನದಲ್ಲಿ ಇನ್ನೊಬ್ಬರ ಹೆಸರನ್ನು ಹೇಳಬೇಕಾದರೆ ಕೆಲವು ನಿಯಮಗಳಿವೆ ತಾವು ಅನುಮತಿಯನ್ನು ಕೊಟ್ಟರೆ ಹೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ಯಾವ ವರ್ಷದಲ್ಲಿ ಹೀಗೆ ಆಯಿತು ಎಂದು ತಿಳಿಸಿದರೆ ಸಾಕು. ಅದು ಹೇಳಿ. ಯಾವ ವರ್ಷದಲ್ಲಿ ಈ ಪತ್ರ ಬಂದಿದೆ. ಯಾವ ಶಾಸಕರು ಈ ರೀತಿ ಪತ್ರವನ್ನು ಬರೆದಿದ್ದಾರೆ ಎಂಬುದನ್ನು ಹೇಳಿ.

ಶ್ರೀ ಎಂ. ಶಿವರಾಮ್ (ಗಂಡಸಿ) : ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಶಾಸಕರ ಹೆಸರನ್ನು ಹೇಳಲು ತಾವು ಅನುಮತಿಯನ್ನು ಕೊಡಬೇಕೆಂದು

ನಾವಿಬ್ಬರು ಶಾಸಕರು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ. ಇಲ್ಲದಿದ್ದರೆ ಈ ರೀತಿ ನಮ್ಮಗಳ ಮೇಲೆ ಗುರುತರವಾದ ಆಪಾದನೆಯನ್ನು ಮಾಡಿದಾಗ ಕ್ಷೇತ್ರದ ಜನರೂ ಸಹ ನಮ್ಮನ್ನು ಇವರು ಈ ರೀತಿ ತಪ್ಪನ್ನು ಮಾಡಿರಬಹುದೆಂದು ನೋಡುತ್ತಿರುತ್ತಾರೆ. ಈ ತಪ್ಪನ್ನು ಯಾರು ಮಾಡಿರಬಹುದು ಎಂದು ವಿಚಾರ ಮಾಡುತ್ತಿದ್ದಾಗ ಇದನ್ನು ಮುಚ್ಚಿಡುವಂಥ ವಿಚಾರವಾಗುವುದಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳು ಹೆಸರನ್ನು ಹೇಳಲು ತಮ್ಮ ಅನುಮತಿಯನ್ನು ಕೇಳಿದ್ದಾರೆ. ತಾವು ದಯಮಾಡಿ ಅವರಿಗೆ ಅನುಮತಿಯನ್ನು ಕೊಡಿ.

ಅಧ್ಯಕ್ಷರು : ಇಲ್ಲಿ ನಾನು ನಿಯಮಾವಳಿಗಳನ್ನು ನೋಡುತ್ತಿದ್ದೇನೆ. ನನ್ನ ಅಧಿಕಾರದ ಇತಿಮಿತಿಯಲ್ಲಿ ಇಂಥ ಸಂದರ್ಭದಲ್ಲಿ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ಆಲೋಚನೆ ಮಾಡುತ್ತಿದ್ದೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವೀರಪ್ಪಮೊಯ್ಲಿಯವರು ಮಾತನಾಡುತ್ತಾರೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ : ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಗಮನಕ್ಕೆ ಈ ವಿಚಾರವನ್ನು ತಂದಿದ್ದಾರೆ. ಅವರು ಆಸೆ ತೋರಿಸಿದ್ದಾರೆ. ಆದ್ದರಿಂದ ಅವರು ದಯಮಾಡಿ ಸಭೆಗೆ ಆ ಹೆಸರನ್ನು ತಿಳಿಸಬೇಕು. ಯಾವುದೇ ನಿಯಮಾವಳಿಯ ಮೇರೆಗೆ ರಾಜಕೀಯವನ್ನು ನಡೆಸತಕ್ಕದ್ದು ಸರಿಯಲ್ಲ, ಅದಕ್ಕೆ ಅವಶ್ಯಕತೆ ಕೂಡ ಇಲ್ಲ.

ಅಧ್ಯಕ್ಷರು : ತಮ್ಮ ನಾಯಕರು ಎಲ್ಲವನ್ನೂ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ) : ಸನ್ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ನಾನು ಖಂಡಿತವಾಗಿ ಮೆಚ್ಚುತ್ತೇನೆ. ಮಾನ್ಯ ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಗಳು ವಿಷಯದ ಬಗ್ಗೆ ಮಾತನಾಡಲು ಪ್ರಾರಂಭ ಮಾಡಿದಾಗ ನಾವೆಲ್ಲಾ ವಿಶೇಷವಾಗಿ ಅವರು ಏನೇನನ್ನು ಹೇಳಿದರೋ ಅದನ್ನು ಮೆಚ್ಚುತ್ತೇವೆ. ನಾವು ಯಾವ ರೀತಿಯಾದ ರಾಜಕೀಯ ಸೇಡನ್ನು ತೀರಿಸತಕ್ಕ ಕಾರ್ಯಕ್ರಮವನ್ನು ಮಾಡುವುದಿಲ್ಲವೆಂದು ಹೇಳಿದರು. ಎರಡನೆಯದಾಗಿ ಅವರು ಉತ್ತಮವಾದಂಥ ಬ್ಯೂರೋಕ್ರಸಿ ನಮ್ಮಲ್ಲಿದೆ ಎನ್ನತಕ್ಕ ವಿಚಾರವನ್ನು ಸಹ ಹೇಳಿದರು. ಮೂರನೆಯದಾಗಿ, ಯಾವುದೇ ರಾಜಕೀಯ ಒತ್ತಡಕ್ಕೂ ಯಾವುದೇ ಸಂದರ್ಭದಲ್ಲಿಯೂ ಸಹ ನಾನು ಮುಂದೆ ನಡೆಯಲು ಬಿಡುವುದಿಲ್ಲ ಎನ್ನತಕ್ಕ ಮಾತನ್ನು ಹೇಳಿದರು. ನಿಜವಾಗಿಯೂ ಈ ಮೂರು ವಿಷಯಗಳನ್ನು ನಾವು ನೂರಕ್ಕೆ ನೂರರಷ್ಟು ಮೆಚ್ಚುತ್ತೇವೆ. ಅವರನ್ನು ಅಭಿನಂದಿಸುತ್ತೇವೆ. ಮತ್ತು ತಾವು ಅದನ್ನು ಅನುಷ್ಠಾನಕ್ಕೆ ತರಬೇಕೆಂದು ಒತ್ತಾಯವನ್ನು ಮಾಡುತ್ತೇವೆ. ಅದಕ್ಕೆ ನಾವುಗಳೆಲ್ಲರೂ ಸಹಾ ನಿಮ್ಮ ಜೊತೆಯಲ್ಲಿ ಕೈಜೋಡಿಸುತ್ತೇವೆ. ಅದು ಆಗಬೇಕು. ತಾವು ಪ್ರಾಮಾಣಿಕವಾಗಿ ತಮ್ಮ ಅನಿಸಿಕೆಯನ್ನು ಇಲ್ಲಿ ಹೇಳಿದ್ದೀರಿ. ತಮ್ಮ ಪ್ರಾಮಾಣಿಕತೆಯ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ, ಆದರೆ ಈ ಮಧ್ಯೆ ಈ ಪ್ರಶ್ನೆ, ತಾವು ಬಹಳ ಜನರಲ್ ಆಗಿ ಹೇಳುತ್ತಿದ್ದೀರಿ, ಅದನ್ನು ನಾವು ಒಪ್ಪುತ್ತಿದ್ದೆವು, ಏಕೆಂದರೆ ಯಾವುದೇ ಸಂದರ್ಭದಲ್ಲಿ ಶಾಸಕರು ಜಿಲ್ಲಾಧಿಕಾರಿಗಳ ಮಟ್ಟಿಗಾದರೂ ಸಹ ಯಾವುದೇ ಹಂತದಲ್ಲಿ ಒತ್ತಡ ಹಾಕಬಾರದು, ಅದಕ್ಕೆ ನಾನು ಆಸ್ಪದವನ್ನು ಕೊಡುವುದಿಲ್ಲವೆಂದು ತಾವು ಹೇಳಿದ್ದರೆ ಅದರ ಬಗ್ಗೆ ನಾವ್ಯಾರೂ ಕೂಡ ಪ್ರಶ್ನೆ ಮಾಡುತ್ತಿರಲಿಲ್ಲ, ಆದರೆ ಇಲ್ಲಿ ತಾವು ಪ್ರಸ್ತಾಪ ಮಾಡಿದಂಥ ಒಂದು ಪ್ರಕರಣದಲ್ಲಿ ಹಲವಾರು ಅಂಶಗಳು ಉದ್ಭವವಾಗಿದೆ. ಅದನ್ನು ಹಾಗೆಯೇ ಬಿಟ್ಟರೆ ಏನು ಆಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ತಾವು ಅದನ್ನು ಮೊಗುಮ್ಮಾಗಿ ಹೇಳಿರಬಹುದು, ಅಥವಾ ಉದ್ದೇಶ ಇಲ್ಲದೇ ಇರಬಹುದು. ಒಂದು ಉದಾಹರಣೆಯಾಗಿ ಅದನ್ನು ಉದ್ಧರಿಸಿ ಹೇಳಿರಬಹುದು. ಅದರಿಂದ ಪರಿಣಾಮ ಏನು ಆಗುತ್ತದೆಂದರೆ ಬಹುಶಃ ಬಹಳ ಡಿಮಾರಲೈಸ್ ಪರಿಣಾಮ ಬ್ಯೂರೋಕ್ರಸಿ ಮೇಲೆ ಆಗುತ್ತದೆ. ಏಕೆಂದರೆ, ಈ ವಿಷಯವನ್ನು ಬಿಹಾರ್ ಅಥವಾ ಉತ್ತರ ಪ್ರದೇಶದಲ್ಲಿ ಕೇಳಿರಬಹುದು. ಒಬ್ಬ ಗ್ರಾಮಸೇವಕನಾಗಿರಲಿ, ಕಂದಾಯ

ಅಧಿಕಾರಿಗಳಾಗಿರಲಿ ಅಥವಾ ಸಬಾರ್ಡಿನೇಟ್ ಅಧಿಕಾರಿಗಳ ಮಟ್ಟದಲ್ಲಿ ಈ ರೀತಿ ಆಗುತ್ತದೆ. ಆದರೆ ಜಿಲ್ಲಾಧಿಕಾರಿಯೊಬ್ಬರು ಶಾಸಕರ ಒತ್ತಡದಿಂದ ಇದನ್ನು ಅನುಷ್ಠಾನ ಮಾಡಲು ಆಗುವುದಿಲ್ಲವೆಂದು ಹೇಳುವುದಿದ್ದರೆ ಇದಕ್ಕಿಂತ ಒಂದು ದುರಂತ ನಮ್ಮ ಕರ್ನಾಟಕ ರಾಜ್ಯದ ಬ್ಯೂರೋಕ್ರಸಿ ಆಡಳಿತದಲ್ಲಿ ಇಲ್ಲವೆಂದು ಹೇಳಬೇಕಾಗುತ್ತದೆ. ಬಹುಶಃ ಇದು ನನ್ನ ಗಮನಕ್ಕೆ ಬಂದಿದ್ದರೆ I would not have retained him even for a minute..

ಬಹುಶಃ ಇದು ಇಡೀ ಸದನದ ವಸ್ತುವಾಗಿದೆ. ಇದು ತಮ್ಮಲ್ಲಿ ಕೂಡ ಸಹ ಉಳಿದಿಲ್ಲ. It has now become the property of this House. I think you have to suo moto institute a privilege Motion not againt them but to find out the truth. You have to find out the truth.

ಒಂದು ಏನಾಗಿದೆ ಎಂದರೆ ಕರ್ನಾಟಕಕ್ಕೆ ಮತ್ತು ಮಂತ್ರಿಗಳಿಗೆ ಬರೆದು ಕಳುಹಿಸಿದ್ದೀರಿ. ತಾವೇ ರಾಜಕೀಯ ಸೇಡನ್ನು ತೀರಿಸಿಕೊಳ್ಳುವುದಿಲ್ಲವೆಂದು ಹೇಳಿದ್ದೀರಿ. ನಿಮ್ಮ ಹಳೆಯ ಅರ್ಜಿಗಳನ್ನು

ಇಲ್ಲಿ ತಂದು ಈಗ ಅದರಮೇಲೆ ಇವತ್ತು ಮಾತುಕತೆ ಆಡುವುದಾದರೆ ರಾಜಕೀಯ ಸೇಡು ಅಲ್ಲದೆ ಮತ್ತೆ ಏನು? ಇದು ಹಳೇ ಅರ್ಜಿಗಳನ್ನು ತೀರ್ಮಾನ ಮಾಡತಕ್ಕಂತಹ ಸದನ ಆಗಬೇಕೇ?

MR. SPEAKER : You will have to yield. Mr. Nage Gowda is on a point of order.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವ ಸಂದರ್ಭದಲ್ಲಿ ಆಡಳಿತ ನಡೆದುಕೊಂಡು ಬಂದಿರತಕ್ಕ ವೈಖರಿಯನ್ನು ಪ್ರಸ್ತಾಪ ಮಾಡಿದಾಗ ಜಿಲ್ಲಾಧಿಕಾರಿಗಳ ಮತ್ತು ಶಾಸಕರ ಹೆಸರನ್ನು ಹೇಳದೆ, ಜನರಲ್ ಆಗಿ ಹೇಳಿದಾಗ, ಜಿಲ್ಲಾಧಿಕಾರಿಗಳ ಹೆಸರು ಮತ್ತು ಶಾಸಕರ ಹೆಸರು ಹೇಳಬೇಕೆಂದು ಕೇಳಿದ್ದುದು ಇಡೀ ಸದನ. ಇದರಲ್ಲಿ ಪ್ರಿವಿಲೇಜ್ ಬರುವುದಿಲ್ಲ. ಅದಕ್ಕೆ ನಮ್ಮ ಮಾಜಿ ಮುಖ್ಯಮಂತ್ರಿಗಳೂ ಸಹ ಮುಖ್ಯ-ಮಂತ್ರಿಯವರನ್ನು ಒತ್ತಾಯ ಮಾಡಿದ್ದಾರೆ. ಆ ಜಿಲ್ಲಾಧಿಕಾರಿಗಳೂ ಯಾರು ಆ ಶಾಸಕರು ಯಾರು, ಎಂದು ಆಗ ಅವರು 9ನೇ ವಿಧಾನಸಭೆ ಹೇಳಲಿಲ್ಲ, 10ನೇ ವಿಧಾನಸಭೆ ಎಂದು ಹೇಳಲಿಲ್ಲ, ಹಾಗೆ ಹೇಳಿದ ಮೇಲೆ ಈಗ ಅದಕ್ಕೆ ರಾಜಕೀಯ ಸೇಡು ಎಂದು ಹೇಳಿದ್ದು ಮತ್ತೆ ತಿರುಗಿಸಿಕೊಂಡ ಹಾಗೆ ಆಯಿತು.

SRI M. VEERAPPA MOILY : I can't think there is any point of order in what the Hon'ble Member has said. ಇಲ್ಲಿ ಪ್ರಶ್ನೆ ಏನಾಗುತ್ತದೆ ಎಂದರೆ ಇದು ರಾಜಕೀಯ ಸೇಡು ಆಗಬಹುದು, ಏಕೆಂದರೆ ಹಳೆಯ ಅರ್ಜಿಗಳು ಇಲ್ಲಿ ತೀರ್ಮಾನ ಆಗಿಲ್ಲವೆಂದು ಜನ ಹೇಳಬಾರದು. ಹಳೇ ಅರ್ಜಿಗಳನ್ನು ಈಗಿನ ಮುಖ್ಯಮಂತ್ರಿಗಳು ಕೊಟ್ಟಿದ್ದರೂ ಅದು ಆಗ ತೀರ್ಮಾನ ಆಗಲಿಲ್ಲ. ಈಗ ತೀರ್ಮಾನ ಆಗುವುದಕ್ಕೆ ಈ ಸದನದ ವೇದಿಕೆಯನ್ನು ಉಪಯೋಗಿಸಿಕೊಂಡಿದ್ದಾರೆ ಎಂಬ ಆ ಆಪಾದನೆ ತಮ್ಮ ಮೇಲೆ ಆ ಅಧಿಕಾರಿಯ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಮಾಡಿದ್ದೀರಿ. ಆ ಶಾಸಕನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಈ ಮಾತನ್ನು ಆಡಿದ್ದೀರಿ ಎಂದು ಬರಬಾರದು.I don't want the hon'ble Chief Minister should get such kind of a bleme.

ಎರಡನೆಯದು ಏನಾಗುತ್ತದೆ ಅಂದರೆ, it will be a reflection on the entire IAS cadre in Karnataka. Their integrity is reflected. We have to question the integrity of all IAS Officers in Karnataka.

ಆ ಜಿಲ್ಲಾಧಿಕಾರಿ ತನ್ನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಶಾಸಕನ ಹೆಸರು ಹೇಳಿರಬಹುದು. He should have recorded in the file that such and such a legislator has interferred.

ಅಂತಹ ಕೇಸ್‌ನ ಬಗ್ಗೆ ಇರತಕ್ಕಂತಹ ರೆಕಾರ್ಡ್‌ಗಳು ನಮಗೆ ಬೇಕಾಗಿದೆ. Has he recorded that kind of a pressure on him? If he had acted on the pressure then he has to be proceeded with. ಇಲ್ಲದಿದ್ದರೆ ಹಿಂದೆ ಇದ್ದ ಶಾಸಕರ ಮೇಲೆ it will be a privilege. ಏತಕ್ಕೆಂದರೆ ಅವರ ಮೇಲೆ ರಿಫ್ಲೆಕ್ಟ್ ಆಗಬಹುದು. ಅಥವಾ ಇಂದಿನ ಶಾಸಕರ ಮೇಲೆ ರಿಫ್ಲೆಕ್ಟ್ ಆಗಬಹುದು. Now this has become the property of the House. You will have to refer this issue to the privileges Committes suo moto because it has become the property now. whoever is responsible he has to be punished.

ಆದ್ದರಿಂದ ಅಧ್ಯಕ್ಷರೇ, ಇದನ್ನು ಮೂಗುಮ್ಮಾಗ್ಗಿ ಇಲ್ಲಿ ಬಹಳ ಪ್ರಸ್ತಾಪ ಮಾಡಿದ್ದೇನೆ. ಇಲ್ಲಿಗೆ ಬಿಟ್ಟಿದ್ದೇನೆ ಎಂದು ಹೇಳತಕ್ಕಂತಹ ಮಾತಿಗೆ ಸರ್ವಥಾ ನಾನು ಒಪ್ಪುವುದಿಲ್ಲ. ತಮ್ಮ ಮೇಲೆ ಆಪಾದನೆ ಬರುತ್ತದೆ. ತಾವು ಇಡೀ ಕರ್ನಾಟಕ ರಾಜ್ಯ ಬಿಟ್ಟು ಪುನಃ ಹಾಸನ ಜಿಲ್ಲೆ ಪಾಲಿಟಿಕ್ಸ್‌ಗೆ ಹೋಗಿದ್ದೀರಿ ಎಂದು ಆಪಾದನೆ ಬರುತ್ತದೆ. ನಿಮ್ಮ ಮೇಲೆ ಅದು ಇದೆ. ಅದನ್ನು ತೆಗೆದು ಹಾಕತಕ್ಕಂಥ ಕಾರ್ಯಕ್ರಮಕ್ಕೆ ನಮ್ಮ ಮುಖ್ಯಮಂತ್ರಿಗಳು ನಾಂದಿಯನ್ನು ಹಾಕಬೇಕು. ಪುನಃ ಹಾಸನ ಜಿಲ್ಲೆಯ ರಾಜಕೀಯಕ್ಕೆ ಬಂದು ಬಿಟ್ಟರು ಎಂಬ ಅಪವಾದಕ್ಕೆ ತಾವು ಈಡಾಗಬಾರದು ಎಂಬುದು ನಮ್ಮ ಆಶಯ.

Mr. Speaker : have caught this point.

ಶ್ರೀ ಕೆ.ಎನ್. ನಾಗೇಗೌಡ : ಜಿಲ್ಲಾಧಿಕಾರಿಗಳ ಹೆಸರನ್ನು ನೀವೇ ಡಿಮಾಂಡ್ ಮಾಡಿದ್ದೀರಿ. ಅವರ ಹೆಸರನ್ನು ರಿವೀಲ್ ಮಾಡಿದ ಆ ಬ್ಯೂರೋಕ್ರಾಟ್ಸ್ ಅನ್ನು ಪ್ರೊಟೆಕ್ಟ್ ಮಾಡುವುದಕ್ಕೆ ಹೊರಟಿದ್ದೀರಿ ಎಂದು ನಾವು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಯಾರು ಹೆಸರನ್ನು ಹೇಳಬೇಕೆಂದು ಕೇಳಿದ್ದುದು ನಾವೇ; ಅದರಲ್ಲಿ ಏನೂ ಅನುಮಾನವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡುವಾಗ ಆಡಳಿತ ಎಷ್ಟು ಸುಭದ್ರವಾಗಿ ಇರಬೇಕು. ಆ ಸುಭದ್ರತೆ ಹಿಂದೆ ಇರಲಿಲ್ಲ ಎನ್ನುವುದಕ್ಕೆ ಉದಾಹರಣೆಯನ್ನು ಕೊಟ್ಟು ಒಂದು ಉದಾಹರಣೆಯನ್ನು ಅವರು ಹೇಳಿದ್ದಾರೆ. ಹಾಸನ ಜಿಲ್ಲೆಯ ಜಿಲ್ಲಾಧಿಕಾರಿ ಹೈಕೋರ್ಟಿನ ನ್ಯಾಯಾಧೀಶರು ಕೊಟ್ಟಂತಹ ತೀರ್ಪನ್ನು ಕಾರ್ಯಗತ ಮಾಡದೇ ಇರತಕ್ಕಂತಹ ಒತ್ತಡ ಶಾಸಕರೊಬ್ಬರು ತಂದಿದ್ದಾರೆಂದು ಹೇಳಿದ್ದಾರೆ. ಆದರೆ ಅದು ಅವರ ಸರ್ಕಾರದಲ್ಲಿ ಆಯಿತು ಎಂದು ನಾವು ಯಾರೂ ಹೇಳುತ್ತಿಲ್ಲ. ಅವರು ನೇರವಾಗಿ ಹಿಂದಿನ ಸರ್ಕಾರದಲ್ಲಿ ಆಗಿದೆ ಎಂದು ಹೇಳಿದ್ದಾರೆ. ನಾನು ಈ ಬಗ್ಗೆ ಅನೇಕ ಪತ್ರಗಳನ್ನು ಸರ್ಕಾರಕ್ಕೆ ಬರೆದಿದ್ದೇನೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಇದು ಹಕ್ಕು ಚ್ಯುತಿಗಿಂತ ಹೆಚ್ಚಾಗಿ ಸದನವೇ ಕೇಳುತ್ತಿದೆ. ಇದು ಗೋಪ್ಯವಾದಂತಹ ಕಡತಗಳೇನೂ ಅಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಹಿರಂಗವಾಗಿ ಈ ಸದನದಲ್ಲಿಯೇ ಇದನ್ನು ಹೇಳುತ್ತಿದ್ದಾರೆ. ಇಡೀ ಸದನವೇ, ಯಾರೂ ಅಧಿಕಾರಿ ಅವರ ಮೇಲೆ ಒತ್ತಡ ತಂದಂತಹ ಶಾಸಕರು ಯಾರು

ಎಂಬುದನ್ನು ತಿಳಿಸಬೇಕು. ತಪ್ಪು ಏನೂ ಇಲ್ಲ, ಈ ಸದನದ ಮುಂದೆ ಗೋಪ್ಯವಾಗಿ ನಡೆಯತಕ್ಕಂಥದ್ದು ಯಾವುದೂ ಇಲ್ಲ.

ನಿಮ್ಮ ಮೇಲೆ ಏನೂ ಬರುವುದಿಲ್ಲ, ಏನು ಅನ್ಯಾಯ ನಡೆದಿದೆ. ಹಿಂದಿನ ಸರ್ಕಾರಗಳು ಮಾಡಿರುವುದು ಎಂಬುದನ್ನು ಹೇಳೋಣ. ಅವರ ಸರ್ಕಾರದಲ್ಲಿ ಯಾರಿಗೆ ಅನ್ಯಾಯ ಮಾಡಿದ್ದಾರೆ ಅವರ ಸರ್ಕಾರದ ಮೇಲೆ ಗೂಬೆ ಕೂರಿಸೋಣ. ತಾವು ದಯವಿಟ್ಟು ಅದನ್ನು ಹೇಳಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಅಂದಿನ ಮುಖ್ಯಮಂತ್ರಿಗೆ ನಾನು ಈ ಬಗ್ಗೆ ಪತ್ರ ಬರೆದೆ ಎನ್ನುವ ಮಾತನ್ನು ಹೇಳಿದರು. ಅವರು ಸಿ.ಎಂ.ಗೆ ಬರೆದಿರಲಿ, ಸರ್ಕಾರ ಎಂದರೆ ಅಂದು ಇದ್ದಂತಹ ಆ ಸರ್ಕಾರಕ್ಕೆ ಪತ್ರ ಬರೆದಿರುವುದು. ನಾಲ್ಕು ವರ್ಷದಲ್ಲಿ ಮೂರು ಜನ ಮುಖ್ಯಮಂತ್ರಿಗಳು ಆಗುತ್ತಾ ಹೋಗುತ್ತಿದ್ದಾರೆ. ಇದು ಮಾನ್ಯ ವೀರಪ್ಪ ಮೊಯಿಲಿಯವರ ಕಾಲದಲ್ಲಂತೂ ಆಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನನಗೆ ವಿಶ್ವಾಸ ಇವೆ.

ಶ್ರೀ ವಾಟಾಳ್ ನಾಗರಾಜ್ : ಹೇಗೆ ಎಂದು ಹೇಳಿ? ವೀರಪ್ಪಮೊಯಿಲಿಯವರ ಬಗ್ಗೆ ನಿಮ್ಮ ವಿಶ್ವಾಸ ಏನು? ಮಾನ್ಯ ಬಂಗಾರಪ್ಪನವರ ಬಗ್ಗೆ ವಿರೋಧ ಏನು? ಮಾನ್ಯ ಬಂಗಾರಪ್ಪನವರ ಬಗ್ಗೆ ವಿರೋಧ ಏನು?

ಅಧ್ಯಕ್ಷರು : ನೀವು ಬಂಗಾರಪ್ಪನವರ ಪರವಾಗಿ ನಿಲ್ಲಿ, ಅವರು ವೀರಪ್ಪಮೊಯಿಲಿಯವರ ಪರವಾಗಿ ನಿಲ್ಲುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಹಿಂದಿನ ಶಾಸನ ಸಭೆಯಲ್ಲಿ ಸದಸ್ಯನಾಗಿದ್ದೆ. ಮಾನ್ಯ ವೀರಪ್ಪ ಮೊಯಿಲಿಯವರು ಈ ಕಡೆ ಕುಳಿತರು ಎಂದು ಹೇಳಿ ನೀವು ರಾಜಕೀಯ ಮಾಡುವುದಾದರೆ....

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ನೋಡಿ ನಾನು ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ನಾನು ಒಂದು ಸಾರಿ ಈ ಸರ್ಕಾರಕ್ಕೆ ಪತ್ರ ಬರೆದಿದ್ದೆ, ಇದರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ ಮೇಲೆ ಇದು ಇವತ್ತು ಈ ಸದನದ ಸ್ವತ್ತು ಆಗುತ್ತದೆ. ಇನ್ನು ಎರಡನೆಯದು ಅಂದು ನೀವು ಪತ್ರ ಬರೆದಿದ್ದಾಗ, ಅಂದು ಇದ್ದಂತಹ ಮುಖ್ಯಮಂತ್ರಿಗಳು ಯಾರು? ನೀವು ಯಾವ ಡೇಟ್‌ನಲ್ಲಿ ಪತ್ರ ಬರೆದಿದ್ದೀರಿ? ಇವತ್ತು ಬಹಳ ಸುಲಭವಾಗಿ ಒಬ್ಬ ಐಎಎಸ್ ಆಫೀಸರ್ ಹೆಸರನ್ನು ಈ ಸದನದಲ್ಲಿ ಹೇಳಬಹುದು. ಶಾಸಕ ಎಲ್ಲರಿಗಿಂತ ಮೇಲಿನಿಂದ ಇಳಿದು ಬಂದಿದ್ದಾನೆ ಏನು? ಅದಕ್ಕಾಗಿ ಸಮಯದ ದೃಷ್ಟಿಯಿಂದ ಇದು ತುಂಬಾ ಪ್ರಮುಖವಾದಂತಹ ಚರ್ಚೆಯಾಗಬೇಕು. ಅದಕ್ಕೆ ಉತ್ತರ ಕೊಡಬೇಕಾಗಿರುವುದರಿಂದ ಒಂದು ನಿಮಿಷದಲ್ಲಿ ಯಾವಾಗ ತಾವು ಪತ್ರ ಬರೆದಿದ್ದೀರಿ? ಅಂದು ಯಾರು ಮುಖ್ಯಮಂತ್ರಿಗಳಾಗಿದ್ದರು. ಶಾಸಕರ ಹೆಸರು ಹೇಳಿಬಿಟ್ಟು ತಾವು ಮುಂದೆ ಹೋಗಿ. ಈ ಸದನ ಸಂಪೂರ್ಣ ನಿಮಗೆ ಒಪ್ಪಿಗೆಯನ್ನು ಕೊಡುತ್ತದೆ. ಇದು ಏನೂ ಪ್ರಿವಿಲೇಜ್ ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡುವಾಗ ಸಾಮಾನ್ಯವಾಗಿ ಒಂದು ಉದಾಹರಣೆಯನ್ನು ಕೊಡತಕ್ಕಂಥ ರೀತಿಯಲ್ಲಿ ಸದನದಲ್ಲಿ ಹೇಳಿದರು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದನ್ನು ಅವರು ಸಾಮಾನ್ಯ ಉದಾಹರಣೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪಮೊಯಿಲಿಯವರು ಒಂದು ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಾ ಯಾವುದೇ ರಾಜಕೀಯವಾಗಿರತಕ್ಕಂಥ ಸೇಡಿನ ಮನೋಭಾವ ತೋರಿಸುವುದಿಲ್ಲ ಎಂದು ಹೇಳಿ ಕರ್ನಾಟಕದ ಉದ್ದಗಲಕ್ಕೂ ಹೋಗಿ ಮತ್ತೆ ಹಾಸನದ ರಾಜಕೀಯಕ್ಕೆ ಹೋದಿರಿ ಎನ್ನುವಂತಹ ಪ್ರಸಂಗವನ್ನು ಹೇಳಿದಿರಿ. ಹಿಂದೆ ಒಂದು ಸಲ ನಾರದರ ಒಂದು ಪ್ರಸಂಗವಾಗುತ್ತದೆ. ರುಕ್ಮಿಣಿಗೆ ನಾನು ಪಾರಿಜಾತ ಹೂವನ್ನು ಕೊಟ್ಟಿದ್ದೇನೆ ಎನ್ನುವ ಮಾತನ್ನು ಸತ್ಯಾಭಮನ ಎದುರಿಗೆ ಹೇಳಲೇ ಇಲ್ಲವಲ್ಲ ಎಂದು ಸತ್ಯಭಾಮನ ಹಿಂದೆ ಹೇಳಿದಂತೆ ಕರ್ನಾಟಕದ ಜನ ಮಾತನಾಡುತ್ತಾರೆ ಎನ್ನುವಂತಹ ಮಾತನ್ನು ಇವರೇ ಅಪಾದನೆ ಮಾಡುವುದರ ಮೂಲಕ, ಅವರ ಮನಸ್ಸಿನಲ್ಲಿ ಇಲ್ಲತಕ್ಕಂಥಾದ್ದನ್ನು ತಾವು ಹೇಳುವುದರ ಮೂಲಕ ಮತ್ತೆ ವ್ಯಾಪಕ ಪ್ರಚಾರ ಪಡೆಯತಕ್ಕಂಥ ಪ್ರಯತ್ನ ಇದು.

ಶ್ರೀ ಎಂ. ವೀರಪ್ಪ ಮೊಯಿಲಿ : ನಮಗೆ ದೇವೇಗೌಡರ ಮೇಲೆ ಬಹಳ ಅಪಾರವಾದಂತಹ ಅಭಿಮಾನ ಇದೆ. ಅದಕ್ಕೆ ಅವರ ಮೇಲೆ ಯಾವ ರೀತಿಯಾದ ಆಪಾದನೆ ಬರಬಾರದು. ಅವರನ್ನು ಕಾದುಕೊಳ್ಳಬೇಕು ಎಂದು ಆ ಉದ್ದೇಶದಿಂದ ಹೇಳಿದ್ದೇವೆ ಅಷ್ಟೆ.

ಅಧ್ಯಕ್ಷರು : ಮಾನ್ಯ ಸಭಾನಾಯಕರು ಆಡದ ಮಾತುಗಳನ್ನು ನಾನು ಬಹಳ ಎಚ್ಚರಿಕೆಯಿಂದ ಗಮನಿಸಿದ್ದೇನೆ. ಆದರಿಂದ ಉದ್ಭವವಾದಂತಹ ಪರಿಸ್ಥಿತಿಯನ್ನು ಕೂಡ ನಾನು ಬಹಳ ಗಂಭೀರವಾಗಿ ನೋಡಿದ್ದೇನೆ. ಮತ್ತು ಹಲವಾರು ಹಿರಿಯ ಸದಸ್ಯರುಗಳು ತಾವು ಏನು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದೀರಿ ಅದನ್ನು ಕೂಡ ನಾನು ಕೇಳಿದ್ದೇನೆ. ಸನ್ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿದರು ಈಗಲೇ ಹೇಳಿ ಆ ಗೌಪ್ಯ ಏನು ಎಂದು. ಮತ್ತೆ ಸನ್ಮಾನ್ಯ ಯಡಿಯೂರಪ್ಪನವರು ಹೇಳಿದರು, it is the property of the House ಎಂದು. ತಾವು ಕೇಳುವುದು ತಮ್ಮ ಹಕ್ಕು. ಅವರು ಹೇಳುವುದಕ್ಕೆ ಕೆಲವು ನಿರ್ಬಂಧಗಳು ಇವೆ. ಯಾವುದೇ ಡಾಕ್ಯುಮೆಂಟ್ಸ್‌ನ್ನು ಸಭೆಯ ಮುಂದೆ ಇಟ್ಟಾಗ it becomes the property of the House. ಡಾಕ್ಯುಮೆಂಟ್ಸ್‌ನ್ನು ಅವರು ಇಲ್ಲಿ ಇಟ್ಟಿಲ್ಲ, ನಮ್ಮ ನಿಯಮಾವಳಿ 328ರ ಪ್ರಕಾರ ಒಂದು ಇನ್‌ಕ್ರಿಮಿನೇಟಿಂಗ್ ಅಥವಾ ಡೆರೋಗೇಟರಿ ರಿಮಾರ್ಕ್ ಮಾಡಬೇಕಾದ್ದರೆ, ಅಧ್ಯಕ್ಷರಿಗೆ ಆಪಾದನೆ ಮಾಡಬಯಸತಕ್ಕಂಥವರು ಪೂರ್ವಭಾವಿಯಾಗಿ ಒಂದು ನೋಟೀಸ್‌ನ್ನು ಕೊಟ್ಟು ನಮಗೆ ಸೂಚನೆ ಕೊಡಬೇಕಾಗುತ್ತದೆ.

ಒಂದು ವೇಳೆ ಆರೋಪಣೆಗೆ ಒಳಗಾಗಿರತಕ್ಕಂಥವರು ಇಲ್ಲಿದ್ದಾರೋ, ಹೊರಗೆ ಇದ್ದಾರೋ ನಮಗೆ ಗೊತ್ತಿಲ್ಲ, ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶ....

(Interruptions)

ಶ್ರೀ ಹೆಚ್.ಎನ್. ನಂಜೇಗೌಡ : ತಾವು ರೂಲಿಂಗ್ ಕೊಡಬೇಡಿ.

(Interruptions)

SRI H.N. NANJE GOWDA : The rule you are quoting Sir, ...

ಶ್ರೀ ಸಿದ್ಧರಾಮಯ್ಯ : ಅಧ್ಯಕ್ಷರೆ, ಇವರು ಎಂ.ಎಲ್.ಎ.ಗಳನ್ನು ಬ್ಲಾಕ್ ಮೇಲ್ ಮಾಡುತ್ತಿರುವ ಹಾಗೆ ಕಾಣುತ್ತಿದೆ.

SRI H.N. NANJE GOWDA : It does not apply to a Minister or a Chief Minister. It is for a Member against a Member.

MR. SPEAKER : Kindly read that. Chief Minister is also a Member. Kindly read the whole thing.

ಶ್ರೀ ಹೆಚ್.ಎನ್. ನಂಜೇಗೌಡ : ಅದನ್ನು ಓದಿಕೊಂಡಿದ್ದೇನೆ.

MR. SPEAKER : To help me.

Sri H.N. Nanje Gowda : I know. The Speaker cannot compel the Chief Minister or any Minister or cannot force them to speak or make a statement or mention the name. But, they cannot take the shelter under this rule. The only thing is, if the Minister purposely made this statement with an ulterior motive....

ಅಷ್ಟೆ ಅಂದುಕೊಳ್ಳಬೇಕಾಗುತ್ತದೆ ನಾವು. ಇನ್ನೇನಿಲ್ಲ ಯಾವುದೋ ಉದ್ದೇಶ ಇಟ್ಟುಕೊಂಡು ಹೇಳಿದ್ದಾರೆ. But not now....

(ಗೊಂದಲ)

ಅಧ್ಯಕ್ಷರೆ, ಇದು ಯಾವುದೇ ದುರುದ್ದೇಶದಿಂದ ಮಾಡಿರುವಂತಹ ಹೇಳಿಕೆಯಲ್ಲ, ಆಡಳಿತ ಸುಧಾರಣೆ ಮಾಡುವಂತಹ ಪದ್ಧತಿಯನ್ನು ನಾವು ಮಾಡಿದ್ದೇವೆ. ಅದಕ್ಕೆ ನಾವು ಬದ್ಧರಾಗಿದ್ದೇವೆ. ಆ ಕಾರಣದಿಂದ ಹಿಂದೆ ಆಡಳಿತದಲ್ಲಿ ಆಗಿರುವಂಹ ದೋಷಗಳಲ್ಲಿ ಈ ರೀತಿಯದ್ದು ಆಗಿದೆ ಎಂದು ಉದಾಹರಣೆಯ ಮೂಲಕ ಹೇಳಿದ್ದಾರೆಯೇ ಹೊರತು ನೀವು ಒತ್ತಡ ಮಾಡಿದ ಮೇಲೆ ಆ ಜಿಲ್ಲಾಧಿಕಾರಿಗಳ ಹೆಸರನ್ನು ಮೆನ್‌ಷನ್ ಮಾಡಿದ್ದಾರೆ. ಅದು ಯಾರೆಂಬ ಹೆಸರನ್ನು ಹೇಳಿಯೇ ಇರಲಿಲ್ಲ, ಈಗ ಇವರ ಒತ್ತಡಕ್ಕೋಸ್ಕರ ಮಾಡಿರುವುದರಿಂದ ಅವರ ಹೆಸರು ಹೇಳಿ ಎಂದು ಹೇಳತಕ್ಕದ್ದು ಸರಿಯಲ್ಲ, ಮತ್ತು ನೀವು ಹೇಳಿದಂಥ ರೂಲ್ ಇದೆಯಲ್ಲಾ ಅದು ಮಾನ್ಯ ಮುಖ್ಯಮಂತ್ರಿಗಳಿಗೂ ಅನ್ವಯವಾಗುತ್ತದೆ.

MR. SPEAKER : You are a senior Member. With due respect. I want to know, is there any difference between the Chief Minister and the other Members of this House? Is not the rule uniformly applicable to one and all in this House? Is it not the Chief Minister who is incidentally a Member expected to comply with the rule? Am I not here to be given prior notice of this? Can the Chief Minister pass a derogatory remark against any Member of this House without giving prior notice to mem?

SRI H.N. NANJE GOWDA : He is shielding the truth.

MR. SPEAKER : That is a matter of opinion. But, how am I to function?

SRI H.N. NANJE GOWDA : The Chief Minister is a member. He represents the Executive. He is not the representative of this House. He represents the Executive. It is the duty of the Executive....

MR. SPEAKER : I would like to be educated from the House.

ಶ್ರೀ ಹೆಚ್.ಡಿ. ದೇವೇಗೌಡ : ನನ್ನ ಹತ್ತಿರ ಇರತಕ್ಕಂಥಾದ್ದು ಯಾವುದನ್ನೂ ಶೀಲ್ಡ್ ಮಾಡಬೇಕಾದದ್ದೇನಿಲ್ಲ, ಶೀಲ್ಡ್ ಮಾಡುವಂತಹ ಅವಶ್ಯಕತೆಯೂ ಇಲ್ಲ. ಒಂದೇ ಒಂದು ಪ್ರೊಸೀಜರ್ ಹೇಳಿದೆ. ನಾನು ಹೇಳುವಾಗ ಶಾಸಕರ ಒತ್ತಡಕ್ಕೆ ಮಣಿದು ಜಿಲ್ಲಾಧಿಕಾರಿಗಳಿಗೆ ಕೆಲಸ ಮಾಡಲಿಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದೆ. ಡಾಕ್ಯೂಮೆಂಟರಿ ಎವಿಡೆನ್ಸ್, ಸ್ಟೇ ಆರ್ಡರ್, ಕಾಗದ ಪತ್ರಗಳು ನನ್ನ ಹತ್ತಿರ ಇಲ್ಲದೇ ನಾನು ಯಾವುದೂ ಮಾತನಾಡಲಿಕ್ಕೆ ಹೋಗುವುದಿಲ್ಲ ಆದರೆ ಯಾರ ಹೆಸರೂ ತೆಗೆಯಲಿಲ್ಲ ನಾನು. ನೀವು ulterior motive ಇಟ್ಟುಕೊಂಡು ಹೇಳಿದಿರಿ ಹಾಗೂ ಇನ್ನೂ ಮುಂದೆ ಹೋಗಿ ಮಾತನಾಡಿದರು. ನಮ್ಮ ಮಾಜಿ ಮುಖ್ಯಮಂತ್ರಿಗಳು ಹೇಳಿದರು ಒಬ್ಬ ಆಫೀಸರ್ ಅನ್ನು ಸಸ್ಪೆಂಡ್ ಮಾಡಿದರೆ entire bureaucracy ಈ ದೇಶದಲ್ಲೆಲ್ಲಾ....

ಶ್ರೀ ಎಂ. ವೀರಪ್ಪ ಮೊಯಿಲಿ : ಈ ರೀತಿ ಹೇಳಿದರೆ ತಪ್ಪಾಗುತ್ತದೆ.

SRI H.D. DEVEGOWDA : Please hear me.

ಶ್ರೀ ಶಂಕರ ನಾರಾಯಣ್‌ರವನ್ನು ಸಸ್ಪೆಂಡ್ ಮಾಡಿದಾಗ ಇಡೀ ಬ್ಯೂರೋಕ್ರಸಿ ಏನೂ ತಿರುಗಿ ಬೀಳಲಿಲ್ಲ, ನೀವು ಶ್ರೀ ಅಲೆಗ್ಸಾಂಡರ್ ಏನೂ ತಿರುಗಿ ಬೀಳಲಿಲ್ಲ, ನೀವು ಶ್ರೀ ಅಲೆಗ್ಸಾಂಡರ್ ಅವರನ್ನು ಸಸ್ಪೆಂಡ್ ಮಾಡಿದ್ದೀರಿ. ಆಗ ಎನ್‌ಟೈರ್ ಬ್ಯೂರೋಕ್ರಸಿ ಏನೂ ತಿರುಗಿ ಬೀಳಲಿಲ್ಲ, Yes, I do agree.

SRI M. VEERAPPA MOILY : I am not arguing.

ಶ್ರೀ ಹೆಚ್.ಡಿ. ದೇವೇಗೌಡ : ಎಲ್ಲಿ ತಪ್ಪು ಆಗುತ್ತದೆಯೇ ಅಲ್ಲಿ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದುಮುಂದು ನೋಡುವುದಿಲ್ಲ ಎನ್ನುವುದಕ್ಕೆ ನಾನು ಹೇಳಿದ್ದೇನೆ. ಇಲ್ಲಿಂದ ಮುಂದಕ್ಕೆ ರಾಜಕೀಯ ಹಸ್ತಕ್ಷೇಪಕ್ಕೆ, ರಾಜಕೀಯ ಒತ್ತಡಕ್ಕೆ ಮಣಿದು ಜಿಲ್ಲಾಧಿಕಾರಿಯಾಗಲೀ, ಎಸ್‌ಪಿ. ಯಾಗಲೀ ಅವರನ್ನು ನಾವು ರೆಸ್‌ಪಾನ್ಸಿಬಲ್ ಮಾಡುತ್ತೇವೆ. ಯಾವುದೇ ಕಾರಣಕ್ಕೂ ಇಂತಹ ಘಟನೆಗೆ ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದೇನೆ. ಇನ್ನು ಒಂದು ಮಾತನ್ನು ಹೇಳಿದ್ದೇನೆ.

(INTERRUPTIONS)

MR. SPEAKER : Let him answer. ನಾನು ಇಂತಹ ವಿಷಯಗಳು ಬಂದಾಗ ಆತುರಾತುರವಾಗಿ ಯಾವುದೇ ತೀರ್ಮಾನಕ್ಕೆ ಬರುವುದಕ್ಕೆ ತಯಾರಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಆ ನಿರಪರಾಧಿ ಅಧಿಕಾರಿಯ ಹೆಸರನ್ನು ತಂದಿದ್ದಿರಲ್ಲಾ ನೀವು ಅಧಿಕಾರಿಗಳ ಹೆಸರು ಹೇಳಿದ ಮೇಲೆ ಸಂಬಂಧಪಟ್ಟ ದಾಖಲೆಗಳನ್ನು ಇಲ್ಲಿ ಇಡಬೇಕು. Otherwise you must withdraw that statement ಆಗಬಹುದು ಅಧಿಕಾರಿಗಳ ಹೆಸರನ್ನು ಹೇಳಿದ ಮೇಲೆ ಯಾವ ಹಿನ್ನಲೆಯಲ್ಲಿ ಏನು ಘಟನೆಯಾಗಿದೆ ಅದರ ದಾಖಲೆಯನ್ನು ಇಲ್ಲಿ ಪ್ರೊಡ್ಯೂಸ್ ಮಾಡಿ.

ಶ್ರೀ ಹೆಚ್.ಡಿ. ದೇವೇಗೌಡ : ಅಧಿಕಾರಿಗಳ ಹೆಸರನ್ನು ಹೇಳುವಾಗ, ಸಭೆಯಲ್ಲಿ ನಿರ್ಬಂಧ ಕಾಣಲಿಲ್ಲ, ಏಕೆಂದರೆ ಅಲೆಗ್ಸಾಂಡರ್ ಹೆಸರನ್ನು ಬೆಳಿಗ್ಗೆ ಪ್ರಸ್ತಾಪ ಮಾಡಿದ್ದೀರಿ. ಅಧಿಕಾರಿಗಳ ಹೆಸರನ್ನು ಹೇಳುವಾಗ ನಿರ್ಬಂಧ ಕಾಣಲಿಲ್ಲ. ಅದನ್ನು defend ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಇದೆ.

ಯಾವ ಅಧಿಕಾರಿ ಡಿ.ಸಿ. ಇರುತ್ತಾನೋ He is a representative of the Government. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಯಾವುದೇ ಮುಲಾಜು ನೋಡಬೇಕಾದ್ದಿಲ್ಲ; ಆದರೆ ಒಂದೇ ಒಂದನ್ನು ನಾನು ನಿಮಗೆ ಹೇಳುತ್ತೇನೆ, ನಾನು

ಈ ಸಭೆಯ ನಿಯಮಾವಳಿಯನ್ನು ಉಲ್ಲೇಖ ಮಾಡಿದೆ. ನಿಮಗೆ ಎಲ್ಲಾ ಡಾಕ್ಯುಮೆಂಟ್ಸ್‌ಗಳನ್ನು ಕಳುಹಿಸುತ್ತೇನೆ. ನೀವು ಇವೊತ್ತು ಈ ವಿಷಯದ ಬಗ್ಗೆ ಹೈಕೋರ್ಟ್ ಸ್ಟೇ ಆರ್ಡರ್, ಡೆಪ್ಯೂಟಿ ಕಮೀಷನರ್‌ರವರು ಬರೆದಿರುವ ಕಾಗದ, ಏನೇನಿದೆ ಎಲ್ಲಾ ಕರೆಸ್ಪಾಂಡೆನ್ಸ್‌ಗಳನ್ನೂ ನಿಮ್ಮ ಮುಂದೇನೇ ಕಳುಹಿಸುತ್ತೇನೆ. ಆ ರೂಲ್ ಅನ್ನೇ ನೀವು ಇವೊತ್ತು ಪಾಲನೆ ಮಾಡದೆ ಹೇಳಬೇಕು ಎಂದು ಹೇಳಿದರೆ, ಸಭೆಯ ಮುಂದೆ ಇಡಬಹುದು. ಇಲ್ಲದೇ ಇದ್ದರೆ ನೀವು ಏನು ತೀರ್ಪು ಕೊಡುತ್ತೀರೋ ಆ ತೀರ್ಪಿಗೆ ಕೊಡುವುದಕ್ಕೆ ನನ್ನದೇನೂ ತಕರಾರು ಇಲ್ಲ I will send the entire copy of the High Court and the correspondence between the Officers and the Government.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಮುಕ್ತ ಮನಸ್ಸಿನಿಂದ ಹೇಳುತ್ತಿದ್ದೀರಿ, ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮುಖ್ಯಮಂತ್ರಿಗಳು ಒಂದು ಸಲ ಈ ಸದನದಲ್ಲಿ ಅದನ್ನು ಪ್ರಸ್ತಾಪ ಮಾಡಿದ ಮೇಲೆ ಅದು ಈ ಸದನದ ಸ್ವತ್ತಾಯಿತು. ಅದು ಪ್ರೋಸೀಡಿಂಗ್ಸ್‌ನಲ್ಲಿ ಹೋಗಿದೆ.

SRI H.D. DEVE GOWDA : Unless I place the document on the table of the House.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಅದು ಪ್ರೋಸೀಡಿಂಗ್ಸ್‌ನಲ್ಲಿ ಹೋಗಿದೆ, ಕೌಶಿಕ್‌ರವರ ಹೆಸರೂ ಬಂದಿದೆ, ಇದರ ಅರ್ಥ ಏನೆಂದರೆ ಹಿಂದೆ ಇಗತಕ್ಕಂಥ ಡೆಪ್ಯೂಟಿ ಕಮೀಷನರ್‌ರವರು ನನ್ನ ಮಾತನ್ನು ಕೇಳಲಿಲ್ಲ, ಆ ಶಾಸಕರ ಒತ್ತಡದಿಂದ, ಹೈಕೋರ್ಟ್‌ನಿಂದ ಬಂದಂಥ ಅನೇಕ ಆಜ್ಞೆಗಳನ್ನು ಪರಿಪಾಲನೆ ಮಾಡಲಿಲ್ಲ, ಅವರು ಇಂಪ್ಲಿಮೆಂಟ್ ಮಾಡಲಿಲ್ಲ ಅದಕ್ಕಾಗಿ ಈ ಸದನದ ಮುಖಾಂತರ ನಾನು ಎಚ್ಚರಿಕೆ ಕೊಡುತ್ತಿದ್ದೇನೆ ಎನ್ನತಕ್ಕಂಥ ಸಂದೇಶ ಹೋಗುತ್ತದೆಯೇ ಹೊರತು ನೀವು ಸರಿಪಡಿಸುತ್ತೇವೆ ಎನ್ನತಕ್ಕಂಥ ಸಂದೇಶ ಹೋಗಲಿಲ್ಲ, ನಿಮ್ಮ ಜಿಲ್ಲೆಯಲ್ಲಿ ನಡೆದ ಘಟನೆ ಬಗ್ಗೆ ತಾವೇನು ಪ್ರಸ್ತಾಪ ಮಾಡುತ್ತಾ ಇದ್ದೀರಿ, ಇದು ಕೊನೆಗೆ ಏನಾಯಿತ್ತು; ನಾನು ರಾಜಕೀಯವನ್ನು ಮಾಡುವುದಿಲ್ಲ ಎಂದು ಹೇಳಿ ಸುತ್ತಿ ಬಳಸಿ ಅಲ್ಲಿನ ಶಾಸಕರು ಹೀಗೆ ಮಾಡಿದರು; ಆ ಜಿಲ್ಲೆಯಲ್ಲಿ ಹೀಗಾಯಿತು ಎಂದು ಹೇಳಿ ಅಪ್ರತ್ಯಾಕ್ಷವಾಗಿ ನೀವು ಅವರನ್ನು ಹೆದರಿಸುತ್ತೀದ್ದೀರಿ. Indirectly, you are threatening them. ಈ ರೀತಿಯಾಗಿ ನಿಮ್ಮ ಕಾಲದಲ್ಲಿ ನಡೆಯಿತು, ಈಗ ಅದನ್ನು ನಾವು ಸಹಿಸುವುದಿಲ್ಲ....,

MR. SPEAKER : My problem is Shivakumar; ನಿಮ್ಮ ಪಾರ್ಟಿಯಿಂದ ಬಂಡಾಯ ಅಭ್ಯರ್ಥಿಯಾಗಿ ಗೆದ್ದು ಬಂದಿದ್ದಾರೆ.. He is standing for a long time.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ. ಆಗ ಆ ಶಾಸಕರಿಗೂ ಅವಕಾಶ ಸಿಗುತ್ತದೆ, ಡೆಪ್ಯೂಟಿ ಕಮೀಷನರ್‌ರವರಿಗೂ ಅವಕಾಶ ಸಿಗುತ್ತದೆ ಮತ್ತು ಆ ಫೈಲ್‌ನಲ್ಲಿ, ಡೆಪ್ಯೂಟಿ ಕಮೀಷನರ್‌ರವರು ಒಂದೇ ವೇಳೆ ಶಾಸಕರು ಅಡಚಣೆ ಮಾಡಿದ್ದಕ್ಕಾಗಿ ಈ ಹೈಕೋರ್ಟ್‌ನಿಂದ ಬಂದಂಥ ತೀರ್ಮಾನವನ್ನು ನನಗೆ ಇಂಪ್ಲಿಮೆಂಟ್ ಮಾಡುವುದಕ್ಕೆ ಆಗಲಿಲ್ಲ, ಆಚರಣೆಯಲ್ಲಿ ತರಲಿಕೆ ಆಗಲಿಲ್ಲ ಎಂದು ಹೇಳಿ ಬರೆದಿದ್ದರೆ ಆ ಫೈಲೂ ಕೂಡ ಬರುತ್ತದೆ. ಎವಿಡೆನ್ಸ್ ರೆಕಾರ್ಡ್ ಮಾಡುವುದಕ್ಕಾಗುತ್ತದೆ. ಅದಕ್ಕಾಗಿ ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ; ಆಮೇಲೆ ಫೈಡಿಂಗ್ಸ್ ಬರುತ್ತದೆ. ಯಾರು ಏನು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಇದರಿಂದ ಅವರಿಗೆ ಕ್ಲಿಯರಾಗಿ ಮೆಸೇಜೂ ಕೂಡ ಹೋಗುತ್ತದೆ. ದೇವೇಗೌಡರು

ಕೊಟ್ಟಂಥ ಅರ್ಜಿಗಳು ಯಾರು ಯಾರು ತೀರ್ಮಾನ ಮಾಡಿಲ್ಲ, ಅಂಥವರಿಗೆ ಇದೇ ರೀತಿಯಾಗಿ ಶಿಕ್ಷೆ ಆಗುತ್ತದೆ ಎಂಬುದು ಗೊತ್ತಾಗುತ್ತದೆ..

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಇದು ನಮ್ಮ ಜಿಲ್ಲೆಯ ವಿಚಾರ, ಇಲ್ಲಿರುವಂಥ ಶಾಸಕರ ವಿಚಾರ ಎಂದು ಪ್ರಸ್ತಾಪ ಮಾಡಿದ್ದಾರೆ. ಅವರು ಹಿಂದೆ ಗೆದ್ದಿದವರ ಪೈಕಿ ಇಲ್ಲಿರುವುದು ಇಬ್ಬರೇ, ಇಲ್ಲಿರುವಂಥ ಸದಸ್ಯರ ಪೈಕಿ ಅವರೇನಾದರೂ ವಿಚಾರ ಮಾತನಾಡಬೇಕಾದರೆ ಬಹುಶಃ, ಅವರು ಹೆಸರನ್ನು ಪ್ರಸ್ತಾಪ ಮಾಡುವುದು ಸೂಕ್ತ ಎಂದು ನಾನಂತೂ ತಿಳಿದುಕೊಂಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸದನವನ್ನು ಮುಂದೂಡಿ, ಆ ಡಾಕ್ಯುಮೆಂಟ್ಸ್‌ನ್ನು ತೆಗೆದುಕೊಳ್ಳಿ; ನೋಡೋಣ ಪರಿಶೀಲನೆ ಮಾಡಿ ಏನು ಮಾಡಬೇಕೋ ಅದನ್ನು ಮಾಡೋಣ. ಇಲ್ಲದಿದ್ದರೆ ಅವರ ಹತ್ತಿರ ಏನೂ ಡಾಕುಮೆಂಟ್ಸ್ ಇಲ್ಲ ಯಾರೋ ಒಬ್ಬ ಅಧಿಕಾರಿಯ ಮೇಲೆ ದೂರು ಮಾಡಿದಂತಾಗುತ್ತದೆ. ಅಧಿಕಾರಿಗಳು ತಲೆತಗ್ಗಿಸುವಂಥ ಘಟನೆ ನಡೆದಿದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾವು ಇದನ್ನು ಸಹಿಸಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ; ಯಾವ ಡೇಟ್‌ಸಲ್ಲಿ ನೀವು ಪತ್ರ ಬರೆದಿರಿ, ದಯವಿಟ್ಟು ಅದನ್ನು ಪರಿಶೀಲನೆ ಮಾಡಿ ಆಮೇಲೆ ನೀವು ತೀರ್ಮಾನಕ್ಕೆ ಬನ್ನಿ; ದಯಮಾಡಿ ರೂಲಿಂಗನ್ನು ರಿಸರ್ವ್ ಮಾಡಿ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರಲ್ಲಿ ಒಂದು ಮನವಿ ಮಾಡುತ್ತೇನೆ. ಸನ್ಮಾನ್ಯ ನಂಜೇಗೌಡರು ಮತ್ತು ಇನ್ನೂ ಅನೇಕ ಜನ ಹಿರಿಯ ಸದಸ್ಯರಿದ್ದೀರಿ; ಸಬ್‌ಮಿಷನ್ ತಾವು ನಮಗೆ ಮಾಡಬಹುದು, ಹತ್ತು ನಿಮಿಷಗಳ ಕಾಲ ಸದನವನ್ನು ಮುಂದೂಡಿ ಹತ್ತು ನಿಮಿಷದೊಳಗೆ ನಾನು ನಿರ್ಣಯ ತೆಗೆದುಕೊಳ್ಳುವುದಕ್ಕೆ ಕಷ್ಟವಾಗಬಹುದು, ನನಗೆ ಲೀಗಲ್ ಬ್ಯಾಕ್‌ಗ್ರೌಂಡ್ ಏನೂ ಇಲ್ಲ, ನಾನು ಇಂತಹ ಒಂದು ಗಂಭೀರವಾದ ವಿಷಯದಲ್ಲಿ ಒಂದು ನಿರ್ಣಯವನ್ನ ತೆಗೆದುಕೊಳ್ಳಬೇಕಾದರೆ ಪರಿಪೂರ್ಣವಾಗಿ ಆಲೋಚನೆ ಮಾಡಿ ಸಂಬಂಧಪಟ್ಟವರ ಬಳಿ ಚರ್ಚೆ ಮಾಡಿ ಸರಿಯಾದಂಥ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ.

ಏತಕ್ಕೆಂದರೆ ನಾನು ಒಂದು ಅಬ್ಸರ್ವೇಷನ್ ಮಾಡಿದರೆ, that remains. I am making an observation. To make a submission to me, I welcome; but to suggest that I should come back in 10 minutes time with a decision is a very difficult proposition for me. I request the Hon. Members to appreciate my situation.

ಶ್ರೀ ಹೆಚ್.ಎನ್. ನಂಜೇಗೌಡ : ನನ್ನ ಒಂದು ಮನವಿ ಏನೆಂದರೆ, ಮಾನ್ಯ ಸದಸ್ಯರಿಗೆ ಇರುವಷ್ಟೇ ಪ್ರಿವಿಲೇಜ್ ಮಾನ್ಯ ಮುಖ್ಯಮಂತ್ರಿಗಳಿಗೂ ಇದೆಯೆಂದು ತಾವು ಹೇಳಿದಿರಿ. ಅವರು ಇವೊತ್ತು ರಾಜೀನಾಮೆ ಕೊಟ್ಟರೆ ಅವರು ನಮಗೆ ಸಮನಾಗುತ್ತಾರೆ. Now, he is answerable to this House and every hon. Member of this House because he has become the Head of the Executive. ಇದು ಎಲ್ಲಾ ಕಡೆ ಇರುವುದು. ಇದು ಬಹಳ ಸಿಂಪಲ್. ಇದರಲ್ಲಿ ವಾದ ಮಾಡುವುದಕ್ಕೆ ಏನೂ ಉಳಿದುಕೊಂಡಿಲ್ಲ, His footing is different as a Chief Minister. Our footing is different as a member of this House. He is answerable to the House. He heads the executive in the State and you represent the Legislature in the State.

ಈ ವ್ಯತ್ಯಾಸಗಳನ್ನು ತಾವು ಅರ್ಥ ಮಾಡಿಕೊಂಡು ತೀರ್ಮಾನ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ತಮ್ಮ ವಿವರಣೆಗಳನ್ನು ನಾನು ಅನುಮೋದಿತ್ತೇನೆ. ಇದರಲ್ಲಿ ಎರಡು ಅಭಿಪ್ರಾಯವಿಲ್ಲ. To overcome this crisis and to continue the business, I feel whatever documents that are available with the Cheif Minister be sent to me. I will look into all the records and I will pronounce my ruling. I hope it is a very honourable way.

ಮಾನ್ಯ ಸಭಾ ನಾಯಕರು ತಮ್ಮಲ್ಲಿರುವ ಎಲ್ಲಾ ಕಾಗದ ಪತ್ರಗಳನ್ನು ನನಗೆ ಕಳುಹಿಸಿ ನಂತರ ನನ್ನ ರೂಲಿಂಗ್ ಅನ್ನು ಕೊಡುತ್ತೇನೆ.. ಈಗ ಕಾರ್ಯಕಲಾಪಗಳನ್ನು ಮುಂದುವರೆಸೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು.

ಶ್ರೀ ಪಿ.ಟಿ. ರಾಮಸ್ವಾಮಿ : ಮಾನ್ಯ ಸಭಾಧ್ಯಕ್ಷರೆ.....

ಶ್ರೀ ಹೆಚ್.ಡಿ ದೇವೇಗೌಡ : ಮತ್ತೆ ಏತಕ್ಕೆ ಮಾತನಾಡುತ್ತೀರಿ? ಮಾನ್ಯ ಅಧ್ಯಕ್ಷರೆ, ತಾವು ಏನು ರೂಲಿಂಗ್ ಕೊಟ್ಟಿದ್ದೀರೋ, ಆ ರೂಲಿಂಗ್‌ಗೆ ನಾನು ಶಿರಸಾ ವಹಿಸಿ ನನ್ನಲ್ಲಿರತಕ್ಕ ಎಲ್ಲಾ ಡಾಕ್ಯುಮೆಂಟ್ಸ್‌ನ್ನೂ, ಹೈಕೋರ್ಟ್ ಆದೇಶಗಳನ್ನೊಳಗೊಂಡಂತೆ ಎಲ್ಲಾ ದಾಖಲಾತಿಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ತಾವು ಯಾವ ಕ್ರಮವನ್ನು ಅನುಸರಿಸಬೇಕೆಂದು ಹೇಳಿದ್ದೀರಿ ಅದಕ್ಕೆ ನಾನು ತಲೆಬಾಗುತ್ತೇನೆ. ಅದರ ಬಗ್ಗೆ ಮತ್ತೆ ದೊಡ್ಡ ಚರ್ಚೆ ಮಾಡುವುದು ಬೇಡ. ಇನ್ನುಳಿದ ವಿಚಾರಗಳ ಬಗ್ಗೆ ನನ್ನ ಭಾಷಣವನ್ನು ಮುಂದುವರೆಸುತ್ತೇನೆ, ಆಗಬಹುದಲ್ಲಾ! ಇದರಲ್ಲಿ ಹಿಂದೆ-ಮುಂದೆ ನೋಡಬೇಕಾದ ಅಗತ್ಯವಿಲ್ಲ. ನನಗೆ ಯಾರ ಮೇಲೂ ಮೂಲಭೂತ ಇಂಟೆನ್‌ಷನ್ ಇದ್ದು ಅವರ ಹೆಸರು ತೆಗೆದು ಹೇಳಬೇಕೆಂದು ಹೇಳಲಿಲ್ಲ. ಆದರೆ, ನಾನು ಇದನ್ನು ಯಾವ ಕಾಂಟೆಕಟ್ಸ್‌ನಲ್ಲಿ ಹೇಳಿದೆನೆಂದರೆ, ಇವೊತ್ತು ನಾವು ಈ ರಾಜ್ಯದಲ್ಲಿ ಕೆಳಗಡೆ ಇರತಕ್ಕ ಅಧಿಕಾರಿಗಳ ವಿರುದ್ಧ ಕ್ರಮವನ್ನು ತೆಗೆದುಕೊಂಡರೆ ಯಾವುದೇ ಪ್ರಯೋಜನವಾಗುವುದಿಲ್ಲ, ಇವೊತ್ತು ಯಾರೋ ಒಬ್ಬ ವಿಲೇಜ್ ಅಕೌಂಟೆಂಟ್ ಅಥವಾ ರೆವಿನ್ಯೂ ಇನ್ಸ್‌ಪೆಕ್ಟರ್ ಅಥವಾ ಕಾನ್‌ಸ್ಟೇಬಲ್ ಅಥವಾ ಹೆಡ್ ಕ್ಯಾನ್ಸ್‌ಟೇಬಲ್‌ಗಳ ಮೇಲೆ ನಾವು ಕ್ರಮ ತೆಗೆದುಕೊಂಡರೆ ಪ್ರಯೋಜನವಾಗುವುದಿಲ್ಲ. ಆದರೆ, ಯಾರು ಜಿಲ್ಲಾಧಿಕಾರಿ ಇರುತ್ತಾನೆ, ಅವನೇ ಇದಕ್ಕೆಲ್ಲಾ ಜವಾಬ್ದಾರನಾಗಬೇಕಾಗುತ್ತದೆ. ಆಡಳಿತದಲ್ಲಿ ಇವೊತ್ತು ತಾಲ್ಲೂಕು ಮಟ್ಟದಲ್ಲಿ ಜನ ಸಾಮಾನ್ಯರಿಗೆ ಯಾವುದೇ ಸಂದರ್ಭದಲ್ಲಿ ಕಾನೂನಿಗೆ ವಿರುದ್ಧವಾಗಿ ನಡೆಮುಕೊಳ್ಳುವುದಕ್ಕೆ ಅವಕಾಶವಿಲ್ಲ ಎನ್ನತಕ್ಕ ವಾತಾವರಣವನ್ನು ನಿರ್ಮಾಣ ಮಾಡಬೇಕೆಂಬ ಉದ್ದೇಶದಿಂದ ಹೇಳಿದೆ. ಅದು ಲಾ ಅಂಡ್ ಆರ್ಡರ್ ವಿಚಾರವಿರಬಹುದು, ರೆವಿನ್ಯೂ ವಿಚಾರವಿರಬಹುದು,ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟ ಪ್ರಶ್ನೆಯಿರಬಹುದು ಅಥವಾ ಒಬ್ಬ ಬಿ.ಡಿ.ಓ. ಆಫೀಸಿನಲ್ಲಿ ಆಗಬೇಕಾದ ಕೆಲಸವಿರಬಹುದು. ಇದರಲ್ಲಿ ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶ ಕೊಡುವುದಿಲ್ಲ, ಆ ಅಧಿಕಾರಿಯನ್ನು ಜವಾಬ್ದಾರಿ ಮಾಡುತ್ತೇವೆಂಬ ಒಂದು ಹಿನ್ನೆಲೆಯಿಂದ ಈ ಮಾತನ್ನು ಹೇಳಿದ್ದೇನೆಯೇ ಹೊರತು ಬೇರೆ ಏನೂ ಇಲ್ಲ. I do not wish to suppress anything. I do not have any malafide intention. Even then, I am going to submit all the documents. You havee given me the direction. It is for you to take further steps.

ಮಾನ್ಯ ಅಧ್ಯಕ್ಷರೆ, ಇವೊತ್ತು ನಾನು ಇನ್ನೂ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ರೈತರ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೇವೆ. ಇದನ್ನು ಅನುಷ್ಠಾನಕ್ಕೆ ತರತಕ್ಕ ವಿಚಾರವನ್ನು ನಾವು ಈಗಾಗಲೇ ಮಾನ್ಯ ರಾಜ್ಯಪಾಲರ

ಭಾಷಣದಲ್ಲಿ ಪ್ರಸ್ತಾಪಿಸಿದ್ದೇವೆ. ದಿನಾಂಕ 31.3.95 ರೊಳಗೆ ಯಾರು ತಮ್ಮ ಸಾಲವನ್ನು ಬರೀ ಪ್ರಿನ್ಸಿಪಲ್ ಹಣವನ್ನು ವಾಪಸ್ಸು ಮಾಡುತ್ತಾರೋ ಅಂಥವರಿಗೆ ಅವರು ತೆಗೆದುಕೊಂಡಿರುವ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವಂಥ ಈ ಒಂದು ರಿಯಾಯಿತಿ ನೀಡಬೇಕೆಂದು ನಾವು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಯಾವ ರೈತರು 10 ಸಾವಿರ ರೂಪಾಯಿಗಳಿಗಿಂತ ದೊಡ್ಡ ಪ್ರಮಾಣದ ಸಾಲ ತೆಗೆದುಕೊಂಡಿರುತ್ತಾರೋ ಅಂಥ ರೈತರಿಗೆ 9 ಪರ್ಸೆಂಟ್ ಬಡ್ಡಿ ದರದಲ್ಲಿ ಅಸಲು ಮತ್ತು ಬಡ್ಡಿ ಕೊಟ್ಟರೆ ಅವರಿಗೂ ಈ ರಿಯಾಯಿತಿಯನ್ನು ಕೊಡುವುದಕ್ಕೆ ನಾವು ಸಿದ್ಧವಾಗಿದ್ದೇವೆಂಬ ಮಾತನ್ನು ಹೇಳಬಯಸುತ್ತೇನೆ. ಆದರೆ, ಇದಕ್ಕೆ ಗಡುವು ಎಂದರೆ ದಿನಾಂಕ 31.3.95. ಇದರ ಉಪಯೋಗವನ್ನು ರಾಜ್ಯದ ಎಲ್ಲಾ ರೈತರು ಪಡೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದಾಗಿ ಸುಮಾರು 130 ಕೋಟಿ ರೂಪಾಯಿಗಳ ಭಾರ ನಮ್ಮ ಸರ್ಕಾರದ ಮೇಲೆ ಬೀಳುತ್ತದೆ. ಈ ವರ್ಗದ ಜನರಿಗೆ ನಾನಾ ರೀತಿಯ ಸಮಸ್ಯೆ, ಕಷ್ಟಗಳಿವೆ ಎಂಬುದು ನಮಗೂ ಗೊತ್ತಿದೆ. ಯಾವ ರೈತರು ಪ್ರಕೃತಿಯ ವಿಕೋಪಕ್ಕೆ ಸಿಕ್ಕಿ ಬೆಳೆ ಆಗಿಲ್ಲ, ಇದರಿಂದಾಗಿ ನಾನು ಕಷ್ಟಗಳಿಗೆ ಈಡಾಗಿರತಕ್ಕ ರೈತರು ಯಾರಿದ್ದಾರೋ ಅವರಿಗೆ ಈ ಸೌಲಭ್ಯವನ್ನು ಒದಗಿಸಿಕೊಡಬೇಕು. ಆದರೆ, ಇನ್ನು ಮುಂದೆ ಈ ರೀತಿ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡಲು ಸಾಧ್ಯವಿಲ್ಲ, ಇದು ಒನ್ ಟೈಮ್ ಕನ್‌ಸೆಕ್ಷನ್ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮನ್ನು ಈ ಒಂದು ಸ್ಥಾನಕ್ಕೆ ಯಾರು ತಂದಿದ್ದಾರೋ ಆ ರೈತ ಸಮುದಾಯಿ ಈ ಒಂದು ಸದವಕಾಶ ಉಪಯೋಗ ಮಾಡಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇವೊತ್ತು ನಮಗೆ ಹಣಕಾಸಿನ ಮುಗ್ಗಟ್ಟಿದ್ದರೂ ನಮ್ಮ ಅಭಿವೃದ್ಧಿಯ ಕೆಲಸ-ಕಾರ್ಯಗಳಿಗೆ ಸಾಕಷ್ಟು ಸಂಪನ್ಮೂಲಗಳನ್ನು ನಾವು ರೂಢಿಸಿಕೊಳ್ಳಬೇಕಾದ ಸಂದರ್ಭವಿದ್ದರೂ ಕೂಡ ನಾವು ನೀಡಿರತಕ್ಕ ನಮ್ಮ ವಾಗ್ದಾನವನ್ನು ಈಡೇರಿಸಿಕೊಳ್ಳಬೇಕೆಂಬ ಕಾರಣಕ್ಕೋಸ್ಕರವಾಗಿ ಈ ನಿರ್ಣಯವನ್ನು ಮಾಡಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರವೆಂದರೆ ಅದು ಆಹಾರದ ಸಬ್ಸಿಡಿ. ಹಿಂದೆ ನಾವು 2 ರೂ.ಗೆ ಒಂದು ಕೆ.ಜಿ. ಅಕ್ಕಿಯಂತೆ ಬಡವರಿಗೆ ಕೊಡುತ್ತಿದ್ದವು. ಆದರೆ, ಇವೊತ್ತು ಅದು 4.60 ಇದ್ದು ಕೆಲವು ಕಡೆ ರೂ. 4.70 ಆಗಿದೆ. ನೀವು 3.20 ರೂ.ಗೆ ಒಂದು ಕೆ.ಜಿ. ಅಕ್ಕಿಯಂತೆ ಕೊಡುತ್ತೇವೆಂದು ಹೇಳಿದ್ದೀರೆಂದು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು.

ನಾವು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲೇ ಹೇಳಿದ್ದೇವೆ, ನಾವು 1 ಕೆ.ಜಿ.ಗೆ 1.50 ರೂ.ಗಳಂತೆ ಸಬ್ಸಿಡಿಯನ್ನು ಕೊಡುತ್ತೇವೆಂದು ಹೇಳಿದ್ದೇವೆ. ಅಂದರೆ ಅದರ ಅರ್ಥ ಇವತ್ತು 1 ಕೆ.ಜಿ. ಬೆಲೆ 4.60 ರೂ. ಇದೆ ; 4.70 ರೂ. ಇದೆ; ಇನ್ನು ಕೆಲವು ಕಡೆ 4.65 ರೂ.ಗಳಿಗೆ. ಇದರಲ್ಲಿ ಸಾಗಾಣಿಕೆ ವೆಚ್ಚ ಏನಿದೆ ಅದನ್ನು ನಮ್ಮ ರಾಜ್ಯ ಸರ್ಕಾರದಿಂದ ಕೊಡಬೇಕಾಗುತ್ತದೆ. ನಾಳೆ ಕೇಂದ್ರಸರ್ಕಾರ 5 ಲಕ್ಷ ಟನ್ ಅಕ್ಕಿಯನ್ನು ಏನು ಒದಗಿಸುತ್ತದೆ ಅದಕ್ಕೆ ಅವರು 10 ರೂ.ನಂತೆ ಬೆಲೆ ನಿಗದಿ ಮಾಡಿದರೆ ಅದಕ್ಕೆ ನಾನು 1.50 ರೂ. ನಂತೆ ಸಬ್ಸಿಡಿಯನ್ನು ಕೊಡುತ್ತೇವೆ. 6 ರೂ. ನಂತೆ ಮಾಡಿದರೆ ಅದಕ್ಕೆ ನಾನು 1 ರೂ. ನಂತೆ ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಸಿರು ಕಾರ್ಡುಗಾರರಿಗೆ 320 ರೂ.ಗಳಿಗೆ ಒಂದು ಕೆ.ಜಿ. ಅಕ್ಕಿ ತಿಂಗಳಿಗೆ 5 ಲೀಟರ್ ಸೀಮೆ ಎಣ್ಣೆಯನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಕೊಡಬೇಕೆಂದು ಸಂಕಲ್ಪ ಮಾಡಿದ್ದೇವೆಂದು ಮಾನ್ಯ ರಾಮಕೃಷ್ಣ

ಹೆಗಡೆಯವರು, ಮಾನ್ಯ ಬೊಮ್ಮಾಯಿಯವರು ಹಾಗೂ ಮಾನ್ಯ ದೇವೇಗೌಡರೂ ಸಹಿ ಮಾಡಿ 25ನೇ ತಾರೀಖು ಅಂದರೆ ಚುನಾವಣೆಯ ಹಿಂದಿನ ದಿವಸ ಕೊಟ್ಟಿರತಕ್ಕ ಪ್ರಚಾರ ಇದೆ.

ಶ್ರೀ ಹೆಚ್.ಡಿ. ದೇವೇಗೌಡ : 3.20 ರೂ.ಗೆ ನಾವು 1 ಕೆ.ಜಿ. ಅಕ್ಕಿಯಂತೆ ಮಾರುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಅಷ್ಟು ಹೇಳಿದರೆ ಸಾಕು..

ಶ್ರೀ ಹೆಚ್.ಡಿ. ದೇವೇಗೌಡ : ನಾನು ಏನು ಹೇಳುತ್ತಿದ್ದೇನೆಂಬುದನ್ನು ತಾವು ನೆನಪಿನಲ್ಲಿಟ್ಟುಕೊಳ್ಳಿ. 1 ಕೆ.ಜಿ. ಅಕ್ಕಿಗೆ 1.50 ರೂ.ಗಳಂತೆ ಸಬ್ಸಿಡಿ ಹಣವನ್ನು ನಮ್ಮ ರಾಜ್ಯಸರ್ಕಾರದಿಂದ ಒದಗಿಸಿ 3.20 ರೂ.ರಂತೆ ಮಾರುತ್ತೇವೆ. ಈ ಮಾತನ್ನು ನಾನು ಇವತ್ತೂ ಹೇಳುತ್ತಿದ್ದೇನೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ವಿಚಾರ ಚರ್ಚೆಗೆ ಬಂತು. ಅದೇನೆಂದರೆ ಗೊಬ್ಬರದ ಸಬ್ಸಿಡಿ ವಿಚಾರ. ಈ ದೇಶದಲ್ಲಿ ನಾನಾ ರೀತಿಯ ಸಬ್ಸಿಡಿಗಳನ್ನು ಬೇರೆ ಬೇರೆ ವರ್ಗಗಳಿಗೆ ನಾವು ಕೊಡುತ್ತೇವೆ. ಆದರೆ ರೈತನಿಗೆ ಸಬ್ಸಿಡಿ ಕೊಡತಕ್ಕ ಪ್ರಶ್ನೆ ಬಂದಾಗ ಈ ದೇಶದಲ್ಲಿ ಒಂದು ರೀತಿಯ ಮಲತಾಯಿ ಮನೋಭಾವನೆ ಇದೆ ಎಂಬುದನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ.

ಹಲವಾರು ಜನ ಬುದ್ಧಿಜೀವಿಗಳು ಇದರ ಬಗ್ಗೆ ತರ್ಕ ವಿತರ್ಕ ನಡೆಸುತ್ತಾರೆ. ಈ ತರಹ ಸಬ್ಸಿಡಿ ಕೊಟ್ಟರೆ ಸಾಧ್ಯವಾಗುವುದಿಲ್ಲ, ರಾಜ್ಯದ ಅಭಿವೃದ್ಧಿಗೆ ತಡೆಯಾಗುತ್ತದೆ. ಅದರಿಂದ ಹಣಕಾಸು ಮುಗ್ಗಟ್ಟು ಹೆಚ್ಚಾಗುತ್ತದೆ. ಆ ಕಾರಣದಿಂದ ಸಬ್ಸಿಡಿ ಕೊಡಬಾರದು ಎಂದು ಅನೇಕ ಜನ ತಜ್ಞರು ಹೇಳಿದ್ದಾರೆ. ಈವತ್ತು ನಾನು ತಜ್ಞರು ಹೇಳಿರುವ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಸಲಹೆಗಾರರಾಗಿರತಕ್ಕ ಆರ್ಥಿಕ ರಂಗದಲ್ಲಿ ಹೆಚ್ಚು ಪರಿಣತರಾಗಿರತಕ್ಕವರು ಹೇಳಿದ್ದಾರೆ. The State Government must toe the line of Central Government and all subsidies should be stopped at once. ಈ ಮಾತನ್ನು ಹೇಳಿದ್ದಾರೆ. ಅದನ್ನು ಓದಿದ್ದೇನೆ. ಮತ್ತು ಅವರ ಹೆಸರು ತೆಗೆದು ಚರ್ಚೆ ಮಾಡಬೇಕಾದ ಅಗತ್ಯವಿಲ್ಲ. ಇತರ ಹಲವಾರು ಜನ ಕೇಂದ್ರ ಸರ್ಕಾರಕ್ಕೆ ಸಲಹೆ ಕೊಡತಕ್ಕ ನಮ್ಮ ಆರ್ಥಿಕ ತಜ್ಞರು ಈ ಮಾತನ್ನು ಹೇಳಿದ್ದಾರೆ. ನಾನು ನಗರ ಪ್ರದೇಶಕ್ಕೆ ವಿರೋಧ ಇದ್ದೇನೆ. Deve Gowda is always allergic to urban area people ಎಂದು ಯಾರೂ ಭಾವಿಸಿಕೊಳ್ಳಬೇಕಾಗಿಲ್ಲ, ಹಳ್ಳಿಗರ ಬಗ್ಗೆ ಅವರಿಗೆ ಹೆಚ್ಚು ಗಮನ ಇದೆ ಎಂಬ ಈ ಮಾತನ್ನು ಹೇಳಬೇಕಾಗಿಲ್ಲ. ನಾನು ಕೊಡಬಾರದು ಎಂದು ಹೇಳಲಿಲ್ಲ. ದೆಲ್ಲಿಯಲ್ಲಿ ಒಂದು ಸರ್ವೆ ಮಾಡಿದ್ದಾರೆ. ಅಲ್ಲಿ ಪ್ರತಿಯೊಬ್ಬ ಪ್ರಜೆಗೆ ಕನಿಷ್ಠ 950 ರೂಪಾಯಿ ಪ್ರತಿ ತಿಂಗಳು ಸಬ್ಸಿಡಿ ಕೊಡುತ್ತಾರೆ. ವರ್ಷಕ್ಕೆ ಹೆಚ್ಚು ಕಡಿಮೆ 10 ಸಾವಿರ ರೂಪಾಯಿ ಪರ್‌ಕ್ಯಾಪಿಟಾ ಲೆಕ್ಕ ಹೇಳಿದ್ದಾರೆ. ನನ್ನ ಮುಂದೆ ವರದಿ ಇದೆ. ಅವನಿಗೆ ಕೊಡತಕ್ಕ ಗ್ಯಾಸ್ ಸಿಲಿಂಡರ್ 60-70 ರೂಪಾಯಿ ಇದೆ, ಅವನಿಗೆ ಕೊಡತಕ್ಕ ವಿದ್ಯುಚ್ಛಕ್ತಿ, ಅವನಿಗೆ ಕೊಡತಕ್ಕ ಹಾಲು, ಅವನಿಗೆ ಕೊಡತಕ್ಕ ಟ್ರಾನ್ಸಪೋರ್ಟೇಷನ್ ಈ ಎಲ್ಲಾ ಸಬ್ಸಿಡಿಗಳು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಗರ ನಗರ ಪ್ರದೇಶದಲ್ಲಿರುವವರಿಗೆ ನಾವು ಕೊಡುವುದಕ್ಕೆ ಯಾರದ್ದೂ ಅಡ್ಡಿ ಇಲ್ಲ, ಆದರೆ ಹಳ್ಳಿಯಲ್ಲಿರತಕ್ಕ ರೈತರಿಗೆ 100-120 ರೂಪಾಯಿ ಒಂದು ಚೀಲ ಗೊಬ್ಬರಕ್ಕೆ ಸಬ್ಸಿಡಿ ಕೊಟ್ಟರೆ ಅದರ ಬಗ್ಗೆ ದೇಶದಲ್ಲಿ ದೊಡ್ಡ ಚರ್ಚೆ ನಡೆಯುತ್ತಿದೆ. ಅದರ ಬಗ್ಗೆ ನಮ್ಮ ತಜ್ಞರು, ಪ್ಲಾನರ್ಸ್ ಕೊರತೆ ಬಜೆಟ್ ಬರುತ್ತದ, ಇನಫ್ಲೇಷನ್ ಆಗುತ್ತದೆ ಹೀಗೆ ಎಲ್ಲಾ ರೀತಿಯ ವಾದವಿವಾದ ನಡೆಸುತ್ತಾರೆ. ನಷ್ಟ ಅನುಭವಿಸುತ್ತಿರುವ ರಾಷ್ಟ್ರೀಕೃತ ಬ್ಯಾಂಕುಗಳಿಗೆ 30 ಸಾವಿರ ಕೋಟಿ ರೂಪಾಯಿಗಳನ್ನು ಬ್ಯಾಂಕಿನಿಂದ

ಹಣವನ್ನು ತೆಗೆದುಕೊಂಡಂಥ ಕೈಗಾರಿಕೋದ್ಯಮಿಗಳಿಗೆ ನಾವು ಹಣ ಮನ್ನಾ ಮಾಡುತ್ತೇವೆ. 30 ಸಾವಿರ ಕೋಟಿ ರೂಪಾಯಿಗಳನ್ನು ಬ್ಯಾಂಕಿನಿಂದ ಸಾಲವನ್ನು ಪಡೆದಂಥ ಕೈಗಾರಿಕೋದ್ಯಮಿಗಳಿಗೆ ಮನ್ನಾ ಮಾಡುವುದಕ್ಕೆ ಈ ದೇಶದಲ್ಲಿ ಯಾರೂ ಅಡ್ಡ ಬರುವುದಿಲ್ಲ. ಆದರೆ ರೈತರಿಗೆ ಇವತ್ತು 4-5 ಸಾವಿರ ಕೋಟಿ ರೂಪಾಯಿ ಹಣವನ್ನು ಕೊಡಲಿಕ್ಕೆ ನಾನಾ ರೀತಿಯಾದಂಥ ವಾದ ವಿವಾದಗಳು. ದೊಡ್ಡ ದೊಡ್ಡ ತಜ್ಞರಿದ್ದಾರೆ. ಅವರಿಗೆ ಒಳ್ಳೆಯ ಆಂಗ್ಲ ಭಾಷೆಯಲ್ಲಿ ಉಪನ್ಯಾಸ ಮಾಡತಕ್ಕಂಥ ಶಕ್ತಿ ಇದೆ. ಅವರು ನಮ್ಮಂಥವರನ್ನು ಕನ್ವಿನ್ಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ದುರಾದೃಷ್ಟ ಎಂದರೆ ಈ ನತದೃಷ್ಟ ವರ್ಗದ ಬಗ್ಗೆ ಸ್ವಲ್ಪ ಮಟ್ಟಿಗೆ ದೆಹಲಿಯಲ್ಲಿರತಕ್ಕ ಕೇಂದ್ರದ ಮುಖಂಡರುಗಳು ಕೂಡ ಬದಲಾವಣೆಯಾಗಬೇಕು. ಅಷ್ಟೇ ಅಲ್ಲ ನನ್ನ ಮುಂದೆ ರಿಪೋರ್ಟ್ ಇದೆ. ಘೋರ್ಪಡೆಯವರು ಬೇಕಾದರೆ ನೋಡಬಹುದು. 30 ಸಾವಿರ ಕೋಟಿ ರೂಪಾಯಿಗಳನ್ನು ಕೈಗಾರಿಕೋದ್ಯಮಿಗಳಿಗೆ ಬ್ಯಾಡ್ ಡೆಟ್ ಕೆಳಗೆ ಮನ್ನಾ ಮಾಡತಕ್ಕ ನಿರ್ಣಯ ಮಾಡಿರುವ ಬಗ್ಗೆ ಪಾರ್ಲಿಮೆಂಟಿಗೆ ಕೊಟ್ಟಿರತಕ್ಕ ವರದಿಯಲ್ಲಿದೆ. ಇಲ್ಲಿ ಬಡ್ಡಿ ಸುಸ್ತಿ ಬಡ್ಡಿ 130 ಕೋಟಿ ರೂಪಾಯಿ ಕೊಡುವುದಕ್ಕೆ ಅಡ್ಡ ಬರುತ್ತಾರೆ. ಯಾರ ಹಣ ಆದರೂ ಆಗಬಹುದು. ಅದು ಜನರ ಹಣ ಆಗಿರಬಹುದು, ಡಿಪಾಸಿಟರ್ಸ್ ಹಣ ಆಗಿರಬಹುದು ಅಥವಾ ಭಾರತ ಸರ್ಕಾರದ ಹಣ ಆಗಿರಬಹುದು ಯಾವುದೇ ಆಗಿರಬಹುದು. I am not going to argue. ಅದರ ಜೊತೆಗೆ ನಾನು ಇನ್ನೊಂದು ಮಾತನ್ನು ಹೇಳಬೇಕಾಗುತ್ತದೆ. 12 ಸಾವಿರ ಕೋಟಿ ರೂಪಾಯಿನ ಶೇರ್ ಸ್ಕ್ಯಾಮ್ ಗಲಾಟೆ ಆಯಿತು. ಬ್ಯಾಂಕಿಗೆ ಸುಮಾರು 8,000 ಕೋಟಿ ರೂ. ತುಂಬಿಕೊಟ್ಟಿದ್ದಾರೆ. ಆ ಸ್ಕ್ಯಾಮ್‌ನಲ್ಲಿ ದಳ್ಳಾಳಿಗಳು ಏನೂ ಲೂಟಿ ಮಾಡಿದ್ದಾರೆ ಅದರಿಂದ ಆಗಿರುವ ನಷ್ಟವನ್ನು ಎರಡು ವರ್ಷ 1993-94 ಮತ್ತು 1994-95 12 ಸಾವಿರ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ತುಂಬಿಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾವು ರಾಜ್ಯ ಸರ್ಕಾರದ ವತಿಯಿಂದ ರೈತರಿಗೆ ಗೊಬ್ಬರದ ಸಬ್ಸಿಡಿಯನ್ನು ಕೊಟ್ಟು ಮಾರಾಟ ಮಾಡುತ್ತೇವೆಂದು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಲ್ಲ. ಆದರೆ ಇದರ ಬಗ್ಗೆ ಹೋರಾಟ ಮಾಡುತ್ತೇವೆಂದು ಹೇಳಿದ್ದೇವೆ.

ಇವತ್ತು ರಾಜ್ಯಸರ್ಕಾರದ ನಿಲುವು ಏನಿದೆ ಅದಕ್ಕೆ ಕೇಂದ್ರಸರ್ಕಾರ ರಾಜ್ಯಸರ್ಕಾರದ ನಿಲುವಿಗೆ ಮಾನ್ಯತೆ ಕೊಡಲೇಬೇಕೆನ್ನುವ ವಾದವನ್ನು ನಾವು ಮಂಡನೆ ಮಾಡಲಿಕ್ಕೆ ನಮಗೆ ಇರತಕ್ಕ ಎಲ್ಲಾ ಅವಕಾಶಗಳನ್ನು ಬಳಕೆ ಮಾಡಿಕೊಳ್ಳುತ್ತೇವೆ. ಈ ಮಾತನ್ನು ನಾನು ಮೊನ್ನೆ ದೆಹಲಿಗೆ ಹೋದಾಗ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದಾಗ ಕೂಡ ಹೇಳಿದ್ದೇನೆ. ಏಕೆಂದರೆ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಪ್ರಧಾನಮಂತ್ರಿಗಳು ದೂರವಾಣಿಯಲ್ಲಿ ಮಾತನಾಡಿದರು. ಆ ವಿಷಯವನ್ನು ಸಭೆಯಲ್ಲಿ ಹೇಳುವುದಕ್ಕೆ ಯಾವ ಮುಚ್ಚುಮರೆಯಿಲ್ಲ. ಅವರು ಕೇಳಿದ ಹಾಗೆ ಹೊಸ ಉದಾರೀಕರಣದ ಆರ್ಥಿಕ ನೀತಿಯಿಂದ ಬೇರೆ ಬೇರೆ ದೇಶಗಳಿಂದ ನಮ್ಮ ರಾಜ್ಯಕ್ಕೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣವನ್ನು ತೊಡಗಿಸುವುದಕ್ಕೆ ಈಗಾಗಲೇ ಕೆಲವು ಮಾತುಕತೆಗಳು ನಡೆದಿವೆ. ಅದು ವಿದ್ಯುಚ್ಛಕ್ತಿ ರಂಗದಲ್ಲಿರಬಹುದು, ಪ್ರವಾಸೋದ್ಯಮ ಇರಬಹುದು ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳಿರಬಹುದು ಹೊಸ ಸರ್ಕಾರದ ನಿಲುವು ಏನು ಎಂದು ಬೇರೆ ಬೇರೆ ದೇಶಗಳಿಂದ ಬಂದಂತಹ ರಾಯಭಾರಿಗಳು ನಮ್ಮನ್ನು ಈಗಾಗಲೇ ಭೇಟಿ ಮಾಡಿ ಕೇಳುತ್ತಿದ್ದಾರೆ; ಅದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕೆಂಬ ಮಾತನ್ನು ಹೇಳಿದರು. ನಾನು ಅವರು ಹೇಳಿದ ಮೇಲೆ, ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದೇನೆ. ವಿದೇಶಿ ಬಂಡವಾಳದಿಂದ ನಮ್ಮ ರಾಜ್ಯದ ಅಭಿವೃದ್ಧಿಗೆ ಧಕ್ಕೆ ಬಾರದ ರೀತಿಯಲ್ಲಿ ಯಾರೇ ಅದನ್ನು ತೊಡಗಿಸುವುದಕ್ಕೆ ಮುಂದೆ ಬಂದರೆ, ನಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬರಬಾರದು, ನಮ್ಮ ರಾಜ್ಯದ ಬೆಳವಣಿಗೆಯ ದೃಷ್ಟಿಯಿಂದ ಯಾವುದೇ ಅಡ್ಡಿ

ಆತಂಕಗಳು ಬರಬಾರದು. ಈ ದೃಷ್ಟಿಯಿಂದ ನಾನು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದಾಗ ಸ್ವತಃ ತಿಳಿಸಿದ್ದೇನೆ. ಯಾವುದೇ ಇನ್‌ವೆಸ್ಟ್‌ಮೆಂಟ್ ಈ ರಾಜ್ಯದಲ್ಲಿ ಮಾಡಲಿಕ್ಕೆ ಸಿದ್ಧರಿದ್ದರೆ ನಾವು ಸ್ವೀಕಾರ ಮಾಡುತ್ತೇವೆಂದು ಹೇಳಿದ್ದೇನೆ. ಅದೇ ಸಂದರ್ಭದಲ್ಲಿ ನಾನು ಪ್ರಧಾನಮಂತ್ರಿಗಳಿಗೆ ಏನು ಹೇಳಿದ್ದೇನೆಂದರೆ ತಾವು ತೆಗೆದುಕೊಂಡಿರತಕ್ಕ ನಿರ್ಣಯ ಈ ಸಬ್ಸಿಡಿಯನ್ನು ತೆಗೆಯತಕ್ಕದ್ದು ಇಡೀ ಪ್ರಪಂಚದಲ್ಲಿ ಯಾವುದೇ ಮುಂದುವರಿದ ನಿರ್ಣಯ ಹೋಲಿಸಿಕೊಳ್ಳಿ ಅಥವಾ ಮುಂದುವರಿಯತಕ್ಕ ಡೆವಲಪಿಂಗ್ ಕಂಟ್ರೀಸ್‌ಗಳಿಗೆ ಹೋಲಿಸಿ ಕೊಳ್ಳುವುದಾದರೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇವತ್ತು ರೈತ ಸಮುದಾಯಕ್ಕೆ ಸಬ್ಸಿಡಿಯನ್ನು ಕೊಡುತ್ತಿದ್ದೇವೆ. 2.8% is the subsidy component in the we country which we are giving to the farming community.

ಇಡೀ ಹಿಂದೂಸ್ಥಾನದಲ್ಲಿ 65 ಕೋಟಿ ಕೊಟ್ಟಿದ್ದೇವೆ. ಅಂದಮೇಲೆ ಪ್ರಪಂಚದ ಯಾವುದೇ ರಾಷ್ಟ್ರಕ್ಕೆ ಹೋಲಿಸಿಕೊಂಡಾಗ ಇಷ್ಟೊಂದು ಕಡಿಮೆ ಪ್ರಮಾಣದ ಸಬ್ಸಿಡಿಯನ್ನು ಕೊಡತಕ್ಕ ಈ ದೇಶದಲ್ಲಿ ಅದನ್ನು ನಿಲ್ಲಿಸುವುದು ಸರಿಯಲ್ಲ, ರೈತ ತುಂಬಾ ಮುಂದುವರಿದಿದ್ದಾನೆಂದು ಕೆಲವರು ವಾದ ಮಾಡುತ್ತಾರೆ.

Farmers are milking cows in this country. Farmers have developed so fast.

ಅವರ ಹತ್ತಿರ ಸಾಕಷ್ಟು ಹಣವಿದೆಯೆಂದು ಹೇಳತಕ್ಕವರನ್ನು ನಾನು ನೋಡಿದ್ದೇನೆ. ಚರ್ಚೆ ಮಾಡುವಾಗ ಕೇಳಿದ್ದೇನೆ. ಪಾರ್ಲಿಮೆಂಟ್‌ನಲ್ಲಿ ಚರ್ಚೆ ಮಾಡುವಾಗ ನಾನು ಕೇಳಿದ್ದೇನೆ. 7ನೇ ಪಂಚವಾರ್ಷಿಕ ಯೋಜನೆ ಮುಗಿದು, 8ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವೇನು ಅರ್ಧಭಾಗದಲ್ಲಿದ್ದೇವೆ, ಈ ಎಲ್ಲಾ ಯೋಜನೆಗಳಿಗೆ ಖರ್ಚಾದ ವೆಚ್ಚದಿಂದ ರೈತ ಬಹಳ ಮುಂದೆ ಹೋಗಿದ್ದಾನೆ ಅವನಲ್ಲಿ ಸಾಕಷ್ಟು ಹಣವಿದೆಯೆಂದು ಹೇಳತಕ್ಕವರು ಇದ್ದಾರೆ. ನಾನು ಯಾರು ಯಾವ ಪಕ್ಷದವರೆಂದು ಹೇಳುವುದಕ್ಕೆ ಬದಲಾಗಿ ಈ ವಾದವನ್ನೂ ಕೂಡ ನಾನು ನೋಡಿದ್ದೇನೆ. ಆದರೆ ದುರದೃಷ್ಟ ನಮ್ಮ ದೇಶದ ಸ್ಥಿತಿ ಅಗ್ರಿಕಲ್ಚರ್ ಸೆಕ್ಟರ್ ನಾನ್ ಅಗ್ರಿಕಲ್ಚರಲ್ ಸೆಕ್ಟರ್‌ಗೆ ಹೋಲಿಸಿಕೊಂಡಾಗ 1971ರ ನಮ್ಮ ಪರ್ ಕ್ಯಾಪಿಟಾ ಇನ್‌ಕಂನ್ನು ತೆಗೆಯುವುದಾದರೆ 3000 ರೂಪಾಯಿ ವ್ಯವಸಾಯ ರಂಗದಲ್ಲಿ ಸಿಗುವುದಾದರೆ ನಗರ ಪ್ರದೇಶದಲ್ಲಿರ ತಕ್ಕ ನಾನ್ ಅಗ್ರಿಕಲ್ಚರಲ್ ಸೆಕ್ಟರ್‌ನಲ್ಲಿ 6800 ರೂಪಾಯಿ ಇದೆ. ಅಷ್ಟೊಂದು ಗ್ಯಾಪ್ ಇದೆ. ಇದನ್ನು ಬಹಳ ದಿನ ಬಿಟ್ಟುಕೊಂಡು ಹೋಗುವುದಕ್ಕಾಗುವುದಿಲ್ಲ, ನಾವು ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೂ ಆಗುವುದಿಲ್ಲ. ಈ ವಿಷಯದಲ್ಲಿ ಸರ್ಕಾರದ ನಿಲುವು ಎಂದೂ ಬದಲಾವಣೆಯಾಗುವುದಕ್ಕೆ ಸಾಧ್ಯವಿಲ್ಲ. ಈ ಮಾತನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಕೆಲವು ನನ್ನ ಸ್ನೇಹಿತರು are you prepared to confront with the Government of India. ಎಂದು ಕೇಳಿದರು. On this issue, there is no question of compromise and we are going to fight till we are in the Office.

ಅದು ಆಗುವುದು ಬಿಡುವುದು ಬೇರೆ ವಿಷಯ. ಈ ವಿಷಯದಲ್ಲಿ ಮಾತ್ರ ರಾಜೀಯಾಗುವುದಕ್ಕೆ ಸಿದ್ಧನಿಲ್ಲ. ಇದು ನನ್ನ ನಿಲುವು ಹೊರಗಡೆ ಏನಿದೆಯೋ ಈ ಸದನದಲ್ಲೂ ಅದೇ ನಿಲುವು ಇದೆ. ಅದು ಎನ್.ಡಿ.ಸಿ. ಮೀಟಿಂಗ್ ಇರಬಹುದು. ಪ್ಲಾನಿಂಗ್ ಕಮೀಷನ್ ಮೀಟಿಂಗ್ ಇರಬಹುದು. ಯಾವುದೇ ವೇದಿಕೆಯಲ್ಲಿ ನಾನು ಹೋಗಿ ನಿಂತು ಮಾತನಾಡುವ ಅವಕಾಶ ಸಿಕ್ಕಿದರೆ ಈ ರಾಜ್ಯದ ರೈತರ ಪರವಾಗಿ ನನ್ನ ವಾದ ಏನಿದೆಯೋ ಅದನ್ನು ಖಂಡತುಂಡವಾಗಿ ಮಂಡನೆ ಮಾಡಲಿಕ್ಕೆ ನಾನು ಇಚ್ಛೆಪಡುತ್ತೇನೆ. ಅದರಲ್ಲಿ ಎಳ್ಳಷ್ಟೂ ರಾಜೀಯಾಗಲಿಕ್ಕೆ ತಯಾರಾಗಿಲ್ಲ. ಒಂದು ವೇಳೆ

ಇದರಿಂದ ನಮ್ಮ ಸರ್ಕಾರಕ್ಕೆ ಅಪಾಯವಾಗಬಹುದು. ಚಿಂತೆಯಿಲ್ಲ, ಏನೂ ಮುಳುಗಿ ಹೋಗುವುದಿಲ್ಲ, ಸರ್ಕಾರಕ್ಕೆ ಅಪಾಯವಾದರೆ ನಾಳೆ ಏನೋ ಬೆಳಿಗ್ಗೆ ಅನಾಹುತವಾಗುತ್ತದೆಂದರೆ ನಾನು ಅದಕ್ಕೆ ಸಿದ್ಧನಿದ್ದೇನೆ. ಈ ಮಾತನ್ನು ನೇರವಾಗಿ ಹೇಳುತ್ತೇನೆ. ಕಾರಣ ಇಷ್ಟೇ. ಪ್ರಧಾನ ಮಂತ್ರಿಗಳೂ ಕೂಡ ಬಹುಶಃ ಅವರ ನಿಲುವಿನಲ್ಲಿ ಬದಲಾವಣೆ ಮಾಡಿಕೊಂಡರು. ಆಂಧ್ರದಲ್ಲಿ ಮೊನ್ನೆ ನಡೆದ ಚುನಾವಣೆಯ ಸಂದರ್ಭದಲ್ಲಿ ತೆಲುಗುದೇಶಂ ಪಕ್ಷದ ಮುಖಂಡರು 2 ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಹೇಳುವಂತಹ ಕಾಲದಲ್ಲಿ first leg of the election was over ಸೆಕೆಂಡ್ ಫೇಸ್ ಎಲೆಕ್ಷನ್ ಬಂದಾಗ, three days earlier, ಪ್ರೈಮ್ ಮಿನಿಸ್ಟರ್ ಒಂದು ಘೋಷಣೆ ಮಾಡಿದರು. 10 ಕೆ.ಜಿ. ಅಕ್ಕಿಯನ್ನು ಫ್ರಿ ಆಗಿ ಕೊಡುತ್ತೇವೆಂದು ನಾನು ಅಷ್ಟು ಲಘುವಾಗಿ ತೆಗೆದುಕೊಳ್ಳುವುದಿಲ್ಲ, I am not going to take it so lightly. ಅಂದರೆ ಇವತ್ತು ಈ ದೇಶದ ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಈ ವರ್ಗದ ಜನತೆಗೆ ಅನ್ಯಾಯವಾಗಿದೆ ಬಡವರಿಗೆ ಅನ್ಯಾಯವಾಗಿದೆ ಇದರಿಂದ ಸ್ವಲ್ಪ ಮಟ್ಟಿಗೆ ನನ್ನ ನಿಲುವಿನಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆನ್ನುವ ಅರಿವು ಪ್ರಧಾನಮಂತ್ರಿಗಳಿಗೆ ಬಂದು ಆ ಮಾತನ್ನು ಹೇಳಿದ್ದರೆ, ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ಟೋಟಲ್ ಹೋಲ್ಡಿಂಗ್ ನಲ್ಲಿ ನಮ್ಮ ದೇಶದ ರೈತರ ಪರಿಸ್ಥಿತಿ ನಮಗೆ ಇರತಕ್ಕ ಹಿಡುವಳಿಯ ಒಟ್ಟು ಪ್ರಮಾಣದಲ್ಲಿ 76.4 ಪರ್ಸೆಂಟ್ The total holding is below two hectares. ಅವರು ಸರ್‌ಪ್ಲಸ್ ಕಮಾಡಿಟೀಸ್ ಬೆಳೆಯುವುದಕ್ಕೆ ಸಾಧ್ಯವಿಲ್ಲ, ಆದ್ದರಿಂದ ನಾವು ಸಪೋರ್ಟ್ ಪ್ರೈಸ್ ಹೆಚ್ಚು ಮಾಡಿದರೂ ಅದರ ಲಾಭ ಅವರಿಗೆ ಹೋಗುವುದಿಲ್ಲ, ಈ ದೇಶ ಕೃಷಿ ಪ್ರಧಾನವಾದ ದೇಶ. ಕೃಷಿ ಮಾಡತಕ್ಕ ವರ್ಗದ ಜನತೆಗೆ ನಮ್ಮಲ್ಲಿ ಸಹಾನುಭೂತಿ ಇರಬೇಕೆಂಬ ಕಾರಣದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಕಾಂಗ್ರೆಸ್ ಪಕ್ಷಕ್ಕೆ ತನ್ನದೇ ಆದ ಚಾರಿತ್ರ್ಯ ಹಿನ್ನೆಲೆಯಿದೆ. ಇವತ್ತು ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿರಬಹುದು, ನಾಳೆ ಮತ್ತೊಮ್ಮೆ ಅಧಿಕಾರಕ್ಕೆ ಬರಬಹುದು. ಅದರ ಬಗ್ಗೆ ದೊಡ್ಡ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ನಾನು ಒಬ್ಬನೇ ವಾದ ಮಾಡುವುದಿಲ್ಲ, ನೀವೂ ಮಾಡಬೇಕಾಗುತ್ತದೆ. ನೀವು ನಿಲುವೂ ಅದೇ ಇರಬೇಕಾಗುತ್ತದೆ. You have to revive your own policy decisions ಇವತ್ತು ವ್ಯವಸಾಯಗಾರರಿಗೆ ಬಡವರು ಯಾರು ಇದ್ದರೆ, ಕೂಲಿ ಮಾಡಿ ಜೀವನ ಮಾಡುವವರು ಯಾರಿದ್ದಾರೆ ದೈಹಿಕ ಶ್ರಮದಿಂದ ಜೀವನ ಮಾಡತಕ್ಕವರು ಯಾರಿದ್ದಾರೆ ಅಂತಹವರು ನಗರಪ್ರದೇಶಗಳಲ್ಲೂ ಇರಬಹುದು ಅವರಿಗೆ ರಿಯಾಯಿತಿ ದರದಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುವುದಕ್ಕೆ ಸರ್ಕಾರ ಮುಂದಾಗಬೇಕು, ಕೇಂದ್ರಸರ್ಕಾರ ಮುಂದಾಗಬೇಕು, ರಾಜ್ಯಸರ್ಕಾರಕ್ಕೆ ಇರತಕ್ಕ ಇತಿಮಿತಿಯಲ್ಲಿ ಬಹಳ ಕಷ್ಟವಿದೆ. ನಮ್ಮ ಯೋಜನಾ ವೆಚ್ಚದಲ್ಲಿ ನಾವು ಎಷ್ಟೇ ತಿಪ್ಪರಲಾಗ ಹೊಡೆದರೂ 3400 ಕೋಟಿ ಮಾಡಬಹುದು. ರಾಜ್ಯಸರ್ಕಾರಕ್ಕೆ ಇರತಕ್ಕ ಇತಿಮಿತಿಯಲ್ಲಿ ಈ ಎಲ್ಲಾ ಹಣವನ್ನು ತುಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಅದರ ಜೊತೆಗೆ ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮಗಳ ಕಡೆಗೆ ಗಮನಹರಿಸಬೇಕಾಗುತ್ತದೆ. ಆದ್ದರಿಂದ ಇಂದಲ್ಲ ನಾಳೆ ಪ್ರಧಾನ ಮಂತ್ರಿಗಳು ಈ ದೇಶದ ಜನತೆಯ ತೀರ್ಪಿಗೆ ತಲೆ ಬಾಗಲೇಬೇಕಾಗುತ್ತದೆ. ಈವತ್ತು ಅಗ್ರಿಕಲ್ಚರಲ್ ಸೆಕ್ಟರ್‌ನಲ್ಲಿ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸುವುದಕ್ಕೆ ಮನಸ್ಸು ಮಾಡಬೇಕೆಂದು ನಮ್ಮ ಒತ್ತಡ ಸದಾ ಅವರ ಮೇಲಿರುತ್ತದೆ. ಉದಾರೀಕರಣದ ಆರ್ಥಿಕ ನೀತಿಯನ್ನು on the issue of the subsidy component to the farming community and also to the weaker section of the society for the food subsidy ಈ ಎರಡರಲ್ಲಿ ನಾವು ಕಾಂಪ್ರಮೈಸ್ ಆಗುವುದಕ್ಕೆ ಸಿದ್ಧರಿಲ್ಲ, ಸಂಘರ್ಷಕ್ಕೆ ಇಳಿಯುತ್ತೇವೆ ಅಂದರೆ ಬೀದಿಗಿಳಿಯುತ್ತೇವೆಂದು ಅರ್ಥವಲ್ಲ. ಈ ದೇಶದಲ್ಲಿ ನಡೆದಿದೆ. ಮಂತ್ರಿಗಳಾಗಿದ್ದವರು ದೆಹಲಿಗೆ ಅಲ್ಲಿ ಸಂಘರ್ಷಕ್ಕೆ ಇಳಿತಿರತಕ್ಕ ದಿನಗಳನ್ನೂ ನಾವೂ ನೋಡಿದ್ದೇವೆ. ನನಗೆ

ಸಿಕ್ಕಿರತಕ್ಕ ಅವಕಾಶದಲ್ಲಿ, ನಾನು ದೆಹಲಿಗೆ ಹೋದಂತಹ ಸಂದರ್ಭದಲ್ಲಿ ಪ್ರತಿಯೊಂದು ವೇದಿಕೆಯಲ್ಲೂ, ನಾನು ಮೊದಲೇ ತಿಳಿಸಿದ್ದೇನೆ ಎನ್‌ಡಿಸಿ. ಮೀಟಿಂಗ್ ಇರಬಹುದು ಮತ್ತೊಂದು ಇರಬಹುದು ಅಲ್ಲಿ ಹೋಗಿ ನನ್ನ ಸರ್ಕಾರದ ನಿಲುವನ್ನು ಪ್ರತಿಪಾದನೆ ಮಾಡುತ್ತೇನೆ.

ಡಾ: ಜೀವರಾಜ ಆಳ್ವ : ನಿಮ್ಮ ಕನ್ವಿಕ್ಷನ್, ಸ್ವಲ್ಪ ಡೈಲ್ಯೂಟ್ ಆಗಿದೆಯೆಂದು ಅನಿಸುತ್ತಿದೆ. ತಾವು ಕರ್ನಾಟಕದಾದ್ಯಂತ ಡಂಕಲ್ ಪ್ರಸ್ತಾಪನೆಯನ್ನು ವಿರೋಧ ಮಾಡಿ. the stress was on Fertiliser subsidy, ಇದನ್ನು ನಾನು ಒಪ್ಪುತ್ತೇನೆ. ಅದರ ಮೂಲಕ ಮೊನ್ನೆ ದೆಹಲಿಗೆ ಹೋದಾಗ ಎಕಾನಮಿಕ್ ಪಾಲಿಸಿ ಆಫ್ ಸೆಂಟ್ರಲ್ ಗೌರ್ನಮೆಂಟ್ ಅದನ್ನು ನಾನು ವೆಲ್‌ಕಮ್ ಮಾಡುತ್ತೇನೆ ಅಂದಿರಿ. There is a clear dilution from whatever stand you had taken earlier, pre-election and after taking over as the Chief Minister.

MR. SPEAKER : Dr. Alva, he is not for confrontation. He will not compromise, but the will fight.

DR. JEEVARAJ ALVA : I don't expect our chief Minister to confront. ಕನ್ವಿಕ್ಷನ್, ಅಲ್ಲಿ ಸ್ವಲ್ಪ ಡೈಲ್ಯೂಷನ್ ಆಗಿದೆಯೆಂದು ನನಗನಿಸುತ್ತಿದೆ.

SRI H.D. DEVEGOWDA : There is no dilution on in my stand. ಪಾರ್ಲಿಮೆಂಟ್‌ನಲ್ಲಿ ನಾನು ಮಾಡಿರತಕ್ಕ ಭಾಷಣದ ಕಾಪಿಯನ್ನು ಕಳುಹಿಸಿ ಕೊಡುತ್ತೇನೆ. ನನ್ನ ಮಿತ್ರರಿಗೆ. ಅಷ್ಟೇ ಅಲ್ಲದೆ, ಗ್ಯಾಟ್ ಒಪ್ಪಂದದ ಬಗ್ಗೆ ಪಾರ್ಲಿಮೆಂಟ್ ಕಮಿಟಿ ಆನ್ ಡಿಪಾರ್ಟ್‌ಮೆಂಟ್ ಆಫ್ ಕಾಮರ್ಸ್ ಅದರಲ್ಲಿಯೂ ನಾನೂ ಒಬ್ಬ ಸದಸ್ಯನಾಗಿದ್ದೆ. ನಾವೇನು ರಿಪೋರ್ಟ್ ಕೊಟ್ಟಿದ್ದೇವೆ. ಅದರ ಕಾಪಿಯನ್ನು ನಿಮಗೆ ಕೊಡುತ್ತೇನೆ. It was anunanimous report.

ಅಧ್ಯಕ್ಷರು : ಮಾನ್ಯ ಸಭಾನಾಯಕರೇ, Dr. Jeevraj Alva is trying to draw your attention to the statement that you have issued in the Press after you visited Delhi, after you becoming Chief Minister where in it indicates that you have said to have welcomed.

DR. JEEVARAJ ALVA : This was the prime plank on which the Central Government was opposed. I do not expect the Cheif Minister to confront or the Government to confront. I can understand the liberalised outlook, the softened outlook, because the Government is there now. But beyond that Liberalisation, I do not know whether the statement emanating from Delhi after calling upon the Prime Minister that "I welcome the Economic Policies of the Central Government".

SRI H.D. DEVEGOWDA : No; if any Newspaper has reported like that, it is wrong. About the subsidy component, I have made it amply clear that there is no question of compromise, here, in Delhi, in out Report of the Parliament Committee. It was an unanimous report. Even the Congree Members were there, B.J.P. Members were there. It was an unanimous report of the standing Committee of Parliament on Commerce. There is no inconsistency. But in trade and tariff, there are certain areas where it should be modified

ಪಾರ್ಲಿಮೆಂಟ್ ನಲ್ಲಿ ಚರ್ಚೆಯಾಗಿ ಪಾರ್ಲಿಮೆಂಟ್ ಅದಕ್ಕೆ ಒಪ್ಪಿಗೆ ಕೊಡಬೇಕಾಗುತ್ತದೆ. ಆ ಮಾತನ್ನು ಕಾಮರ್ಸ್ ಮಂತ್ರಿಗಳು ಹೇಳಿದ್ದಾರೆ. ನಮ್ಮ ರಾಷ್ಟ್ರಕ್ಕೆ ಏನಾದರೂ ಅಡಚಣೆ ಬರತಕ್ಕಂಥದ್ದಕ್ಕೆ ನಾವು ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದಾರೆ. It seems some areas need some modification.

ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆ ವಿಷಯದಲ್ಲಿ ಇನ್ನೂ ಅಂತಿಮವಾದ ನಿರ್ಣಯ ಪಾರ್ಲಿಮೆಂಟಿನ ಮುಂದೆ ಚರ್ಚೆಯಾಗಿ, ಅದಕ್ಕೆ ಪಾರ್ಲಿಮೆಂಟ್ ಓಕೆ ಮಾಡಬೇಕಾಗಿದೆ. ಅದನ್ನು ವಾಣಿಜ್ಯ ಮಂತ್ರಿಗಳೇ ಹೇಳಿದ್ದಾರೆ. ಈ ಏರಿಯಾದಲ್ಲಿ ನಮ್ಮ ರಾಷ್ಟ್ರಕ್ಕೆ ಆಗತಕ್ಕ ಅನ್ಯಾಯವನ್ನು ಬದಲಾವಣೆ ಮಾಡುತ್ತೇವೆಂಬ ಮಾತನ್ನು ಅವರು ಹೇಳಿದ್ದಾರೆ.

ಸಬ್ಸಿಡಿ ಕಾಂಪೊನೆಂಟ್ ಬಗ್ಗೆ ನಮ್ಮ ನಿಲುವು ಬದಲಾವಣೆಯಿಲ್ಲ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೇ, ಇದು ತಮ್ಮ ನಿಲುವಾಯಿತು. ಮಾನ್ಯ ಜೀವರಾಜ ಆಳ್ವರವರು ಹೇಳಿದ್ದುದು ತಾವು ಮುಖ್ಯಮಂತ್ರಿಗಳಾದ ನಂತರ ದೆಹಲಿಗೆ ಹೋದ ನಂತರ ತಮ್ಮ ಹೆಸರಿನಲ್ಲಿ ಒಂದು ಹೇಳಿಕೆ ಬಂದಿದೆ. ಉದಾರೀಕರಣ ನೀತಿಯನ್ನು ತಾವು ಸ್ವಾಗತ ಮಾಡುತ್ತೇವೆಂದು ಹೇಳತಕ್ಕ ಮಾತು ಸತ್ಯ ಅಥವಾ ಅಸತ್ಯ, ಅದರ ಬಗ್ಗೆ ಹೇಳಿದರೆ ಮುಗಿದು ಹೋಯಿತು.

SRI H.D. DEVEGOWDA : About the investment, Sir, ನಾನು ಹೇಳಿದ್ದೇನೆ. ಇರಿಗೇಷನ್ ಸೆಕ್ಟಾರ್ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ ನಮ್ಮ ಸ್ನೇಹಿತರು. ಇರಿಗೇಷನ್, ಪವರ್ ಮತ್ತು ಫುಡ್ ಸಬ್ಸಿಡಿ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. 1991-92 ರಲ್ಲಿ the consumtion of food by the weaker sections 500 gms per day, today it is reduced to 436 grams per day.

434 ಮತ್ತು 436 ಗ್ರಾಮ್‌ಗಳಿಗೆ ಬಂದಿದೆ. ಇದೂ ಕೂಡ ನ್ಯಾಷನಲ್ ಸ್ಯಾಂಪಲ್ ಸರ್ವೆಯಿಂದ ವ್ಯಕ್ತವಾಗಿರತಕ್ಕದ್ದು. ಬಡವರಿಗೆ ಅಷ್ಟು ಕಷ್ಟವಿದೆ. ಗೋಡೌನ್‌ನಲ್ಲಿ 23 ಮಿಲಿಯನ್ ಟನ್ ಆಹಾರಧಾನ್ಯ ಕೊಳೆಯುತ್ತಾ ಬಿದ್ದಿದೆ. ಕೊಂಡು ಕೊಳ್ಳುವುದಕ್ಕೆ ಯಾರ ಹತ್ತಿರವೂ ಶಕ್ತಿಯಿಲ್ಲ, ಇದು ಇರತಕ್ಕ ವಾಸ್ತವಾಂಶ ಆದ್ದರಿಂದ ಪ್ರಧಾನಮಂತ್ರಿಗಳು ಈ ವಿಷಯದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಬೇಕಾಗುತ್ತದೆನ್ನುವರ ಮಾತನ್ನು ಈ ವೇದಿಕೆಯ ಮುಖೇನ ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇರಿಗೇಷನ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಬೇರೆ ಸನ್ನಿವೇಶ ಬಂದಾಗ ನಾನು ಕಾಲವನ್ನು ಹೆಚ್ಚು ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ನಿಲುವು ಬದಲಾವಣೆಯಿಲ್ಲ, ಅದಕ್ಕೆ ಹಣ ಎಷ್ಟು ಖರ್ಚು ಮಾಡುತ್ತೇವೆ, ನೀವು ಎಷ್ಟು ಖರ್ಚು ಮಾಡಿದ್ದೀರಿ ಅದರ ಬಗ್ಗೆ ಅಂಕಿಅಂಶಗಳಿವೆ. ಎಷ್ಟು ಬೇಕಾದರೂ ಹೇಳುತ್ತಾ ಹೋಗಬಹುದು. ನಾವೇನು ಹೇಳಿದ್ದೇವೆ with all these constraints ಇವತ್ತು ನಮಗೆ ಏನು ತೊಂದರೆಯಿದೆ, ರೈತರ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದರಿಂದ 130 ಕೋಟಿ ರೂಪಾಯಿ ಮೈಮೇಲೆ ಬರಬಹುದು. 80 ಕೋಟಿ ರೂಪಾಯಿ ಫುಡ್ ಸಬ್ಸಿಡಿ ಇವುಗಳನ್ನೆಲ್ಲಾ ಮೈಮೇಲೆ ತೆಗೆದುಕೊಂಡು ಈಗಿರತಕ್ಕ ಹಣಕಾಸಿನ ಪರಿಸ್ಥಿತಿ ಏನಿದೆ ಎನ್ನುವ ಬಗ್ಗೆ ಒಂದು ವೈಟ್ ಪೇಪರ್‌ನ್ನು ಸಭೆಯ ಮುಂದಿಡುತ್ತೇವೆಂದು ಹೇಳಿದ್ದೇವೆ. ಯಾರಿಗೂ ಮುಖಕ್ಕೆ ಬಣ್ಣ ಲೇಪನ ಮಾಡುವುದಕ್ಕಲ್ಲ. ಒಂದೇ ಒಂದು ಪಾಯಿಂಟ್ ನಮ್ಮ ರಾಜ್ಯದಲ್ಲಿ, ನಾವು ಮಾರ್ಕೆಟ್ ಬಾರೋಯಿಂಗ್ ಮಾಡತಕ್ಕ ಸನ್ನಿವೇಶವಲ್ಲಾಗಲೀ ಅಥವಾ ಇರಿಗೇಷನ್ ಬಾಂಡ್‌ಗಳ ಬಗ್ಗೆಯಾಗಲೀ,

ನಾವು ಮಾಡಿದ್ದೇವೆ, ನೀವೂ ಮಾಡಿದ್ದೀರಿ ಆದರೆ we have not got the clearance. ಈಕ್ವಿಟಿ ಫ್ಲೋಟ್ ಮಾಡಿ ಎಂದು ಹೇಳಿದ್ದೀರಿ. ಅದು ಏನೇ ಇರಲಿ, ಎಷ್ಟು ಹಣ ಸಿಗುತ್ತದೆಂದು ಹೇಳುವುದಕ್ಕೆ ತಯಾರಾಗಿಲ್ಲ. ಒಂದು ಮಾತು ಮಾತ್ರ ಹೇಳುತ್ತೇನೆ. ಯಾವುದೇ ಸ್ವರೂಪದಿಂದಾಗಲೀ ಅಪ್ಪರ್ ಕೃಷ್ಣಾ ಒಂದೇ ಅಲ್ಲ, ಕೃಷ್ಣಾ ಬೇಸಿನ್ ಯೋಜನೆಗಳಿಗೆ ಸರ್ಕಾರದ ಮೇಲಿನ ಅತ್ಯಂತ ತೀವ್ರತರವಾದ ಹೊರೆಯನ್ನು ಅರ್ಥಮಾಡಿಕೊಂಡು ಈ ಮಾತನ್ನು ಹೇಳುತ್ತೇನೆ.

ಸಾರ್ವಜನಿಕರೂ ಕೂಡ ಸ್ವಲ್ಪಮಟ್ಟಿಗೆ ಸಹಕಾರ ಕೊಡಬೇಕೆಂದು ಈ ವೇದಿಕೆ ಮುಖಾಂತರ ಕೇಳಿಕೊಳ್ಳುತ್ತೇನೆ. ಕಾರಣ ಇಷ್ಟೇ. ನಮ್ಮೆಲ್ಲರ ಮೇಲೂ ಒತ್ತಡ ಬರುತ್ತದೆ. ಪತ್ರಗಳ ಮುಖೇನ, ನಮಗೆ ಬೇರೆ ಬೇರೆ ಕೆಲಸಗಳನ್ನು ಮಾಡಿ ಎಂದು. ಈ ತರಹ ಒತ್ತಡಗಳು ಸಾಕಷ್ಟು ಬರುವುದರಿಂದ, ಸಾರ್ವಜನಿಕರಲ್ಲಿ ನಾನು ಏಕೆ ವಿನಂತಿ ಮಾಡುತ್ತಿದ್ದೇನೆಂದರೆ, ಇಂತಹ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ಸ್ ಏನಿವೆ, ಇವುಗಳಿಗೆ ಸ್ವಲ್ಪಮಟ್ಟಿಗೆ, 3-4 ವರ್ಷಗಳ ಕಾಲ ತಡೆ ಹಾಕಬಹುದೇನೋ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಏಕೆಂದರೆ, ನಾನು ಈ ಮಾತನ್ನು ಹೇಳುವಾಗ, ಯಾರೂ ಅನ್ಯಥಾ ಭಾವನೆ ಮಾಡಿಕೊಳ್ಳಬಾರದು. ನಾನು ಲೋಕೋಪಯೋಗಿ ಮಂತ್ರಿಯಾಗಿದ್ದಂಥ ಕಾಲದಲ್ಲಿ ಈ ರಾಜ್ಯದಲ್ಲಿ ಒಂದು ಕಡೆ ಮಾತ್ರ ಏರ್ ಕಂಡೀಷನ್‌ಗೆ ಅವಕಾಶ ಮಾಡಿದೆ. ನಾನು ಅನೇಕ ಕಡೆ ಹೋಗುತ್ತೇನೆ. ಅನೇಕ ಕಡೆ ಏರ್ ಕಂಡೀಷನ್ಸ್ ನೋಡುತ್ತೇನೆ. ಅಧಿಕಾರಿಗಳು ಏಕೆ ಮಾಡಿದರು, ಅದೆಲ್ಲಾ ಪ್ರಾವಿಷನ್ ಇರುತ್ತದೆ. ಅದರಲ್ಲೇ ಮಾಡಿಕೊಂಡು ಹೋಗುತ್ತಾರೆ. ಮುಕಾಂಬಿಕೆ ದೇವಸ್ಥಾನಕ್ಕೆ ಶಿವಾಜಿ ಗಣೇಶನ್ ಮತ್ತು ಬೇರೆ ಬೇರೆ ಮುಖ್ಯಮಂತ್ರಿಗಳು ಆ ಜಾಗಕ್ಕೆ ಬರುತ್ತಿದ್ದರು. ಅಲ್ಲಿ ಇರತಕ್ಕಂಥ ಸನ್ನಿವೇಶಕ್ಕೆ ಕೊಠಡಿಗೆ ಏರ್ ಕಂಡೀಷನ್ ಮಾಡಿ ಎಂದು ಹೇಳಿದೆ. ಈಗ ಎಲ್ಲಿ ನೋಡಿದರೂ ಅದೇ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರಿಗೂ ನಾನು ಹೇಳಬಾರದು, ತಪ್ಪಾಗುತ್ತದೆ. ನೀವೂ ಯಾವಾಗಲೂ ಇಂಗ್ಲೀಷಿಗೇ ಹೋಗುತ್ತಿದ್ದೀರಿ. ಮಾನ್ಯ ಯಡಿಯೂರಪ್ಪನವರೂ ಇಂಗ್ಲೀಷಿಗೆ ಹೋದರೆ ನಮಗೆ ಪಜೀತಿಯಾಗಿದೆ.

ಅಧ್ಯಕ್ಷರು : ಇಲ್ಲ, ಇಲ್ಲ ನಿಮ್ಮ ಕಡೆಗೇ ಬಂದುಬಿಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಇನ್ನು ಮೇಲೆ ಮಾನ್ಯ ವಾಟಾಳ್ ನಾಗರಾಜರು ಸದನವಲ್ಲಿದ್ದಾರೆಯೋ ಇಲ್ಲವೇ ಎಂದು ತಿಳಿದುಕೊಂಡು ದಯವಿಟ್ಟು ತಾವು ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಂಜೇಗೌಡರಂತೂ ಲಂಡನ್‌ನಿಂದ ಬಂದಿರುವ ಹಾಗೆ ಅವರು ಯಾವಾಗಲೂ ಇಂಗ್ಲೀಷಿನಲ್ಲೇ ಮಾತನಾಡುತ್ತಾರೆ. ಮಾತನಾಡುವುದಕ್ಕೇ ಹೋಗುವುದಿಲ್ಲ, ಈ ಪರಿಸ್ಥಿತಿಯಾಗಿದೆ. ನಾನು ಮೊದಲನೇಯ ದಿವಸವೇ ನಿಮ್ಮ ಮೇಲೆ ಬೀಳಬಾರದು ಎಂದು ಬಹಳ ಯೋಚನೆ ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಖಂಡಿತ, ಇದರ ಬಗ್ಗೆ ಯಾವ ಸಂಶಯ ಬೇಡ. ನಾವು ಸಂಪನ್ಮೂಲಗಳನ್ನು ರೂಢಿಸತಕ್ಕ ಕಾಲಗಲ್ಲಿ ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ಕಾಫಿ, ತೋಟ ಒತ್ತುವರಿ ಮಾಡಿರತಕ್ಕಂಥಾದ್ದನ್ನು ಇವತ್ತು ನಾವು ವಿಲೇವಾರಿ ಮಾಡಬೇಕು. ಅಥವಾ ಬೇರೆ ಬೇರೆ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಇವೆಲ್ಲವನ್ನೂ ಸಭೆಯ ಗಮನಕ್ಕೆ ತಂದು, ಸಂಪನ್ಮೂಲಗಳನ್ನು ರೂಢಿಸಿಕೊಳ್ಳತಕ್ಕ ಕಾಲದಲ್ಲಿ, ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳತಕ್ಕಂಥದ್ದು ಅನಿವಾರ್ಯ. ಆ ಕೆಲಸವನ್ನು ಮಾಡುತ್ತೇವೆ ಎಂಬ ಮಾತನ್ನು ಹೇಳಿ, ಬಂದಂಥ ಹಣವನ್ನು ಯು.ಕೆ.ಪಿ.

ಮತ್ತು ಕೃಷ್ಣಾ ಯೋಜನೆಗಳಿಗೆ ತೊಡಗಿಸತಕ್ಕ ಪ್ರಯತ್ನ ಮಾಡಬೇಕು. ನಾವು ಎಷ್ಟು ಸಂಪನ್ಮೂಲಗಳನ್ನು ರೂಢಿಸಿಕೊಳ್ಳುತ್ತೇವೋ, ಆ ಸಂಪನ್ಮೂಲಗಳನ್ನು ಆ ಕಡೆಗೆ ತೊಡಗಿಸುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಪವರ್ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ನಿನ್ನೆ ಈ ಸಭೆಯಲ್ಲಿ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಇಂಡಸ್ಟ್ರೀಸ್ ಬಗ್ಗೆ ನಿಮ್ಮ ಪಾಲಿಸಿ ಏನು ಎಂದು ಕೇಳಿದ್ದಾರೆ. ಕೆಲವೇ ದಿವಸಗಳಲ್ಲಿ ಈ ರಾಜ್ಯಕ್ಕೆ ಸಂಬಂಧಪಟ್ಟಂಥ ಕೈಗಾರಿಕಾ ನೀತಿಯನ್ನು ರೂಪಿಸಿ, ಜನತೆಯ ಮುಂದೆ ಇಡುತ್ತೇವೆ. ಅಥವಾ ಮುಂದೆ ಈ ಸದನದಲ್ಲೇ ಕೈಗಾರಿಕಾ ನೀತಿ, ರಾಜ್ಯಸರ್ಕಾರದ್ದೇನು ಎಂಬುದನ್ನು ಈ ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇನ್ನು ಬಹಳ ಪ್ರಾಮುಖ್ಯವಾಗಿ ನೀರಾವರಿ ಬಗ್ಗೆ ಒಂದು ಮಾತನ್ನು ಹೇಳುವಾಗ, ನಾನು ಆ ಸ್ಕೀಮನ್ನು -ಜಾರಿಗೆ- ತಂದೆ ಎಂದು ಹೇಳುವುದಕ್ಕೆ ಸಿದ್ಧನಿಲ್ಲ, ಆದರೆ ಒಂದು ಭಾವನೆಯಿಂದ ಗಂಗಾ ಕಲ್ಯಾಣ ಯೋಜನೆಯನ್ನು ಜಾರಿಗೆ ತಂದೆ. ಆದರ ಈಗ ಬರುಬರುತ್ತಾ ಸ್ವಲ್ಪಮಟ್ಟಿಗೆ, ಸಾಕಷ್ಟು ಉತ್ತೇಜನ ಸಿಕ್ಕಲಿಲ್ಲ, ಇವತ್ತು ಈ ಸದನದಲ್ಲಿ, ನಾನು ಘೋಷಣೆ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಈ ರಾಜ್ಯದಲ್ಲಿ ಎಲ್ಲಿ ಭೂಗರ್ಭದಲ್ಲಿ ನೀರು ಸಿಕ್ಕುತ್ತದೆಯೋ ಆ ನೀರನ್ನು ಎಲ್ಲಾ ಭೂಮಿಗೆ ಕೊಡುತ್ತೇವೆಂದು ಹೇಳುವುದಿಲ್ಲ, ಇಡೀ 19 ಜಿಲ್ಲೆಗಳಲ್ಲಿ ಯಾವ ಯಾವ ಭಾಗದಲ್ಲಿ, ಭೂಗರ್ಭದಲ್ಲಿ ನೀರು ಸಿಗುತ್ತದೆಯೋ ಅಥವಾ ಹರಿಯುವ ನೀರು ಇರುವ ಜಾಗದಲ್ಲಿ, ನಮ್ಮ ಅಧಿಕಾರಿಗಳನ್ನು ಯೋಜನೆಯನ್ನು ರೂಪಿಸಬಹುದೆಂದು ಹೇಳಿದರೆ, ಸಾಕಷ್ಟು ನೀರು ಸಿಗುತ್ತದೆಂದು ಹೇಳಿದರೆ, ಪರಿಶಿಷ್ಟ ಸಮಾಜದವರಿಗೆ, ಹಿಂದುಳಿದ ಸಮಾಜದವರಿಗೆ ಆ ಯೋಜನೆಯಿಂದ ಸರ್ಕಾರಿ ವೆಚ್ಚದಲ್ಲಿಯೇ ಮಾಡಿಸಿ, ಅವರಿಗೆ ನಿಗದಿತ ಕಾಲದಲ್ಲಿ ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಇದಕ್ಕೆ ನೂರು ಕೋಟಿ ಖರ್ಚಾಗಬಹುದು. ಐವತ್ತು ಕೋಟಿ ಖರ್ಚಾಗಬಹುದು. ಅದಷ್ಟೇ ಹಣ ಖರ್ಚಾಗಲಿ, ಈ ವರ್ಗದ ಗ್ರೂಪ್ ಆಫ್ ಪೀಪಲ್ ಬಂದಾಗ, ಈ ಯೋಜನೆಯನ್ನು ಸರ್ಕಾರಕ್ಕೆ ತೆಗೆದುಕೊಳ್ಳುತ್ತದೆ. ಬೇರೆ ಜಿಲ್ಲಾಪರಿಷತ್ತಿಗೆ ಕೊಡಬೇಕು, ಮತ್ತೊಂದಕ್ಕ ಕೊಡಬೇಕೆಂಬುದಕ್ಕೆ ಬದಲಾಗಿ, ಸರ್ಕಾರವೇ ತೆಗೆದುಕೊಳ್ಳುತ್ತದೆ. ಭೂಮಿಯಲ್ಲಿ ನೀರು ಸಿಗುತ್ತದೆಂದು ತಿಳಿಸತಕ್ಕ ತಜ್ಞ ಯಾರಿದ್ದಾನೆ, ಜಿಯಾಲಜಿಸ್ಟ್ ಯಾರಿದ್ದಾನೆ, ಅಂತಹ ಹಿರಿಯ ಅಧಿಕಾರಿಯನ್ನು ರಾಜ್ಯಮಟ್ಟದಲ್ಲಿ ನೇಮಕ ಮಾಡಿ, ಅವರು ಕೊಡತಕ್ಕ ವರದಿಯ ಆಧಾರದ ಮೇಲೆ ಕ್ರಮಕೈಗೊಳ್ಳುತ್ತೇವೆ. ಇದಕ್ಕೆ ಪ್ರತ್ಯೇಕವಾಗಿ. ನಮ್ಮ ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆಯಲ್ಲೇ ಸಾಕಷ್ಟು ಸಿಬ್ಬಂದಿವರ್ಗ ಇದೆ. ವಿಶೇಷವಾಗಿ ಅಡಿಷನಲ್ ಎಸ್ಟಾಬ್ಲಿಷ್‌ಮೆಂಟ್ ಮಾಡಬೇಕಾದ್ದಿಲ್ಲ, ಪುನಃ ರೀ ಆರ್ಗನೈಸ್ ಮಾಡಿ, ಆ ಇಲಾಖೆಯ ಇಡೀ ರಾಜ್ಯದ 19 ಜಿಲ್ಲೆಯೊಳಗೆ ಇದರ ಬಗ್ಗೆ ಸರ್ವೆ ಮಾಡಬೇಕಾಗುತ್ತದೆ. ಏಕೆಂದರೆ ಹಣ ತೊಡಗಿಸಿದ್ದು ಹಾಳಾಗಬಾರದು.

ಭೂಗರ್ಭದಲ್ಲಿ ಸಿಗತಕ್ಕಂಥ ನೀರನ್ನು ಪುಕ್ಕಟೆಯಾಗಿ ಅವರಿಗೆ ಕೊಡುತ್ತೇವೆ. ಆಮೇಲೆ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ 5 ವರ್ಷ ಮೇಂಟೆನೆನ್ಸ್ ಚಾರ್ಜಸ್ ಕೂಡ ತೆಗೆದುಕೊಳ್ಳುವುದಿಲ್ಲ, ಅದು ವಿದ್ಯುಚ್ಛಕ್ತಿ ಇರಬಹುದು. ಈವತ್ತು ಪವರ್ ಕೊಡಬೇಕಾದ ಕಾಲದಲ್ಲಿ ಲೈನ್ ಎಳೆಯುವುದಕ್ಕೆ ಮತ್ತೊಂದಕ್ಕೆ ತಗಲುವ ಖರ್ಚನ್ನು ಸರ್ಕಾರವೇ ವಹಿಸಿಕೊಳ್ಳುವುದರ ಜೊತೆಗೆ ಅವರು ಹಾಗಿರುವ ಮೋಟರ್‌ಗಳು ಸುಟ್ಟು ಹೋದರೆ ಮೇಂಟೆನೆನ್ಸ್ ಜವಾಬ್ದಾರಿಯನ್ನು ಸರ್ಕಾರವೇ ತೆಗೆದುಕೊಳ್ಳುತ್ತೇವೆ. ಅವನು ಆರ್ಥಿಕವಾಗಿ ಸ್ವಲ್ಪ ಸಬಲನಾಗುವವರೆಗೆ ಆ ಒಂದು ವ್ಯವಸ್ಥೆಯನ್ನು ಪರಿಶಿಷ್ಟ ಜಾತಿ ಮತ್ತು ವರ್ಗದ ಜನತೆಗೆ ಕೊಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎಂ.ಪ್ಪ. ಘೋರ್ಪಡೆ : ಭೂ ಗರ್ಭದಲ್ಲಿರತಕ್ಕಂಥ ನೀರನ್ನು ಉಪಯೋಗಿಸುತ್ತೇವೆಂದು ತಾವು ಹೇಳಿದ್ದೀರಿ. ಅದಕ್ಕಿಂತ ಮುಖ್ಯವಾಗಿ ಮಳೆ ನೀರು ಏನಿದೆ ಅದನ್ನು ತಡೆಗಟ್ಟಬೇಕಾಗುತ್ತದೆ. ಕರ್ನಾಟಕದ ಒಂದೊಂದು ಜಿಲ್ಲೆಯಲ್ಲಿ 1 ಸಾವಿರ 2 ಸಾವಿರ ಚೆಕ್ ಡ್ಯಾಮ್ಸ್‌ನ್ನು ಕಟ್ಟಲಿಕ್ಕೆ ಸಾಧ್ಯ ಇದೆ. ನಮ್ಮ ಜಿಲ್ಲೆಯ ಅನುಭವದಿಂದ ತಮಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ 6 ನೂರು ಚೆಕ್ ಡ್ಯಾಮ್ಸ್‌ನ್ನು ಮಾಡಲಿಕ್ಕೆ ಸಾಧ್ಯ ಇದೆ. ಸರಾಸರಿ ಒಂದು ಲಕ್ಷ ರೂಪಾಯಿಗಳಿಗೆ ಒಂದು ಚೆಕ್ ಡ್ಯಾಮ್ ಆಗುತ್ತಿದೆ. ನನ್ನ ತಾಲ್ಲೂಕಿನಲ್ಲಿ 80 ಚೆಕ್ ಡ್ಯಾಮ್ಸ್‌ನ್ನು 2 ವರ್ಷಗಳಲ್ಲಿ 60-70 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿದ್ದಾರೆ. ಇದರ ಬಗ್ಗೆ ಸರ್ವೆ ಮ್ಯಾಪ್ಸ್ ಅನ್ನು ಇಟ್ಟುಕೊಂಡು ಅಧಿಕಾರಸ್ಥರುಗಳಿಗೆ ಹೇಳಿದರೆ, ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ಎಷ್ಟೆಷ್ಟು ಚೆಕ್ ಡ್ಯಾಮ್ಸ್ ಮಾಡಲಿಕ್ಕೆ ಸಾಧ್ಯವೆಂದು ಹೇಳುತ್ತಾರೆ. ಎರಡೇ ವರ್ಷಗಳಲ್ಲಿ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಚೆಕ್ ಡ್ಯಾಮ್ಸ್ ಕಟ್ಟಲಿಕ್ಕೆ ಸಾಧ್ಯವಿದೆ. ಒಂದೊಂದು ಜಿಲ್ಲೆಯಲ್ಲಿ ಒಂದು ಸಾವಿರ ಚೆಕ್ ಡ್ಯಾಮ್ಸ್ ಮಾಡಲಿಕ್ಕೆ ಸಾಧ್ಯವಾಗಬಹುದು. ತಾವು ಆ ಮಾತನ್ನು ಹೇಳಿದ್ದರಿಂದ ನಾನು ನಮ್ಮ ಅನುಭವವನ್ನು ಹೇಳಿದ್ದೇನೆ. ಇದರ ಬಗ್ಗೆ ತಾವು ಸ್ಪಷ್ಟವಾದಂಥ ಧೋರಣೆ ಅಷ್ಟೇ ಅಲ್ಲ, ಇದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುವುದರ ಬಗ್ಗೆಯೂ ತಮ್ಮ ಭಾಷಣದಲ್ಲಿ ತಾವು ಹೇಳುವುದಾದರೆ ನಾನು ಸ್ವಾಗತ ಮಾಡುತ್ತೇನೆ. ಒಂದು ಚೆಕ್ ಡ್ಯಾಮ್ ಕಟ್ಟುವುದರಿಂದ ಸುತ್ತಮುತ್ತಲಿನ 10-20 ಬಾವಿಗಳಲ್ಲಿ ನೀರಿನ ಮಟ್ಟ ಜಾಸ್ತಿಯಾಗುತ್ತದೆ. ಇಲ್ಲದೆ ಹೋದರೆ ಕರ್ನಾಟಕದಲ್ಲಿ ಇನ್ನು 5-10 ವರ್ಷಗಳಲ್ಲಿ ಕುಡಿಯುವ ನೀರು ಕೂಡಾ ಸಿಗಲಿಕ್ಕಿಲ್ಲವೆಂದು ಹೇಳುತ್ತೇನೆ. ಆದ್ದರಿಂದ, ಕುಡಿಯುವ ನೀರಿನ ದೃಷ್ಟಿಯಿಂದ ನೀರಾವರಿ ದೃಷ್ಟಿಯಿಂದ ನೀರಿನ ಮಟ್ಟ ಕಾಪಾಡುವ ದೃಷ್ಟಿಯಿಂದ ಇದು ಅತಿ ಮುಖ್ಯವಾದಂಥ ಕಾರ್ಯಕ್ರಮ.

ಶ್ರೀ ಹೆಚ್.ಡಿ. ದೇವೇಗೌಡ : ತಾವು ಏನು ಹೇಳಿದ್ದರಿ ಅದು ಅತ್ಯುತ್ತಮವಾದ ಸಲಹೆ. ತಮ್ಮ ಸಲಹೆಯನ್ನು ನಾನು ಸ್ವೀಕಾರ ಮಾಡುತ್ತೇನೆ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಮುಖೇನ ನಾವು ಈ ಹಿಂದೆ ಕೆಲವು ಕಾರ್ಯಕ್ರಮ ತೆಗೆದುಕೊಂಡಿದ್ದೆವು. ತಾವು ಬಳ್ಳಾರಿ ಜಿಲ್ಲೆಯಲ್ಲಿ ಏನು ವ್ಯಾಪಕವಾಗಿ ಮಾಡಿಸಿದ್ದೀರೆಂದು ಹೇಳಿದ್ದೀರೋ ಅದನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸುತ್ತೇವೆ.

ಆಮೇಲೆ, ಪ್ರೈಮರಿ ಎಜುಕೇಷನ್‌ಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ನನ್ನ ನಿರ್ಣಯವಾಗಿದೆ. ಮೇ, ಜೂನ್ ತಿಂಗಳು ಬಂತೆಂದರೆ ಬೆಂಗಳೂರಿನಲ್ಲಿ ಮಕ್ಕಳನ್ನು ಕಿಂಡರ್ ಗಾರ್ಡನ್ ಶಾಲೆಗೆ ಸೇರಿಸಬೇಕಾದರೂ 10-15 ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಇಂಥಾ ದುಸ್ಥಿತಿ ನಮ್ಮ ರಾಜ್ಯದಲ್ಲಿ ಇರಬಾರದೆಂದು ನಮ್ಮ ವಿದ್ಯಾ ಸಚಿವರಿಗೆ ನಾನು ಹೇಳಿದ್ದೇನೆ. ಮುಂದಿನ ಏಪ್ರಿಲ್ ಒಳಗೆ ಅಂದರೆ ಮುಂದಿನ ವರ್ಷ ಎಷ್ಟು ಮಕ್ಕಳು ಇನ್‌ಟೇಕ್ ಆಗಬೇಕೋ ಎಂಬುದನ್ನು ಲೆಕ್ಕ ತೆಗೆದುಕೊಂಡು ಅದರ ಅವಶ್ಯಕತೆ ಇದ್ದರೆ ಯಾರೇ ಮುಂದೆ ಬಂದರೆ ನಾವು ಅವರಿಗೆ ಇಂಗ್ಲೀಷ್ ಸ್ಕೂಲ್ ಅಲ್ಲದೆ ನಾವು ಕೊಡಲಿಕ್ಕೆ ಸಿದ್ಧರಿದ್ದೇವೆ. ಇದರ ಜೊತೆಗೆ ರಾಜ್ಯದಲ್ಲಿರತಕ್ಕಂಥ ಶಾಲೆಗಳಿಗೆ ಸೂಕ್ತ ಪ್ರಮಾಣದಲ್ಲಿ ಉಪಾಧ್ಯಾಯರುಗಳನ್ನು ತುಂಬತಕ್ಕಂಥಾದ್ದರ ಬಗ್ಗೆ ನಿರ್ಣಯ ಮಾಡುತ್ತೇವೆ. ಇದರ ಅರ್ಥ ನಾನು ಹೈಯರ್ ಎಜುಕೇಷನ್ ಬಗ್ಗೆ ವಿರೋಧಿಯಾಗಿದ್ದೇನೆಂದು ಯಾರೂ ಭಾವಿಸಿಕೊಳ್ಳಬೇಕಾಗಿಲ್ಲ. ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಷನ್‌ಗೆ ಎಷ್ಟು ಆದ್ಯತೆ ಕೊಡಬೇಕೋ ಅಷ್ಟನ್ನು ಕೊಟ್ಟು ಆಮೇಲೆ ಮೇಲಿನ ವಿದ್ಯಾಭ್ಯಾಸಕ್ಕೆ ಗಮನ ಕೊಡುತ್ತೇನೆ. ಅಲ್ಲಿಯವರೆಗೆ ಮೆಡಿಕಲ್ ಯೂನಿವರ್ಸಿಟಿ ಅಥವಾ ಇಂಜಿನೀಯರಿಂಗ್ ಯೂನಿವರ್ಸಿಟಿ ಮಾಡುವುದನ್ನು ಸ್ವಲ್ಪ

ಡಾ|| ಜೀವರಾಜ ಆಳ್ವ : ಹೊಸ ಮೆಡಿಕಲ್ ಕಾಲೇಜು, ಇಂಜನೀಯರಿಂಗ್ ಕಾಲೇಜುಗಳನ್ನು ಕೊಡುವುದನ್ನು ಪೂರ್ತಿಯಾಗಿ ನಿಲ್ಲಿಸಿಬಿಡಿ.

ಶ್ರೀ ಹೆಚ್.ಡಿ.ದೇವೇಗೌಡ : ಇನ್ನು ಮುಂದೆ ಪ್ರೈಮರಿ ಎಜುಕೇಷನ್ ಮತ್ತು ಸೆಕೆಂಡರಿ ಎಜುಕೇಷನ್‌ಗೆ ಅತ್ಯಂತ ಮಹತ್ವ ಕೊಡಬೇಕೆಂಬುದು ನಮ್ಮ ಸರ್ಕಾರದ ನೀತಿ ಮತ್ತು ಧೋರಣೆಯಾಗಿದೆ. ಇನ್ನು ಎರಡನೆಯದಾಗಿ ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ ಎಂದು ನಮಗೆ ಗೊತ್ತು. ತಾವು ಹೇಳಿದ ಹಾಗೆ ಇತ್ತೀಚೆಗೆ ವಾಟರ್ ಟೇಬಲ್ ಬಹಳ ಕೆಳಗಡೆ ಹೋಗಿರುವುದರಿಂದ ಅನೇಕ ಬಾವಿಗಳು ನಿರುಪಯುಕ್ತವಾಗಿವೆ. ಈ ಸಮಸ್ಯೆ ಜೊತೆಗೆ ಹಳ್ಳಿಗಳಿಗೆ ತಕ್ಕಮಟ್ಟಿಗೆ ಉತ್ತಮವಾದ ರಸ್ತೆ, ಆರೋಗ್ಯ ಸೌಲಭ್ಯ, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚು ಆದ್ಯತೆ ಕೊಟ್ಟು ಸರ್ಕಾರ ತನ್ನ ಕರ್ತವ್ಯವನ್ನು ನಿರ್ವಹಣೆ ಮಾಡುತ್ತದೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟುವುದರ ಬಗ್ಗೆ ನಾನು ಬಹಳ ನೋವಿನಿಂದ ಹೇಳಬೇಕಾಗುತ್ತದೆ. ಇದರ ಬಗ್ಗೆ ಪಾರ್ಲಿಮೆಂಟ್‌ನಲ್ಲೂ ಸಹಾ ನನಗೆ ತಿಳಿದಂಥ ಎಲ್ಲಾ ವಾದವನ್ನು ಮಾಡಿದ್ದೇನೆ. ಹಳ್ಳಿಗರು ಯಾವುದಾದರೂ ಬ್ಯಾಂಕ್‌ನಲ್ಲಿ 50 ಸಾವಿರ ಅಥವಾ 1 ಲಕ್ಷ ರೂಪಾಯಿಗಳ ಸಾಲ ತೆಗೆದುಕೊಂಡು ಒಂದು ಡೀಸೆಂಟ್ ಮನೆ ಕಟ್ಟಿಸುತ್ತೇವೆಂದರೆ ಯಾವ ಬ್ಯಾಂಕ್‌ನವರೂ ಹಳ್ಳಿಗರಿಗೆ ಮನೆ ಕಟ್ಟಲು ಸಾಲ ಕೊಡುವುದಿಲ್ಲ. ಅದೇ ನಗರ ಪ್ರದೇಶಗಳಲ್ಲಿ ಕಮರ್ಷಿಯಲ್ ಬ್ಯಾಂಕುಗಳು, ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್, ಹೌಸಿಂಗ್ ಬೋರ್ಡ್‌ಗೆ ಹೋದರೆ ನಗರಗಳಲ್ಲಿ ಮನೆ ಕಟ್ಟಿಸಲು ಸಾಲವನ್ನು ಕೊಡಲಿಕ್ಕೆ ಸಿದ್ಧರಿರುತ್ತಾರೆ. ಸರ್ಕಾರದಲ್ಲಿ ಕೆಲಸ ಮಾಡುವ ನೌಕರರುಗಳಿಗೆ ಮತ್ತು ಅಧಿಕಾರಿಗಳಿಗೆ 70 ತಿಂಗಳ ಸಂಬಳವನ್ನು ಮನೆ ಕಟ್ಟಿಸಿಕೊಳ್ಳುವುದಕ್ಕಾಗಿ ಸರ್ಕಾರದಿಂದ ಸಾಲ ಕೊಡುತ್ತೇವೆ. ಆದರೆ, ರೈತರುಗಳು ಮನೆ ಕಟ್ಟಬೇಕೆಂದರೆ, ಯಾರೂ ಸಾಲ ಕೊಡುವುದಿಲ್ಲ. ಇದರ ಬಗ್ಗೆ ರಿನೌನ್ಡ್ ಎಕನಾಮಿಸ್ಟ್ ಆದ ಡಾ| ರಾಜ ಚೆಲ್ಲಯ್ಯನವರೊಡನೆ ನಾನು ಒಂದು ಮೀಟಿಂಗ್ ಮಾಡಿದೆ. ಇದರ ಬಗ್ಗೆ ತಮ್ಮ ರಿಪೋರ್ಟ್‌ನಲ್ಲಿ ಸೇರಿಸುತ್ತೇನೆಂದು ಅವರು ಒಪ್ಪಿಕೊಂಡಿದ್ದರು. ಇನ್ನು ಮುಂದೆಯಾದರೂ ಹಳ್ಳಿಯ ರೈತರುಗಳು ಮನೆ ಕಟ್ಟಿಸುವುದಕ್ಕೆ ಸಾಲ ಕೊಡುವ ವ್ಯವಸ್ಥೆಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರವು ಯೋಚನೆ ಮಾಡಬೇಕೆಂದು ಈ ಸದನದ ಮೂಲಕ ಒತ್ತಾಯ ಮಾಡುತ್ತೇನೆ. ಏಕೆಂದರೆ, ಮನೆಗಳ ಸಮಸ್ಯೆ ಬಹಳ ಇದೆ. ಸುಮಾರು 24 ಕೋಟಿ ಜನತೆಗೆ ನಮ್ಮ ರಾಷ್ಟ್ರದಲ್ಲಿ ಮನೆಗಳು ಇಲ್ಲವೆಂದು ಪಾರ್ಲಿಮೆಂಟ್‌ನಲ್ಲಿ ಉತ್ತರ ಕೊಟ್ಟಿದ್ದನ್ನು ನಾನು ನೋಡಿದ್ದೇನೆ. ಕೇವಲ ನಗರ ಪ್ರದೇಶಗಳಲ್ಲಿ ಮಾತ್ರ ಈ ಸೌಲಭ್ಯವಿದ್ದು ಹಳ್ಳಿಗಳ ಕಡೆ ಈ ಸೌಲಭ್ಯ ಇಲ್ಲ ಎನ್ನುವ ವಾತಾವರಣವನ್ನು ನಾವು ಏನು ವಾತಾವರಣವನ್ನು ನಿರ್ಮಾಣ ಮಾಡಿದ್ದೇವೆಯೋ ಆ ವಾತಾವರಣವನ್ನು ಸರಿಪಡಿಸಬೇಕಾದುದು ನಮ್ಮ ಜವಾಬ್ದಾರಿ ಇದೆ. ಆಮೇಲೆ ಸನ್ಮಾನ್ಯ ಘೋರ್ಪಡೆಯವರು, ತಾವು ತಂದಂಥ ಪಂಚಾಯಿತಿ ವ್ಯವಸ್ಥೆ ಏನಿದೆ ಅದನ್ನು ಚುನಾವಣೆ ಮಾಡುವುದರ ಮೂಲಕ ತೋರಿಸಬೇಕೆಂದು ಒತ್ತಾಯ ಮಾಡಿದ್ದಾರೆ. ನಾನು ಹೇಳುವುದಿಷ್ಟೇ, ಸುಪ್ರೀಂ ಕೋರ್ಟ್ ಏನು ಆದೇಶ ಕೊಟ್ಟಿದೆ ಎಂದು ತಮಗೆಲ್ಲರಿಗೂ ಗೊತ್ತು. 50 ಪರ್ಸೆಂಟಿಗಿಂತಾ ಹೆಚ್ಚು ಮೀಸಲಾತಿ ಇರಬೇಕೆಂದು ಸೂಚಿಸಲಾಗಿದೆ. ಈ 50 ಪರ್ಸೆಂಟ್ ಮೀಸಲಾತಿ ಬರೀ ವಿದ್ಯಾಭ್ಯಾಸ ಮತ್ತು ನೌಕರರಿಗೆ ಮಾತ್ರ ಸಂಬಂಧಪಟ್ಟಿದ್ದಾಗಿದೆಯೋ ಅಥವಾ ಚುನಾವಣೆ ಸಂದರ್ಭದಲ್ಲೂ 50 ಪರ್ಸೆಂಟ್ ಮೀಸಲಾತಿ ಮೀರಬಾರದೋ ಎಂಬ ಬಗ್ಗೆ ಅನುಮಾನವಿರುವುದರಿಂದ, ನಾವು ಸುಪ್ರೀಮ್ ಕೋರ್ಟ್‌ಗೆ ಅರ್ಜಿ ಹಾಕಿ ಆದೇಶವನ್ನು ನಿರೀಕ್ಷಣೆ ಮಾಡಿದ್ದೇವೆ.

ಸುಪ್ರೀಮ್ ಕೋರ್ಟಿನಿಂದ ಆದೇಶ ಬಂದ ನಂತರ ಮೀಸಲಾತಿಗೆ ತಕ್ಕಂತೆ ನಾವು ಚುನಾವಣೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಯಾವ ಜಾತಿಗಳು ಈ ವ್ಯಾಪ್ತಿಯಲ್ಲಿ ಬರುತ್ತವೆ ಎನ್ನುವುದನ್ನು ನಿರ್ಣಯ ಮಾಡತಕ್ಕಂಥದರ ಬಗ್ಗೆ ಇದು ಸ್ವಲ್ಪ ಜಟಿಲರಾದ ಸಮಸ್ಯೆಯಾಗಿದೆ. ಆ ಒಂದು ಕಾರಣದಿಂದ ನಾವು ಸುಪ್ರೀಂಕೋರ್ಟಿನ ಮುಂದೆ ಅರ್ಜಿ ಹಾಕಿದ್ದೇವೆ. ಲಾ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಸಹ ಇದರ ಬಗ್ಗೆ ವಿಚಾರ ಮಾಡಲು ದೆಹಲಿಗೆ ಹೋಗಿದ್ದಾರೆ. ಮೇ 31ರೊಳಗೆ ನಾವು ಈ ಚುನಾವಣೆಗಳನ್ನು ನಡೆಸುತ್ತೇವೆ ಎನ್ನುವ ಮಾತನ್ನು ಹೇಳಿದ್ದೇವೆ.

ಇದರ ಬಗ್ಗೆ ನಮ್ಮ ಸಚಿವ ಸಂಪುಟದಲ್ಲಿರತಕ್ಕ ಶ್ರೀಮಾನ್ ಜಾಲಪ್ಪನವರು, ಶ್ರೀ ಸಿದ್ಧರಾಮಯ್ಯನವರು, ಶ್ರೀ ಡಿ. ಮಂಜುನಾಥ್‌ರವರು ಹಾಗೂ ನಮ್ಮ ಆರ್‌ಡಿಪಿ ಮಂತ್ರಿಯವರಾದ ಶ್ರೀಮಾನ್ ಪ್ರಕಾಶ್‌ರವರು ಉಳ್ಳಂಥ ಒಂದು ಸಬ್ ಕಮಿಟಿಯನ್ನು ಮಾಡಿದ್ದೇವೆ. ಈ 50 ಪರ್ಸೆಂಟ್‌ನ ವ್ಯಾಪ್ತಿಯಲ್ಲಿ ಯಾವ್ಯಾವ ಕಮ್ಯೂನಿಟಿಗಳನ್ನು ತರಬೇಕೆನ್ನುವ ಬಗ್ಗೆ ವರದಿಯನ್ನು ಇನ್ನು 3-4 ದಿನಗಳಲ್ಲಿ ಕೊಡಬೇಕೆಂದು ತಿಳಿಸಿದ್ದೇನೆ. ಅದಕ್ಕೆ ಪುನಃ ಯಾರಾದರೂ ಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದರೆ ಆ ಕುರಿತು ನಾನೇನೂ ಹೇಳುವುದಕ್ಕೆ ಬರುವುದಿಲ್ಲ, ನಮಗೆ ಇರತಕ್ಕಂಥ ತೊಂದರೆ ಅದೊಂದೇ. ಅದರಲ್ಲಿ ನಾವ್ಯಾರು ಸೇರಿಲ್ಲ, ಈ ಬಗ್ಗೆ ತಾವು ಮಾರ್ಗದರ್ಶನ ಮಾಡಬಹುದು

ಶ್ರೀ ಎಂ.ವೈ. ಘೋರ್ಪಡೆ : ನಾನು ಹೇಳುವುದು ಇಷ್ಟೇ. ಸುಪ್ರೀಮ್ ಕೋರ್ಟ್‌ನವರು 50 ಪರ್ಸೆಂಟ್ ಎಂದು ಏನು ಹೇಳಿದ್ದಾರೆ, ಅದು ಆರ್ಟಿಕಲ್ 15-4 ಮತ್ತು 16-4ಗೆ ಅನ್ವಯಿಸುತ್ತದೆ. ಆದರೆ ಈ ರಾಜಕೀಯವಾದಂಥ ರಿಸರವೇಷನ್ಸ್‌ಗೆ ಅದು ಅನ್ವಯಿಸುವುದಿಲ್ಲ, ಹಾಗೆಯೇ ನಾವು ಕೊಟ್ಟಿರತಕ್ಕಂಥ ರಿಸರ್‌ವೇಷನ್ಸ್ ಹೆಚ್ಚು ಕಡಿಮೆ ಅಷ್ಟೇ ಇದೆ. ಏಕೆಂದರೆ 23 ಪರ್ಸೆಂಟ್‌ನಷ್ಟು ಎಸ್‌ಸಿ ಎಸ್‌ಟಿಯವರು ಇದ್ದಾರೆ. 33 ಪರ್ಸೆಂಟ್‌ಗಳಷ್ಟು ಓಬಿಸಿಗೆ ನಾವು ಕೊಟ್ಟಿದ್ದೇವೆ. ಒಟ್ಟು 56 ಪರ್ಸೆಂಟ್ ಆಗುತ್ತದೆ. ಆದಕಾರಣ ಸುಪ್ರೀಂಕೋರ್ಟ್ ಹೇಳಿದ ಮಾತು ಇದಕ್ಕೆ ಅನ್ವಯವಾಗುವುದಿಲ್ಲ. ಎರಡನೆಯದಾಗಿ ತಾವು ಪನ್‌ಥರ್ಡ್ ರಿಸರ್‌ವೇಷನ್ಸ್‌ಗೋಸ್ಕರ ಯಾವ ಯಾವ ಜಾತಿಗಳನ್ನು ಸೇರಿಸಬೇಕೆಂಬ ಪ್ರಶ್ನೆ ಇದೆ. ನಾವು ಸರಕಾರಕ್ಕೆ ಸಂಪೂರ್ಣವಾದಂಥ ಸಹಕಾರವನ್ನು ಕೊಡುವ ದೃಷ್ಟಿಯಿಂದ, ನಾನು ಈ ಮಾತನ್ನು ನಿನ್ನೆಯೇ ಹೇಳಿದ್ದೇನೆ, ನಿಮ್ಮ ಹಳೆಯ ರಿಸರವೇಷನ್ ಪಾಲಿಸಿ ಏನಿದೆ, 1986ರಲ್ಲಿ ರಾಮಕೃಷ್ಣ ಹೆಗಡೆಯವರು ಮಾಡಿರತಕ್ಕಂಥ ಪಟ್ಟಿ ಯಾವ ಡೆಫಿನೇಷನ್, ಎಷ್ಟೋ ವರ್ಷಗಳಿಂದ ಇಲ್ಲಿ ಇದೆ. ನಾವು ಅದನ್ನು ಗ್ರಾಮಪಂಚಾಯತ್‌ಗೆ ಅನ್ವಯಿಸಿದ್ದೇವೆ. ಅದನ್ನೇ ಅನ್ವಯಿಸಬೇಕೆಂದು ಹೇಳಿ ತಮ್ಮ ಪಕ್ಷದ ವತಿಯಿಂದ ತಮ್ಮ ಈಗಿನ ಲಾಮಿನಿಸ್ಟರ್ ಒತ್ತಾಯ ಮಾಡಿದ್ದಕ್ಕಾಗಿ ಆ ಅಮೆಂಡ್‌ಮೆಂಟ್‌ನ್ನೂ ಕೂಡ ನಾವು ಸೇರಿಸಿದ್ದೇವೆ, ಆದ್ದರಿಂದ ದಯವಿಟ್ಟು ಆ 11 ಅಮೆಂಡ್‌ಮೆಂಟ್ಸ್ ಅದನ್ನು ಯಾವುದನ್ನು ನಾವು ಮಂಡಣೆ ಮಾಡಿದ್ದೆವು ಅದನ್ನು ದಯವಿಟ್ಟು ಪಾಸ್ ಮಾಡಿ, ಮತ್ತು ರಿಸರ್‌ವೇಷನ್ ಬಗ್ಗೆ ನಿಮ್ಮ ಹಳೆಯ ಆರ್ಡರ್ ಏನಿದೆ, ಅದನ್ನು ಡೆಫಿನಿಷನ್ಸ್‌ಗೋಸ್ಕರ ಉಪಯೋಗಿಸಿ, ನಾವು ಕೊಡುರ ರಿಸರ್‌ವೇಷನ್ 33 ಪರ್ಸೆಂಟ್ ಮಾತ್ರ, ಅದು ಓಬಿಸಿಗೆ. ಆದಕಾರಣ ಸುಪ್ರೀಂಕೋರ್ಟ್ 15(-4), 16(-4) 50 ಪರ್ಸೆಂಟ್ ಏನು ಹೇಳಿದರು, ಆ ಮಾತು ಇದಕ್ಕೆ ಅನ್ವಯವಾಗುವುದಿಲ್ಲ, ಇಲ್ಲಿಯೂ ಕೂಡ ಆ ಮಾತನ್ನು ನಾವು ಉಲ್ಲಂಘನೆ ಮಾಡುವ ಪ್ರಯತ್ನ ಮಾಡಿಲ್ಲ, ಡೆಫನಿಷನ್ ಅನ್ನು ಎಲೆಕ್ಷನ್ ಕಮೀಷನ್‌ನವರು ಕೇಳಿದ್ದಾರೆ. ಪಟ್ಟಿ ಏನು ಎಂದು ಕೇಳಿದ್ದಾರೆ. ಅದಕ್ಕೆ ತಾವು ಹಳೆಯ ಪಟ್ಟಿಯನ್ನೇ ಕೊಟ್ಟುಬಿಡಿ, ಇದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾವು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ನಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕೆಂಬ ವಿಚಾರವನ್ನು ಆವೊತ್ತಿನಿಂದ ಇವೊತ್ತಿನವರೆಗೆ ಹೇಳುತ್ತಾ ಇದ್ದೀರಿ. ನಾನು ಅವನ್ನು ಸ್ವಾಗತ ಮಾಡುತ್ತಾ ಇದ್ದೇನೆ. ಅದಕ್ಕೆ ಬೇಕಾದಂಥ ಯಾವ ಒಂದು ತಿದ್ದುಪಡಿಯನ್ನು ತರಬೇಕೆಂದಿದ್ದೀರಿ, ಅದನ್ನು ತರೋಣ. ಅದಕ್ಕೆ ಆಮೇಲೆ ಚರ್ಚೆ ಮಾಡಿ, ಅದು ಇನ್ನೂ 2-3 ತಿಂಗಳುಗಳಷ್ಟು ಮುಂದೆ ಹೋಗುವುದಕ್ಕೆ ಬದಲಾಗಿ ಅದಕ್ಕೆ ಈಗಲೇ ಒಂದು ಸದನದ ಸಮಿತಿಯನ್ನು ಮಾಡಿ, ಚರ್ಚೆ ಮಾಡಿ, ಅದನ್ನು ಒಂದೇ ಸಾರಿ ಕಾರ್ಯರೂಪಕ್ಕೆ ತಂದು, ಮಾರ್ಚ್ 31ರೊಳಗಾಗಿ ತಾಲ್ಲೂಕು ಮತ್ತು ಜಿಲ್ಲಾಪಂಚಾಯತ್ ಚುನಾವಣೆಗಳು ಆಗುವ ಹಾಗೆ ನೀವು ನೋಡಿಕೊಳ್ಳಬೇಕು. ಇದಿಷ್ಟೇ ನನ್ನ ವಿನಂತಿ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಘೋರ್ಪಡೆಯವರು ಹೇಳಿದ ರೀತಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ಮೀಸಲಾತಿಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಹಿಂದಿನ ಸರಕಾರದಲ್ಲಿ ಆರ್ಟಿಕಲ್ 15(-4) ಮತ್ತು 16(-4) ರ ಕೆಳಗೆ ಬರತಕ್ಕಂಥ ಜಾತಿಗಳ ಪಟ್ಟಿಯನ್ನು ಮಾಡಿ ವರ್ಗೀಕರಣ ಮಾಡಿದ್ದೇವೆ. ಆ ವರ್ಗೀಕರಣ ಯಥಾವತ್ತಾಗಿ ಈ ಪಂಚಾಯತ್ ವ್ಯವಸ್ಥೆ ಅಥವ ರಾಜಕೀಯ ಮೀಸಲಾತಿಗೆ ಅನ್ವಯಿಸುವುದಾದರೆ ನಿಜವಾದಂಥ ಹಿಂದುಳಿದವರಿಗೆ ಅದರ ಪೂರ್ಣ ಪ್ರಯೋಜನ ಆಗುವುದಿಲ್ಲ. For the purpose of Panchayat election, for the purpose of political reservation, a special list of backward classes, communities has to be prepared.

Sri G. Basavannappa : There is no political reservation in the Constitution except for Scheduled Castes and Scheduled Tribes.

Sri Kagodu Thimmappa : Nothing is permanent. It is mobile.

ಶ್ರೀ ಸಿದ್ಧರಾಮಯ್ಯ : 73ಅಮೆಂಡ್‌ಮೆಂಟ್‌ನಲ್ಲಿ ಹಿಂದುಳಿದವರಿಗೂ ಮೀಸಲಾತಿಯನ್ನು ಕೊಡಬೇಕೆಂದು ಇದೆ. ಅದನ್ನು ನಾವು ಕೊಟ್ಟಿದ್ದೇವೆ.

Sri M.Y. Ghorpade : The point is whether the definition of OBC is 70% or 60% or 80% is not the point. The point is what is the percentage of reservation that should be given under Article 15(4) and 16(4). The Supreme Court says that, that reservation should not exceed 50%. This is the opinion expressed by the Supreme Court for reservation under Article 16(4) and 15(4). So, the definition of backward classes is not the obstruction here so far as that is concerned. You might say that 90% as backward as stated in 1986 order. Somebody else may say it should be 80% or 70%. That is not the point. The point is what is the percentage of reservation that should be given under Article 15(4) and 16(4). Similarly Mr. Chief Minister for the political reservation which is under 73rd amendment, they have said 1/3 as OBC and 23%. All that you have to say is who are the backward classes, who are entitled to that reservation. Therefore, I have no normal right to say 'Don't apply 1986 Order.', because as a Minister I have agreed with the Opposition that 1986 order is good enough. It is good enough because there is an income limit of Rs. 10,000/- and it enables poor people to take advantage. I am more concerned about the income limit rather than the list of backward classes

and as the Hon.Finance Minister pointed out the 73rd Constututional amendment clearly provides for reservation for OBC and we have not done a great favour to the OBC by providing 33% when their number is at least twice that.

ಶ್ರೀ ಎಚ್.ಡಿ. ದೇವೇಗೌಡ : ಶ್ರೀಮಾನ್ ಘೋರ್ಪಡೆಯವರು ಅದರ ಬಗ್ಗೆ ಬಗ್ಗೆ ತಮ್ಮದೇ ಆದ ಕೆಲವು ನಿರ್ಣಯಗಳನ್ನು ಮಾಡಿದ್ದಾರೆ. ಆ ವಿಷಯದ ಬಗ್ಗೆ ಅವರ ರಾಜೀನಾಮೆ ಕೊಟ್ಟುಹೋದರು. ಅವರ ಕಮಿಟ್‌ಮೆಂಟ್ ಏನು ಎಂದು ನನಗೆ ಗೊತ್ತು, ನಿಮ್ಮ ನಿಲುವಿನಲ್ಲಿ ಯಾವುದೇ ರೀತಿಯ ವ್ಯತ್ಯಾಸ ಕಾಣಲು ನಾವು ಸಿದ್ಧರಿಲ್ಲ, ಆದರೆ ಒಂದೇ ಒಂದು ಕೆಲವರ ಅಭಿಪ್ರಾಯ ಆ 68 ಪರ್ಸೆಂಟ್ ತೆಗೆದುಕೊಳ್ಳುವುದರಿಂದ ಮುಂದುವರಿದ ಸಮಾಜಕ್ಕೆ ಹೆಚ್ಚು ಲಾಭ ಆಗುತ್ತದೆ ಎಂಬ ವಾದ ಇದೆ. ಏಕೆಂದರೆ ನಮ್ಮಲ್ಲೇ ಬಂತು ಇರುವ ವಿಷಯವನ್ನು ನಿಮಗೆ ತಿಳಿಸಬೇಕಾಗುತ್ತದೆ. ಅದಕ್ಕೇ ಅವರಿಗೆ ಹೇಳಿದ್ದೇನೆ, ನೀನೇ ಕುಳಿತು ಇದನ್ನು ಪರಿಶೀಲನ ಮಾಡಿ ಎಂದರೆ ಇದನ್ನು ನಾನು ಸ್ಪಷ್ಟೀಕರಿಸಲು ಇಚ್ಛೆಪಡುತ್ತೇನೆ. ಮೇ 31ರೊಳಗೆ ಕೇಳಿರುವುದು ಡೆಡ್ ಲೈನ್ ಮಾರ್ಚ್ ಅಥವಾ ಫೆಬ್ರವರಿ ಒಳಗೆ ಮಾಡಬಹುದು, ನಾನು ಸಂಬಂಧಪಟ್ಟ ಚುನಾವಣಾಧಿಕಾರಿಗಳನ್ನು ಕೇಳಿದ್ದೇನೆ, 40 ದಿವಸ ಸಾಕು ಎಂದಿದ್ದಾರೆ. ಅದರ ಬಗ್ಗೆಯೂ ಕೂಡ ನಾನು ತಯಾರಿ ಮಾಡಿದ್ದೇನೆ. ಅದಕ್ಕೇ ನಾನು ಸಬ್ ಕಮಿಟಿಗೆ ಎರಡೇ ದಿನಗಲ್ಲಿ ನೀವು ವರದಿ ಕೊಡಬೇಕೆಂದು ಹೇಳಿದ್ದೇನೆ. ಇನ್ನೊಂದು ವಿಷಯ ಹೇಳುತ್ತೇನೆ. 31ರವರೆಗೆ ಹೇಳಿರುವ ಉದ್ದೇಶ ಇವೆಲ್ಲಾ ತೊಡಕುಗಳು ಪದೇಪದೇ ಸುಪ್ರೀಂಕೋರ್ಟ್ ಮುಂದೆ ಹೋಗಬಾರದು ಎಂದು. ನಾವು ಮಾರ್ಚ್ ಒಳಗೆ ಎಲೆಕ್ಷನ್ ಮಾಡೋಣ ಎಂಬುದು ನಮ್ಮ ಸರ್ಕಾರದ ನಿಲುವು ಇದೆ, ಈ ಗೊಂದಲ ಏನಿದೆ ಅದನ್ನು ನಿವಾರಣೆ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇವೆ, ಮತ್ತೆ ಯಾರಾದರೂ ಕೋರ್ಟಿಗೆ ಹೋಗಿ ಪ್ರಶ್ನೆ ಮಾಡಲು ಅವಕಾಶ ಆಗಬಾರದೆಂಬುದು ನಮ್ಮ ಇಚ್ಛೆ. ಈಗೇನು ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತಿಗಳು ಎಂದು ನೀವು ಕರೆದಿದ್ದೀರಿ, ಅದೇ ವ್ಯವಸ್ಥೆಯಲ್ಲಿ ಚುನಾವಣೆ ಮಾಡುತ್ತೇವೆ. ಆದರೆ ನಮ್ಮ ನಿಲುವು ಬೇರೆ ಇದೆ. ಅದನ್ನು ಹಿಂದೆಯೇ ಹೇಳಿದ್ದೇವೆ. ಅಧಿಕಾರಿಗಳ ಕೈಗಿಂತ ಹೆಚ್ಚಾಗಿ ಚುನಾಯಿತ ಪ್ರತಿನಿಧಿಗಳಿಗೆ ನಾವು ಹೆಚ್ಚು ಅಧಿಕಾರವನ್ನು ಕೊಡುತ್ತೇವೆ. ಅದನ್ನು ಆರ್ಡಿನೆನ್ಸ್ ಮೂಲಕ ತರಲು ಸಾಧ್ಯವಿದೆ, ಮೇಜರ್ ತಿದ್ದುಪಡಿ ಏನೂ ಇಲ್ಲ, ಡೆಲಿಗೇಷನ್ ಆಫ್ ಪವರ್ಸ್ ಅಷ್ಟೇ ಅಥವಾ ಈ ಚುನಾವಣೆ ಮುಗಿದ ಮೇಲೆಯೂ ಕೂಡ ಈ ಸದನದಲ್ಲೇ ಮತ್ತೆ ತಿದ್ದುಪಡಿ ತಂದು ಆ ತಿದ್ದುಪಡಿಗಾಗಿ ಕಾಯಬೇಕಾಗಿಲ್ಲ, ಚುನಾವಣೆ ಮುಗಿದ ಮೇಲೆ ನಾವ ತಿದ್ದುಪಡಿ ತಂದು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಸಬೂಬಿನಿಂದ ಈ ಚುನಾವಣೆ ನಿಲ್ಲಿಸುವುದಿಲ್ಲವೆಂದು ನೇರವಾಗಿ ಹೇಳುತ್ತೇನೆ. We will go to the people. Let people elect their own representatives.

SRI M. VEERAPPA MUILY : It is not clear from the discussion and the deliberation. ಅದೇನೆಂದರೆ ಪೊಲಿಟಿಕಲ್ ರಿಸರ್ವೇಷನ್‌ಗೆ ಒಂದು ಸೂತ್ರ, ಅಥವಾ 15(4)16(4)ಗೆ ಮತ್ತೊಂದು ಸೂತ್ರ ಸಮಂಜಸವಾಗುವುದಿಲ್ಲ, 15 (4) 16(4) ಕ್ಕೆ ಯಾವ ಸೂತ್ರ ಮಾಡುತ್ತೇವೆ ಅದೇ ರಾಜಕೀಯ ಮೀಸಲಾತಿಗೂ ಅನ್ವಯವಾಗುತ್ತದೆ. ಏಕೆಂದರೆ ಮೊದಲಿನಿಂದಲೂ ಅದೇ ತರಹಮಾಡಿಕೊಂಡು ಬಂದಿದ್ದೇವೆ. ನಾವು ಮಾಡುವಾಗ ಕೂಡ ಗ್ರಾಮಪಂಚಾಯಿತಿ ಚುನಾವಣೆ ಸಂದರ್ಭದಲ್ಲಿ 86 ಆರ್ಡರ್ ಇತ್ತು. ಹಾಗೆ ಮಾಡಿದೆವು ಆ ಮೇಲೆ ಸುಪ್ರೀಂ ಕೋರ್ಟ್‌ನವರು ಬಂದ ಮೇಲೆ ಏನು ಮಾಡಿದ್ದೇವೆಂದರೆ 50 ಪರ್ಸೆಂಟಿಗೆ ಸೀಮಿತಗೊಳಿಸಿ 15 (4) ಮತ್ತು 16(4)

ಯಾವ ಕಮ್ಯುನಿಟಿಗಳು ಯಾವ್ಯಾವ ಕೆಟಗರಿಯಲ್ಲಿ ಬರಬೇಕೆಂದು ಈಗಾಗಲೇ ನಿಷ್ಕರ್ಷೆ ಆಗಿದೆ. ಅದಕ್ಕೆ The Cabinet has taken a decision.

ತಾವು ಕ್ಯಾಬಿನೆಟ್ ಸಬ್ ಕಮಿಟಿ ಏನು ಮಾಡುತ್ತೀರಿ, ಪುನಃ ಅದನ್ನು ಅದಲುಬದಲು ಮಾಡುವುದಕ್ಕೆ ಬದಲಾಗಿ ತಾವು ಅದನ್ನೇ ಒಪ್ಪಿಕೊಳ್ಳುವುದಿದ್ದರೆ ಈ ಪ್ರಶ್ನೆ ಬರುವುದಿಲ್ಲ. ಏಕೆಂದರೆ ಡೀಲಿಮಿಟೇಷನ್ ಮಾಡತಕ್ಕಂಥದ್ದು, ಕ್ಷೇತ್ರ ನಿರ್ಣಯ ಮಾಡತಕ್ಕಂಥದ್ದು ಮೀಸಲಾತಿ ಮಾಡತಕ್ಕಂಥದ್ದು ಅದಕ್ಕೆ ಬಹಳ ಸಮಯ ಬೇಕಾಗುವುದಿಲ್ಲ. ವಿತ್ ಇನ್ 15 ದಿವಸದಲ್ಲಿ ಮಾಡಬಹುದು. ಆದರೆ ಯಾವುದು 15(4), 16 (4), 50 ಪರ್‌ಸೆಂಟ್ ಟೋಟಲ್ ರಿಸರ್ವೇಷನ್ ಇದೆ, ನಾವು ಅದರ ಕೆಳಗೆ ಯಾವ ಜಾತಿಗಳನ್ನು ನಾವು ನಿಷ್ಕರ್ಷೆ ಮಾಡಿದ್ದೇವೆ, ಅದರ ಬದಲಾವಣೆ ಮಾಡುವುದು, ಬಿಡುವುದು ತಮಗೆ ಸೇರಿದ್ದುದು. ಏಕೆಂದರೆ ತಮ್ಮ ಸರ್ಕಾರ ಹೊಸದಾಗಿ ಬಂದಿದೆ. ಅದು ಬೇರೆ. ಆದರೆ ಇದರ ಬಗ್ಗೆ ನಿರ್ಣಯ ನಾವು ಮಾಡಿದ್ದೇವೆ. ಆ ಕ್ಯಾಟೆಗರಿ ಕಮ್ಯೂನಿಟೀಸ್‌ಗಳನ್ನು ನಿರ್ಷರ್ಷೆ ಮಾಡಿ ಈಗಾಗಲೇ ಆಗಿದೆ. ಅದನ್ನು ಬದಲಾವಣೆ ಮಾಡುವುದು ನಿಮಗೆ ಬಿಟ್ಟಿದ್ದುದು. ಆದರೆ ಇದಕ್ಕೆ ಮೇ ತಿಂಗಳವರಗೆ ಟೈಮ್ ಬೇಕು ಎಂದು ಹೇಳಿದಿರಿ ಇದು ಸುಪ್ರೀಂ ಕೋರ್ಟಿಗೆ ಹೋಗಬಹುದು, ಬರಬಹುದು, ಆದ್ದರಿಂದ ಅದಕ್ಕೆಲ್ಲಾ ಸಮಯಾವಕಾಶ ಇರಲಿ ಎಂದು ಹೇಳುವ ವಾದ, ಅದು ಪ್ರತ್ಯೇಕ ಆದರೆ ಈ ನಿಷ್ಕರ್ಷೆ ಮಾಡುವುದಕ್ಕೆ ತಮಗೆ ಬಹಳ ಸಮಯ ಬೇಕಾಗಿಲ್ಲ ಎಂದು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಸ್ವಲ್ಪಮಟ್ಟಿಗೆ ಕಾಗೋಡು ತಿಮ್ಮಪ್ಪನವರು ಏನು ಒಂದು ಸಂಶಯವನ್ನು ಎತ್ತಿದರೋ ಅದೇ ಸಂಶಯ ನಮ್ಮಲ್ಲೂ ಕೆಲವರಲ್ಲಿ ಇದೆ. ನಾನು ಇಷ್ಟನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಅದರಲ್ಲೂ ದೇವೇಗೌಡರು ಮುಖ್ಯಮಂತ್ರಿಗಳಾದ ತಕ್ಷಣ ಈ ವರ್ಗಕ್ಕೆ ಅನ್ಯಾಯವಾಯಿತು ಎಂದು ಹೇಳಿ ಮಾನ್ಯ ತಿಮ್ಮಪ್ಪನವರೇ ನಾಳೆ ಬೆಳಿಗ್ಗೆ ಅಪಾದನೆ ನನ್ನ ಮೇಲೆ ಮಾಡಬಹುದು. ನಾನು ಕೇವಲ ಪರಸ್ಪರ ವಿನೋದದಿಂದ ಹೇಳಿದ್ದೇನೆ. ನೀವು ಆ ರೀತಿ ಹೇಳಿದಿರಿ ಎಂದಲ್ಲ. ನಮ್ಮಲ್ಲೂ ಕೂಡ ಸಂಶಯವಿದೆ. ಇರುವ ವಿಷಯವನ್ನು ಹೇಳಬೇಕಾಗುತ್ತದೆ. ನೀವು ಪರಿಶೀಲನೆ ಮಾಡಿ ಎಂದು ಅವರಿಗೇ ಬಿಟ್ಟಿದ್ದೇನೆ. ಈಗ ಏನು ತೀರ್ಮಾನವನ್ನು ತೆಗೆದುಕೊಂಡರೂ ನಾನು ಒಪ್ಪಿಕೊಳ್ಳುತ್ತೇನೆ ಎಂದು ಹೇಳಿದ್ದೇನೆ. There is no question of any reservation on my side. ಅದರಿಂದ ಎರಡು ದಿವಸ ಕಂಟಿನ್ಯೂಯಸ್ ಆಗಿ ಕುಳಿತುಕೊಂಡು ಅಡ್ವೋಕೇಟ್ ಜನರಲ್, ಲಾ ಸೆಕ್ರೆಟರಿ ನೀವೆಲ್ಲಾ ಒಟ್ಟಿಗೆ ಸೇರಿ ಕುಳಿತು ತೀರ್ಮಾನ ಮಾಡಿ ಎಂದು ಹೇಳಿದ್ದೇನೆ. ಅದನ್ನು ಎರಡು-ಮೂರು ದಿವಸದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂಬುದು ನಮ್ಮ ಇಚ್ಛೆ ಅದು. ಆದರೆ ಒಂದು ವೇಳೆ ಯಾರಾದರೂ ಕೋರ್ಟಿಗೆ ಹೋಗಿ ಪ್ರಶ್ನೆ ಮಾಡಿ ತೊಂದರೆಯಾಗದಿದ್ದರೆ ನನ್ನ ಮನಸ್ಸಿನಲ್ಲಿ ಮಾರ್ಚ್ 31 ರೊಳಗೇ ಚುನಾವಣೆಯನ್ನು ಮಾಡಬೇಕೆನ್ನುವುದು ಇದೆ. ಆದರೆ ಅಪ್ಪರ್‌ಲಿಮಿಟ್ ನಾನು ಮೇ 31ನೇ ತಾರೀಖಿನವರೆಗೆ ಕೇಳಿದ್ದೇನೆ. ಆದರೆ ಸುಪ್ರೀಂ ಕೋರ್ಟ್ ಇನ್ನೂ ಅದರ ಬಗ್ಗೆ ಏನು ಮಾಡುತ್ತಾರೋ ಗೊತ್ತಿಲ್ಲ. ಚುನಾವಣೆ ನಡೆಸುವುದರ ಬಗ್ಗೆ ಇವತ್ತು ಯಾವುದೇ ಸಂಶಯ ಯಾರಲ್ಲೂ ಉಳಿಯಬೇಕಾಗಿಲ್ಲ. ಚುನಾವಣೆಯನ್ನು ನಡೆಸುತ್ತೇವೆ. ಈ ನಿಮ್ಮ ತ್ರೀ ಟೈರ್ ಸಿಸ್ಟಂನ್ನು ಇಟ್ಟುಕೊಳ್ಳುತ್ತೇವೆ. ಅಧಿಕಾರಿಗಳಿಗೆ ಬದಲಾಗಿ ಖಾಸಗಿ ಮುಖಂಡರುಗಳಿಗೆ ಹೆಚ್ಚಿಗೆ ಅಧಿಕಾರವನ್ನು ಕೊಡುತ್ತೇವೆ. ನೀವು ತಂದಿರುವುದಕ್ಕೂ ಸ್ವಲ್ಪ ಬದಲಾವಣೆಯನ್ನು ಆರ್ಡಿನೆನ್ಸ್ ಮುಖಾಂತರ ತರುತ್ತೇನೆ. ನಾನು ಇನ್ನೊಂದು ವಿಷಯವನ್ನು ಹೇಳಬೇಕಾಗುತ್ತದೆ. ನಾವು ಆಮೂಲಾಗ್ರವಾಗಿ ಬದಲಾವಣೆಯನ್ನು ಮುಂದೆ ತರಬೇಕು ಎಂದು ನಿರ್ಧರಿಸಿದ್ದೇವೆ ಕಾರಣವೇನೆಂದರೆ ಈ ಪಂಚಾಯಿತಿಯ ಅಧ್ಯಕ್ಷರು ಯಾರಿದ್ದಾರೆ ಪ್ರಿಸೈಡಿಂಗ್ ಆಫೀಸರ್ಸ್,

ಈಗ ಏನು ಗೊಂದಲ ಇದೆ, ಅದಕ್ಕೆ ಬದಲಾಗಿ ನಾವು ಡೈರೆಕ್ಟ್ ಎಲೆಕ್ಷನ್ ಮಾಡಬೇಕು ಎಂದು ಇದೆ. ಅದು ಮಹಿಳೆಗೆ ಬರಲಿ, ಅಥವಾ ಷೆಡ್ಯೂಲ್ಡ್ ಕಾಸ್ಟ್‌ಗೆ ಇರಲಿ, ಬ್ಯಾಕ್‌ವಾರ್ಡ್‌ಕ್ಲಾಸ್‌ಗೆ ಇರಲಿ, ಷೆಡ್ಯೂಲ್ಡ್ ಟ್ರೈಬ್ ಇರಲಿ, ಅವರು ಚುನಾವಣೆಯಲ್ಲಿ 12 ಜನವೋ 13 ಜನವೋ, 15 ಜನವೋ ನಿಂತುಕೊಂಡು ಚುನಾವಣೆಗೆ ಗೆಲ್ಲುವುದಕ್ಕೆ ಬದಲಾಗಿ ಇಂಥ ಪಂಚಾಯಿತಿಗೇ ಹರಿಜನರು ಎಂದು ನಾವು ನಿರ್ಣಯ ಮಾಡುತ್ತೇವೆ. ಇಂಥ ಪಂಚಾಯಿತಿಗೆ ಮಹಿಳೆ ಎಂದು ನಿರ್ಣಯ ಮಾಡುತ್ತೇವೆ. ಈ 13-4 ಜನ ಸದಸ್ಯರುಗಳ ಆಶ್ರಯದಲ್ಲಿ ಇರುವುದಕ್ಕೆ ಬದಲಾಗಿ there should be a direct election. He should be elected by the electorates. ಆ ಒಂದು ಸಿಸ್ಟಂನ್ನು ಜಾರಿಗೆ ತರಬೇಕು ಎಂದು ನಿರ್ಧರಿಸಿದ್ದೇವೆ. ಆಗ ನೋ ಕಾನ್‌ಫಿಡೆನ್ಸ್ ಮತ್ತೊಂದು ಹೊತ್ತುಕೊಂಡು ಹೋಗುವುದು, ಆ ಮೆಂಬರ್ ಹೊತ್ತುಕೊಂಡು ಹೋಗುವುದು ಈ ಪಂಚಾಯಿತಿಗೆ ಬದಲಾಗಿ ನೇರವಾಗಿ ಚುನಾವಣೆ ಆದರೆ ರಿಸರ್ವೇಷನನ್ನು ಇಟ್ಟೇ ಕೊಡುತ್ತೇವೆ. ಅದರಿಂದ ಆ ತಿದ್ದು ಪಡಿಯನ್ನು ಮುಂದೆ ಆಮೂಲಾಗ್ರವಾಗಿ, ಸಮಗ್ರ ತಿದ್ದುಪಡಿಯನ್ನು ತರಬೇಕು ಎನ್ನತಕ್ಕಂಥದ್ದು ನಮ್ಮ ಉದ್ದೇಶವಿದೆ.

ಶ್ರೀ ಎಂ.ವೈ. ಘೋರ್ಪಡೆ : ಗ್ರಾಮ ಪಂಚಾಯಿತಿಗಳ ಚುನಾವಣೆಗಳನ್ನು ನಾವು

ಶ್ರೀ ಹೆಚ್.ಡಿ. ದೇವೇಗೌಡ : ಯಾರಾದರೂ ಒಬ್ಬರೇ ಗೆಲ್ಲಲೇಬೇಕು ಅಲ್ಲವೇ? Any one Scheduled Caste man must win.

ಶ್ರೀ ಎಂ.ವೈ. ಘೋರ್ಪಡೆ : ನಾನು ಕೇಳುವುದು ಏನೆಂದರೆ ಗ್ರಾಮಪಂಚಾಯಿತಿ ಚುನಾವಣೆಗಳನ್ನು ನಾವು ಮಾಡಿಬಿಟ್ಟಿದ್ದೇವೆ. ಆದರೆ ಅದನ್ನು ರದ್ದುಮಾಡಿ ಮತ್ತೆ ಚುನಾವಣೆಯನ್ನು ಮಾಡುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ : ಈ ಚುನಾವಣೆಯನ್ನು ಮುಗಿಸಿ ಮುಂದೆ ಕೆಲವು ಬದಲಾವಣೆಗಳನ್ನು ಮಾಡತಕ್ಕಂಥದ್ದು ನಮ್ಮ ನಿಲುವು ಇದೆ. ಅದಕ್ಕೆ ಒಂದು ಹೆನ್ಸೀವ್ ಲೆಜಿಸ್‌ಲೇಷನನ್ನು ತರುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ನಮ್ಮ ಗ್ರಾಮ ಪಂಚಾಯಿತಿ ಚುನಾವಣೆಯನ್ನು ರದ್ದು ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿಬಿಡಿ.

Sri H.D. Deve Gowda : This will go on ಈಗ ಆಗಿರುವುದಕ್ಕೆ ಪ್ರಶ್ನೆ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಅದರಲ್ಲಿ ಒಂದು ವಿಚಾರ ಇದೆ. ತಾವು ಏನು ಹೇಳಿದಿರಿ ಬದಲಾವಣೆ ಮಾಡಿಕೊಂಡು ನೇರವಾಗಿ ಅಧ್ಯಕ್ಷನ ಆಯ್ಕೆ ಮಾಡುತ್ತೇವೆಂದು ಇದನ್ನು ವಿಚಾರ ಮಾಡಿ ಏಕೆಂದರೆ, ಇದರಿಂದ ಸಾಮಾಜಿಕ ನ್ಯಾಯವಾಗುವುದಿಲ್ಲ, ಆಯಾಯಾ ಜಾತಿಯಲ್ಲಿ ಯಾರು ಅತ್ಯಂತ ಶ್ರೀಮಂತ ಇರುತ್ತಾನೆ. ಅವನೇ ಅಧ್ಯಕ್ಷನಾಗುತ್ತಾನೆ. ದಯಮಾಡಿ ಆಲೋಚನೆ ಮಾಡಿ.ಇದರ ಸಾಧಕ ಬಾಧಕದ ಬಗ್ಗೆ ವಿಚಾರ ಮಾಡಬೇಕು ತಾವು.

ಒಬ್ಬ ಮಾನ್ಯ ಸದಸ್ಯರು : ಶ್ರೀಮಂತರು ಗೆಲ್ಲುತ್ತಾರೆನ್ನುವ ಮಾತನ್ನು ಬಿಟ್ಟುಬಿಡಿ, ಅದು ಹಳೆಯ ಮಾತು. ಈಗ ಜನರು ಯಾರಿಗೆ ಓಟು ಕೊಡಬೇಕೆಂದು ನಿರ್ಣಯ ಮಾಡಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ಆ ವಿಧೇಯಕವನ್ನು ಸಭೆ ಮುಂದೆ ಮಂಡನೆ ಮಾಡುವಾಗ ನಿಮ್ಮ ಅಭಿಪ್ರಾಯ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಅದರ ಬಗ್ಗೆ ಈಗ ಚರ್ಚೆ ಬೇಡ. ಇದರ ಬಗ್ಗೆ ಇಷ್ಟೊತ್ತು ಅನಾವಶ್ಯಕವಾಗಿ ಕಾಲ ತೆಗೆದುಕೊಳ್ಳುವ ಬದಲು ಚರ್ಚೆ ಬೇಡವೆಂದು ಹೇಳುತ್ತಾ ಪಂಚಾಯಿತಿ ಚುನಾವಣೆ ನಡೆಸುವುದಕ್ಕೆ

ಬದ್ಧರಿದ್ದೇವೆ ಎಂದು ತಿಳಿಸಲಿಚ್ಛಿಸುತ್ತೇನೆ. ಅಲ್ಲದೆ, ಇನ್ನು ಒಂದು ಗೊಂದಲ ಇದೆ. ನಾವು ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಾವಕಾಶಕ್ಕೆ ಸಂಬಂಧಿಸಿದಂತೆ ಜನವರಿ 3ನೇ ತಾರೀಖು ಬಂದಿದೆ ಪುನಃ ಅಡ್ಮಿಷನ್ ಮಾಡಿಕೊಳ್ಳುವ ಬಗ್ಗೆ ಇದು ನಿಮ್ಮ ಅಧ್ಯಕ್ಷತೆಯಲ್ಲಿ ತೆಗೆದುಕೊಂಡ ನಿರ್ಣಯ ಎರಡನೇ ಪಟ್ಟಿಯನ್ನು ಬಿಡುಗಡೆ ಮಾಡಬೇಕೆಂದು ನಿರ್ಣಯ ಮಾಡಿದಿರಿ. ಈ ನಿರ್ಣಯದ ವಿರುದ್ಧ ಯಾರೋ ಸುಪ್ರೀಂ ಕೋರ್ಟ್‌ಗೆ ರಿಟ್ ಹೋದರು. ನಾವು ಈಗ ಮೂರನೇ ಪಟ್ಟಿ ಮಾಡಿ ಬಿಡುಗಡೆ ಮಾಡಿದಿರಿ. ಒಬ್ಬ ಸದಸ್ಯರೊಬ್ಬರು ಕಠಿಣವಾಗಿ ಮಾತನಾಡಿದರು. ಓದುತ್ತಿರುವ ಮಕ್ಕಳ ಗತಿ ಏನಾಗಬೇಕು? ಇದು ನಮ್ಮ ಮುಂದಿರುವ ಕಳಕಳಿ. ನಾನು ಸುಪ್ರೀಂ ಕೋರ್ಟಿನ ಅಧಿಕಾರ, ಅದಕ್ಕೆ ಗೌರವ ಅಥವಾ ನ್ಯಾಯಾಂಗಕ್ಕೆ ಅಗೌರವ ತೋರಿಸುವುದಕ್ಕೆ ಇಷ್ಟವಿಲ್ಲ. ಆದರೆ, ಪ್ರತಿ ಹಂತದಲ್ಲೂ ಇಂತಹ ಸನ್ನಿವೇಶ ಉದ್ಭವವಾಗಿ ಇಡೀ ವರ್ಷವೆಲ್ಲಾ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಿ ಹಾಳಾದರೆ ಅವರು ಡಾಕ್ಟರುಗಳಾಗುವುದು ಹೇಗೆ? ಇಂಜಿನಿಯರುಗಳಾಗುವುದು ಹೇಗೆ? ಈ ವಿಷಯದ ಬಗ್ಗೆ ಒಂದು ವಿಧೇಯಕವನ್ನು ತರಲಾಗುತ್ತದೆ. ಇವೊತ್ತು ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಪರವಾಗಿ ಯಾರೂ ಇಲ್ಲ ಅಥವಾ ಇವೊತ್ತು ವೈದ್ಯಕೀಯ ಶಿಕ್ಷಣವನ್ನೊಳಗೊಂಡಂತೆ ತಾಂತ್ರಿಕ ಶಿಕ್ಷಣ ಮಂಡಳಿಯಲ್ಲಿ ಏನು ಗೊಂದಲವಿದೆ ಇದನ್ನು ನಿವಾರಿಸುವ ದೃಷ್ಟಿಯಿಂದ ಹೊಸ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದಕ್ಕೋಸ್ಕರ ವಿಧೇಯಕವನ್ನು ತರುವುದಕ್ಕೆ ಇಚ್ಛೆಪಡುತ್ತೇವೆನ್ನುವುದು ಸರ್ಕಾರದ ನಿಲುವು ಆಗಿದೆಯೆಂದು ತಿಳಿಸಬಯಸುತ್ತೇನೆ. ಇನ್ನೂ ಹಲವಾರು ವಿಷಯಗಳಿರುವುದರಿಂದ ಅವೆಲ್ಲವನ್ನೂ ಮಾತನಾಡುತ್ತಾ ಹೋದರೆ ಬಹಳ ವೇಳೆಯಾಗುತ್ತದೆ. ಪ್ಲಾನಿಂಗ್‌ನಲ್ಲಿ ಎಷ್ಟು ಖರ್ಚಾಗಿದೆ? ಇಲ್ಲಿಯವರೆಗೆ ನಮ್ಮ ಪ್ರಗತಿ ಏನು ಮುಂತಾದವನ್ನೆಲ್ಲಾ ಹೇಳುತ್ತಾ ಹೋದರೆ ಸಾಕಷ್ಟು ಸಮಯವನ್ನು ನಾನು ತೆಗೆದುಕೊಳ್ಳಬಹುದು. ಆದುದರಿಂದ, ಈ ಸಂದರ್ಭದಲ್ಲಿ ಇಷ್ಟನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ನಾಲ್ಕು ಮಾತುಗಳನ್ನು ಮುಗಿಸುವುದಕ್ಕಿಂತ ಮುಂಚಿತವಾಗಿ ಮಾಜಿ ಸಹಕಾರ ಸಚಿವರು ಹಾಗೂ ಸಹೋದ್ಯೋಗಿಗಳು ಮಾತನಾಡುತ್ತಾ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಪೂರ್ತಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 300 ಕೋಟಿ ಇಲ್ಲದೇ 400 ಕೋಟಿ ರೂಪಾಯಿಗಳಾಗುತ್ತದೆಯೇ, ಎಷ್ಟಾಗುತ್ತದೆಂಬುದನ್ನು ಸ್ಪಷ್ಟಪಡಿಸಿ. ಇದನ್ನು ಹೇಗೆ ತುಂಬುತ್ತೀರಿ? ಇದಲ್ಲವೂ ಸಹಕಾರಿ ಬ್ಯಾಂಕ್‌ನಲ್ಲಿದೆ. ಅನಂತರ, ಸಬ್ಸಿಡಿ ಕೊಟ್ಟಿರುವುದನ್ನು ಸೇರಿಸಿಕೊಂಡರೆ ಒಟ್ಟು ಮೊತ್ತ ಎಷ್ಟಾಗುತ್ತದೆ ಹಾಗೂ ಅದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ?

ಶ್ರೀ ಹೆಚ್.ಡಿ. ದೇವೇಗೌಡ : 130 ಕೋಟಿ ರೂಪಾಯಿಗಳಾಗುತ್ತದೆಂದು ಹೇಳಿದ್ದೇನೆ. ದೀರ್ಘಾವಧಿ ಸಾಲಕ್ಕೆ ಶೇಕಡ 9ರಷ್ಟು ಮಾತ್ರ ಬಡ್ಡಿ ತೆಗೆದುಕೊಳ್ಳುತ್ತೇನೆ. ಆದರೆ, ಮಾರ್ಚ್ 31ರೊಳಗೆ ತೆಗೆದುಕೊಂಡಿರುವ ಸಾಲ ಹಿಂತಿರುಗಿಸಿದರೆ ಮಾತ್ರ. ಇಲ್ಲದಿದ್ದರೆ, ಮಾಮೂಲಿ ಅವರು ಏನು ಕೊಡಬೇಕೋ ಅದನ್ನು ಕೊಡಲೇಬೇಕಾಗುತ್ತದೆ. ಶೇಕಡ 9ರಷ್ಟು ಬಡ್ಡಿ ಹಣ ಕೊಟ್ಟರೆ ಉಳಿದ ಬಡ್ಡಿಯ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾ ಇದನ್ನು 31.3.95ರೊಳಗೆ ಅವರು ಈ ಉಪಯೋಗ ಪಡೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುತ್ತೀರಾ? ಹೇಗೆ?

ಶ್ರೀ ಹೆಚ್.ಡಿ. ದೇವೇಗೌಡ : ಬಗರ್ ಹುಕುಂ ಸಾಗುವಳಿಯಾಗಲಿ ಅಥವಾ ಮತ್ತಾವುದೇ ಜಮೀನನ್ನು ಮಂಜೂರಾತಿ ಮಾಡುವುದಾಗಲಿ ಯಾವುದೇ ಕಾರಣದಿಂದ ನಿಲ್ಲಿಸುವುದಿಲ್ಲ. ಆದರೆ, ಏಕೆ ಇದನ್ನು ತಡೆ ಮಾಡಬೇಕೆಂದು ಹೇಳಿದ್ದೇನೆಂದರೆ ಕೆರೆ ಅಂಗಳ ಪ್ರದೇಶವನ್ನು ಯಾರೋ ಉಪಯೋಗಿಸಿಕೊಳ್ಳುತ್ತಿರುವ ಕುರಿತು ದೂರುಗಳು ನನಗೆ ಸಾಕಷ್ಟು ಬಂದಿದೆ. ಮತ್ತು ಕೆರೆ ಅಂಗಳ ಪ್ರದೇಶವನ್ನೊಳಗೊಂಡಂತೆ ಬೇರೆ ಬೇರೆ ಸ್ಥಳಗಳಿಗೆಲ್ಲಾ ಈಗ ಚೀಟಿ ಕೊಟ್ಟು ಬಿಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಹೇಳಿದಂತೆ ತಾವು ಕುಣಿಯುವುದಕ್ಕೆ ಹೋಗಬೇಡಿ.

ಶ್ರೀ ಹೆಚ್.ಡಿ. ದೇವೇಗೌಡ : ನಡೆದಿರುವ ಘಟನೆಗಳನ್ನು ನಮ್ಮ ಮುಂದೆ ಬಂದಾಗ ಏನು ಮಾಡುವುದು? should I not go through that? ನಾನು ಇಷ್ಟನ್ನು ಮಾತ್ರ ಹೇಳುತ್ತಿದ್ದೇನೆ. ಇದನ್ನು ನಿಲ್ಲಿಸುವುದಿಲ್ಲ, ನೀವು ಏನು ಟಿ.ಟಿ. ಕಂದಾಯ ಹಾಕಿರುವುದು ಸುಮಾರು 1050 ಅಥವಾ 2.000 ರೂಪಾಯಿಯಾಗಬಹುದು. ಅದನ್ನು ಕಡಿಮೆ ಮಾಡಬೇಕೆಂದು ಯೋಚಿಸುತ್ತಿದ್ದೇನೆ. ಕೆಲವು ಕಡೆ ಪರಿಶಿಷ್ಟ ಸಮಾಜಕ್ಕೆ ಸೇರಿದವರು ಈ ಹಣವನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲವೆಂದು ದೂರುಗಳು ಬಂದಿವೆ. ಇನ್ನೊಂದು ವಿಚಾರವೇನೆಂದರೆ, ಕಳೆದ 15-20 ವರ್ಷಗಳಿಂದ ಅರಣ್ಯ ಇಲಾಖೆಗೆ ಸೇರಿದ ಪ್ರದೇಶದಲ್ಲಿ ಬಡವರು ಏನು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ, ಇವರಿಗೆ ಅರಣ್ಯ ಇಲಾಖಾ ಸಿಬ್ಬಂದಿಯವರಿಂದ ಕಿರುಕುಳ ಉಂಟಾಗುತ್ತಿದೆ. ಈ ದಿಸೆಯಲ್ಲಿ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಯ ಸಚಿವರಾದ ಶ್ರೀ ಕಮಲನಾಥ್‌ರವರ ಜೊತೆ ಸಭೆ ನಡೆಸಿ ಚರ್ಚಿಸಿದಾಗ ಅವರು ಏನು ಹೇಳಿದ್ದಾರೆಂದರೆ, ಕಳೆದ ಹಲವಾರು ವರ್ಷಗಳಿಂದ ಯಾರು ಬಡವರು ಅಂತಹ ಪ್ರದೇಶಗಳಲ್ಲಿ ಸಾಗುವಳಿ ಮಾಡುತ್ತಿದ್ದಾರೋ, ಅವರಿಗೆ ಕೊಡಬಹುದು. ಹೊಸದಾಗಿ ಮಾಡುವ ಪ್ರಶ್ನೆ ಇಲ್ಲ, ಇರುವ ಕಾನೂನು ಪ್ರಕಾರ ಅದು ಸಾಧ್ಯವಿಲ್ಲ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ನೀವು ಕರ್ನಾಟಕದ ಉದ್ದಗಲಕ್ಕೂ ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ನಿಮ್ಮನ್ನು ಜನರು 'ಮಣ್ಣಿನ ಮಗ ದೇವೇಗೌಡ' ಎಂದು ಜಯಕಾರ ಹಾಕಿದ್ದಾರೆ. ಬಡವರು ಸುಮಾರು 20 ವರ್ಷಗಳಿಂದ ಅಲ್ಲಿ ಸಾಗುವಳಿ ಮಾಡುತ್ತಿದ್ದು, ಏಕಾಏಕಿ ಅವರನ್ನು ಎಲ್ಲಿಗೆ ಕಳುಹಿಸುತ್ತೀರಿ? ಅದು ಸಾಧ್ಯವಿಲ್ಲ. ಇದಕ್ಕೆ ಏನಾದರೂ ಪರಿಹಾರ ಹುಡುಕಲೇಬೇಕು. ಹಿಂದಿನ ಸರ್ಕಾರ ಇದರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ, ತಾವು ಮಾಡಿ ತೋರಿಸಬೇಕು. ಇದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ಕೆರೆ ಅಂಗಳ ಪ್ರದೇಶವನ್ನಾಗಲಿ, ಸ್ಮಶಾನದ ಜಾಗಗಳಲ್ಲಿ ಯಾರು ಅತಿಕ್ರಮಣ ಮಾಡಿದ್ದಾರೋ ಅವನ್ನೆಲ್ಲಾ ವಶಪಡಿಸುವುದಕ್ಕೆ ಪ್ರಯತ್ನಿಸುತ್ತೇವೆಂದು ಸೂಕ್ಷ್ಮವಾಗಿ ಹೇಳಿ ಇನ್ನೊಂದು ವಿಷಯ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಅರಣ್ಯ ಇಲಾಖಾ ಪ್ರದೇಶಕ್ಕೆ ಸೇರಿದ ಜಮೀನುಗಳಲ್ಲಿ ಎರಡು ಎಕರೆಗಳಷ್ಟು ಪ್ರದೇಶದಲ್ಲಿ ಸಾಗುವಳಿ ಮಾಡಿಕೊಂಡಿರುವ ಕಡು ಬಡವರು ಯಾರಿದ್ದಾರೆ, 50 ಎಕರೆಗಳನ್ನು ಇಟ್ಟುಕೊಂಡಿರುವವರಿಗಲ್ಲ, ಅಂತಹವರಿಗೆ ಜಮೀನು ಮಂಜೂರಾತಿ ಮಾಡುವುದರ ಬಗ್ಗೆ ಪರ್ಯಾಯ ಜಾಗವನ್ನು ನೀವು ಪ್ರಪೋಸ್ ಮಾಡಬೇಕೆಂದು ಹೇಳಿದ್ದಾರೆ. Subject to the condition that we should give alternative land for the the development of the forest.

ಅದು ಜೋತಾ ಆಗಬಾರದು. ಆ ಹಿನ್ನೆಲೆಯಲ್ಲಿ ಈ ಷರತ್ತಿಗೆ ಒಪ್ಪಿದ್ದಾರೆ, ನಾವು ಒಪ್ಪಿದ್ದೇವೆ. ನಾವು ಆ ಭೂಮಿಯನ್ನು ಪರ್ಯಾಯವಾಗಿ ಕೊಟ್ಟು ಕಡು

ಯಾರು ಈಗಾಗಲೇ ಆ ಪ್ರದೇಶಗಳಲ್ಲಿ ಬೆಳೆದುಕೊಂಡು ಬರುತ್ತಿದ್ದಾರೆ, ಆ ಭೂಮಿಯನ್ನು ಅವರಿಗೇ ಕೊಟ್ಟು ಖಾಯಂಗೊಳಿಸುವ ಒಂದು ನಿರ್ಣಯವನ್ನು ಕೂಡ ಇಷ್ಟರಲ್ಲೇ ಕೈಗೊಳ್ಳುತ್ತೇವೆಂದು ಹೇಳುತ್ತಾ, ಇವೊತ್ತು ವರ್ಷದ ಕೊನೆಯ ದಿವಸವಾಗಿರುವುದರಿಂದ ನಾಳೆಯಿಂದ ನೂತನ ವರ್ಷ ಪ್ರಾರಂಭವಾಗಲಿರುವುದರಿಂದ ತಮಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತಾ, ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ಹಾಗೂ ಸಹಕಾರ ಕೊಟ್ಟ ತಮಗೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳು ಈ ಕಡೆ ಸ್ವಲ್ಪ ಗಮನ ಕೊಡಬೇಕು. ಇವೊತ್ತು ಸಣ್ಣ ರೈತ, ದೊಡ್ಡ ರೈತನೆಂದು ಭೇದ-ಭಾವ ಎಣಿಸದೆ ಹತ್ತು ಸಾವಿರ ರೂಪಾಯಿಗಳವರೆಗೆ ಯಾವುದೇ ಒಂದು ಮಿತಿ ಹಾಕದೆ ಎಲ್ಲಾ ರೈತರ ಕೃಷಿ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಬೇಕು. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ 15-20 ಕೋಟಿ ಜಾಸ್ತಿ ಖರ್ಚಾಗಬಹುದು. ಎರಡನೆಯದಾಗಿ, ಎಲ್ಲಿ ಸಹಕಾರಿ ಸಂಘಗಳಿಲ್ಲವೋ, ಅನಿವಾರ್ಯವಾಗಿ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ರೈತರು ಸಾಲ ತೆಗೆದುಕೊಂಡಿದ್ದಾರೆ. ರೈತನ ಸಾಲ ಇಲ್ಲಾದರೂ ತುಂಬ ಬೇಕು ಅಲ್ಲದರೂ ತುಂಬಬೇಕು, ಆತ ಯಾವುದೇ ಪಾಪ ಮಾಡಿಲ್ಲ. ದಯಮಾಡಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ತೆಗೆದ ಕೊಂಡಿರುವ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿ ಸರ್ಕಾರ ತುಂಬಿಕೊಡಬೇಕು ಅಲ್ಲದೆ, ಇದುವರೆವಿಗೂ ಯಾವ ರೈತ ಪ್ರಾಮಾಣಿಕವಾಗಿ ಸಾಲವನ್ನು ಕಟ್ಟಿಕೊಂಡು ಬಂದಿದ್ದಾನೆ, ಕೇಂದ್ರ ಸರ್ಕಾರದಿಂದ ಸಾಲ ಮನ್ನಾ ಯೋಜನೆ ಜಾರಿಗೆ ಬಂದ ನಂತರ ಎಷ್ಟು ಜನ ರೈತರು ಬಡ್ಡಿ ಕಟ್ಟಿಕೊಂಡು ಬಂದಿದ್ದಾರೆ ಅವರೆಲ್ಲರಿಗೂ ವಾಪಸ್ಸು ಬಡ್ಡಿ ಕೊಡುವಂಥ ವ್ಯವಸ್ಥೆ ಮಾಡಬೇಕು. ಮೂರನೆಯದಾಗಿ, ಬಡವರಿಗೆ ಅಕ್ಕಿಯನ್ನು ಕೊಡುವಂಥ ಕಾರ್ಯಕ್ರಮವನ್ನು ಘೋಷಿಸಿದ್ದೀರಿ. ಇವನ್ನು ಯಾವ ದಿನಾಂಕದಿಂದ ಜಾರಿಗೆ ತರುತ್ತೀರಿ ? ಕಿಲೋಗೆ 3.20ರಂತೆ ಅಕ್ಕಿ ಕೊಡುತ್ತೇವೆಂದು ತಾವು ಹೇಳಿದ್ದುದು, ಎಂದಿನಿಂದ ಜಾರಿಗೆ ಬರುತ್ತದೆಂದು ಹೇಳಬೇಕು. ಹಾಗೆಯೇ ಚುನಾವಣಾ ಹಿಂದಿನ ದಿವಸ ಜಾಹೀರಾತಿನ ಮೂಲಕ ಸ್ಪಷ್ಟವಾಗಿ ಒಂದು ಮಾತನ್ನು ಹೇಳಿದ್ದೀರಿ. ಏನೆಂದರೆ, ಖಾಲಿ ಇರುವ ಒಂದು ಲಕ್ಷ ಸರ್ಕಾರಿ ಹುದ್ದೆಗಳನ್ನು ಒಂದೇ ವರ್ಷದಲ್ಲಿ ತುಂಬಿ ಗ್ರಾಮೀಣ ನಿರುದ್ಯೋಗಿಗಳಿಗೆ ಶೇಕಡ 70ರಷ್ಟು ಮೀಸಲಾತಿ ನೀಡುತ್ತೇವೆಂದು ಹೇಳಿದ್ದೀರಿ. ಕನಿಷ್ಠಪಕ್ಷ ಜನವರಿಯಲ್ಲಿ ಇಷ್ಟು ಹುದ್ದೆಗಳನ್ನು ತುಂಬುತ್ತೇವೆ, ಫೆಬ್ರವರಿಯಲ್ಲಿ ಇಷ್ಟು ಹುದ್ದೆ, ಮಾರ್ಚಿ ತಿಂಗಳಿನಲ್ಲಿ ಇಷ್ಟು ಹುದ್ದೆ ತುಂಬುತ್ತೇವೆ ಎನ್ನುವ ತಮ್ಮ ಕಾರ್ಯಕ್ರಮವೇನಿದೆ ಅದನ್ನು ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು : ನೀವು ಸದಾ ಕಾಲ ದಿನಪತ್ರಿಕೆಗಳ ಮೇಲೆ ರಿಲೈ ಆದರೆ ಹೇಗೆ ?

ಶ್ರೀ ಬಿ. ಎಸ್. ಯಡಿಯೂರಪ್ಪ : ಅದು ಅವರ ಚುನಾವಣಾ ಪ್ರಣಾಳಿಕೆ.

ಶ್ರೀ ಕೆ. ಎಸ್. ಈಶ್ವರಪ್ಪ, ಪತ್ರಿಕೆಗಳ ಮುಖಾಂತರವೇ ಇವರು ಅಧಿಕಾರಕ್ಕೆ ಬಂದಿರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಕೃಷ್ಣಾ, ಕಾವೇರಿ ಬಗ್ಗೆ ಮಾತನಾಡಿದ್ದೀರಿ. ಹಿಂದಿನ ಸರ್ಕಾರ ಕಳೆದ ಬಜೆಟ್ಟಲ್ಲಿ ಸದರಿ ಯೋಜನೆಗಳಿಗೆ ಏನು ಹಣವನ್ನು ಹಂಚಿಕೆ ಮಾಡಿ ತೆಗೆದಿರಿಸಿತ್ತು, ಅವನ್ನು ಮಾರ್ಚಿಯೊಳಗಾಗಿ ಪೂರ್ತಿಯಾಗಿ ಖರ್ಚು ಮಾಡುತ್ತೇವೆ ಎನ್ನುವ ಭರವಸೆ ಕೊಡಬೇಕು. ಇದಲ್ಲದೆ, ವಿಶೇಷ ಘಟಕ ಯೋಜನೆ (ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್) ಯಡಿ ಕೇಂದ್ರ ಸರ್ಕಾರದಿಂದ ಬಂದಿರುವ

ಶ್ರೀ ಹೆಚ್. ಡಿ. ದೇವೇಗೌಡ : ಬಗರ್ ಹುಕುಂ ಸಾಗುವಳಿಯಾಗಲಿ ಅಥವಾ ಮತ್ಯಾವುದೇ ಜಮೀನನ್ನು ಮಂಜೂರಾತಿ ಮಾಡುವುದಾಗಲಿ ಯಾವುದೇ ಕಾರಣದಿಂದ ನಿಲ್ಲಿಸುವುದಿಲ್ಲ. ಆದರೆ, ಏಕೆ ಇದನ್ನು ತಡೆ ಮಾಡಬೇಕೆಂದು ಹೇಳಿದ್ದೇವೆಂದರೆ ಕೆರೆ ಅಂಗಳ ಪ್ರದೇಶವನ್ನು ಯಾರ್ಯೊ ಉಪಯೋಗಿಸಿಕೊಳ್ಳುತ್ತಿರುವ ಕುರಿತು ದೂರುಗಳು ನನಗೆ ಸಾಕಷ್ಟು ಬಂದಿದೆ. ಮತ್ತು ಕೆರೆ ಅಂಗಳ ಪ್ರದೇಶವನ್ನೊಳಗೊಂಡಂತೆ ಬೇರೆ ಬೇರೆ ಸ್ಥಳಗಳಿಗೆಲ್ಲಾ ಈಗ ಚೀಟಿ ಕೊಟ್ಟು ಬಿಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಹೇಳಿದಂತೆ ತಾವು ಕುಣಿಯುವುದಕ್ಕೆ ಹೋಗಬೇಡಿ.

ಶ್ರೀ ಹೆಚ್. ಡಿ. ದೇವೇಗೌಡ : ನಡೆದಿರುವ ಘಟನೆಗಳನ್ನು ನಮ್ಮ ಮುಂದೆ ಬಂದಾಗ ಏನು ಮಾಡುವುದು ? Should I not go through that ? ನಾನು ಇಷ್ಟನ್ನು ಮಾತ್ರ ಹೇಳುತ್ತಿದ್ದೇನೆ. ಇದನ್ನು ನಿಲ್ಲಿಸುವುದಿಲ್ಲ. ನೀವು ಏನು ಟಿ. ಟಿ. ಕಂದಾಯ ಹಾಕಿರುವುದು ಸುಮಾರು 1050 ಅಥವಾ 2,000 ರೂಪಾಯಿಯಾಗಬಹುದು. ಅದನ್ನು ಕಡಿಮೆ ಮಾಡಬೇಕೆಂದು ಯೋಚಿಸುತ್ತಿದ್ದೇನೆ. ಕೆಲವು ಕಡೆ ಪರಿಶಿಷ್ಟ ಸಮಾಜಕ್ಕೆ ಸೇರಿದವರು ಈ ಹಣವನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲವೆಂದು ದೂರುಗಳು ಬಂದಿವೆ. ಇನ್ನೊಂದು ವಿಚಾರವೇನೆಂದರೆ, ಕಳೆದ 15-20 ವರ್ಷಗಳಿಂದ ಅರಣ್ಯ ಇಲಾಖೆಗೆ ಸೇರಿದ ಪ್ರದೇಶದಲ್ಲಿ ಬಡವರು ಏನು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ, ಇವರಿಗೆ ಅರಣ್ಯ ಇಲಾಖಾ ಸಿಬ್ಬಂದಿಯವರಿಂದ ಕಿರುಕುಳ ಉಂಟಾಗುತ್ತಿದೆ. ಈ ದಿಸೆಯಲ್ಲಿ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಯ ಸಚಿವರಾದ ಶ್ರೀ ಕಮಲನಾಥ್‌ರವರ ಜೊತೆ ಸಭೆ ನಡೆಸಿ ಚರ್ಚಿಸಿದಾಗ ಅವರು ಏನು ಹೇಳಿದ್ದಾರೆಂದರೆ, ಕಳೆದ ಹಲವಾರು ವರ್ಷಗಳಿಂದ ಯಾರು ಬಡವರು ಅಂತಹ ಪ್ರದೇಶಗಳಲ್ಲಿ ಸಾಗುವಳಿ ಮಾಡುತ್ತಿದ್ದಾರೋ ಅವರಿಗೆ ಕೊಡಬಹುದು. ಹೊಸದಾಗಿ ಮಾಡುವ ಪ್ರಶ್ನೆ ಇಲ್ಲ. ಇರುವ ಕಾನೂನು ಪ್ರಕಾರ ಅದು ಸಾಧ್ಯವಿಲ್ಲ.

ಶ್ರೀ ಎಸ್. ಆರ್. ಲಕ್ಷ್ಮಯ್ಯ : ನೀವು ಕರ್ನಾಟಕದ ಉದ್ದಗಲಕ್ಕೂ ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ನಿಮ್ಮನ್ನು ಜನರು 'ಮಣ್ಣಿನ ಮಗ ದೇವೇಗೌಡ' ಎಂದು ಜಯಕಾರ ಹಾಕಿದ್ದಾರೆ. ಬಡವರು ಸುಮಾರು 20 ವರ್ಷಗಳಿಂದ ಅಲ್ಲಿ ಸಾಗುವಳಿ ಮಾಡುತ್ತಿದ್ದು, ಏಕಾಏಕಿ ಅವರನ್ನು ಎಲ್ಲಿಗೆ ಕಳುಹಿಸುತ್ತೀರಿ ? ಅದು ಸಾಧ್ಯವಿಲ್ಲ ಇದಕ್ಕೆ ಏನಾದರೂ ಪರಿಹಾರ ಹುಡುಕಲೇಬೇಕು. ಹಿಂದಿನ ಸರ್ಕಾರ ಇವರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ತಾವು ಮಾಡಿ ತೋರಿಸಬೇಕು ಇದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ : ಕೆರೆ ಅಂಗಳ ಪ್ರದೇಶವನ್ನಾಗಲಿ, ಸ್ಮಶಾನದ ಜಾಗಗಳಲ್ಲಿ ಯಾರು ಅತಿಕ್ರಮಣ ಮಾಡಿದ್ದಾರೋ ಅವನ್ನೆಲ್ಲಾ ರದ್ದುಪಡಿಸುವುದಕ್ಕೆ ಪ್ರಯತ್ನಿಸುತ್ತೇವೆಂದು ಸೂಕ್ಷ್ಮವಾಗಿ ಹೇಳಿ ಇನ್ನೊಂದು ವಿಷಯ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಅರಣ್ಯ ಇಲಾಖಾ ಪ್ರದೇಶಕ್ಕೆ ಸೇರಿದ ಜಮೀನುಗಳಲ್ಲಿ ಎರಡು ಎಕರೆಗಳಷ್ಟು ಪ್ರದೇಶದಲ್ಲಿ ಸಾಗುವಳಿ ಮಾಡಿಕೊಂಡಿರುವ ಕಡು ಬಡವರು ಯಾರಿದ್ದಾರೆ, 50 ಎಕರೆಗಳನ್ನು ಇಟ್ಟುಕೊಂಡಿರುವವರಿಗಲ್ಲ, ಅಂತಹವರಿಗೆ ಜಮೀನು ಮಂಜೂರಾತಿ ಮಾಡುವುದರ ಬಗ್ಗೆ ಪರ್ಯಾಯ ಜಾಗವನ್ನು ನೀವು ಪ್ರಪೋಸ್ ಮಾಡಬೇಕೆಂದು ಹೇಳಿದ್ದಾರೆ. Subject to the condition that we should give alternative land for the development of the forest.

ಅದು ಖೋತಾ ಆಗಬಾರದು. ಆ ಹಿನ್ನೆಲೆಯಲ್ಲಿ ಈ ಷರತ್ತಿಗೆ ಒಪ್ಪಿದ್ದಾರೆ, ನಾವು ಒಪ್ಪಿದ್ದೇವೆ. ನಾವು ಆ ಭೂಮಿಯನ್ನು ಪರ್ಯಾಯವಾಗಿ ಕೊಟ್ಟು ಕಡು ಬಡವರು

ನ್ಯಾಯ ಇದೆ. ಏಕೆಂದರೆ ಮುಳುಗಿಯಾಗಿದೆ. ಅದಕ್ಕೆ ಏಕೆ ಹೆಚ್ಚು ಕಡಿಮೆ ಮಾಡುವುದು. ಕೊಟ್ಟುಬಿಡಿ.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಕಾಗೋಡು ತಿಮ್ಮಪ್ಪನವರು ಹಿಂದೆ ಸಚಿವರಾಗಿದ್ದಾಗ ಏನಾದರೂ ಕೊಡಿ ಎಂದು ನಾನು ನಾಲ್ಕೈದು ವರ್ಷಗಳಿಂದ ಕೇಳಿಕೊಂಡಿದ್ದಕ್ಕೆ ಏನೂ ಕೊಡಲಿಲ್ಲ.

ಈಗ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬೆಳೆ ಸಾಲ ತೆಗೆದುಕೊಂಡಿರುವವವಿಗೆ ಬಡ್ಡಿ ಮನ್ನಾ ಮಾಡಲು ಹೊರಟರೆ ಒಂದು ವರ್ಷದ ಇಡೀ ಬಜೆಟ್ ಅದಕ್ಕೇ ಹೋಗುತ್ತದೆ. ಅದು ಸಾಧ್ಯವಾಗದ ಕೆಲಸ. ರಾಷ್ಟ್ರೀಕೃತ ಬ್ಯಾಂಕುಗಳಿಗೆ ಕೆಲವು ಸಹಕಾರಿ ಸಂಘಗಳು ಸೀಡ್ ಆಗಿವೆ ಅಲ್ಲಿ ಸಹಕಾರಿ ಸಂಘಗಳ ಮೂಲಕ ಏನು ಸಾಲ ತೆಗೆದುಕೊಂಡಿದ್ದಾರೆ, ಅದಕ್ಕೆ ಈ ರಿಯಾಯಿತಿ ಅನ್ವಯವಾಗುತ್ತದೆ. ಆದರೆ, ನೇರವಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಯಾರು ಸಾಲ ತೆಗೆದುಕೊಂಡಿದ್ದಾರೆ, ಅವರಿಗೆ ಬಡ್ಡಿ ಮನ್ನಾ ಮಾಡಲು ಸಾಧ್ಯವಾಗುವುದಿಲ್ಲ, ಬೇಕಾದರೆ ತಾವು ಕೇಂದ್ರ ಸರ್ಕಾರಕ್ಕೆ ತಿಳಿಸಿ ವಜಾ ಮಾಡಿಸಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಎರಡು ಪ್ರಶ್ನೆಗಳಿಗೆ ಉತ್ತರ ಕೊಡಿ. ಒಂದು ಲಕ್ಷ ಸರ್ಕಾರಿ ಹುದ್ದೆಗಳನ್ನು ತುಂಬುವುದಕ್ಕೆ ಯಾವಾಗ ಪ್ರಾರಂಭಿಸುತ್ತೀರಿ? ಮತ್ತು ರೂ. 3.20 ಪೈಸೆಯಂತೆ ಕಿಲೋಗೆ ಯಾವಾಗಿನಿಂದ ಅಕ್ಕಿಯನ್ನು ಕೊಡುತ್ತೀರಿ?

ಶ್ರೀ ಹೆಚ್.ಡಿ. ದೇವೇಗೌಡ : ವಿದ್ಯಾ ಇಲಾಖೆ, ಆರೋಗ್ಯ ಇಲಾಖೆಮತ್ತು ಪೋಲೀಸ್ ಇಲಾಖೆಗಳಿಗೆ ಸಂಬಂಧಿಸಿದಂತೆ ಇರತಕ್ಕಂಥ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅತಿ ಶೀಘ್ರವಾಗಿ ಪ್ರಯತ್ನಿಸುತ್ತೇವೆ. ಇದರಲ್ಲಿ ಒಂದು ತೊಡಕಿದ್ದು, ಇದನ್ನು ಮೊನ್ನೆ ಕೂಡ ನಾವು ಚರ್ಚಿಸಿದ್ದೇವೆ. ಮೀಸಲಾತಿ ಶೇಕಡ 50 ಏನಿದೆ, ಈ ಗೊಂದಲ ನಮ್ಮ ಮುಂದಿನದ್ದು ನಮ್ಮ ಕುತ್ತಿಗೆ ಕೊಯ್ಯುತ್ತಿದೆ. ಈ ಕುರಿತು ಸರ್ವೋಚ್ಚ ನ್ಯಾಯಾಲಯದಿಂದ ತೀರ್ಪು ಬರಲಿ ಎಂದು ಕಾಯುತ್ತಿದ್ದೇವೆ. ರೂ. 3.20 ಪೈಸೆ ಕಿಲೋಗೆ ಅಕ್ಕಿಯನ್ನು ದಿನಾಂಕ 1.4.1995 ರಿಂದ ಜಾರಿಗೆ ಕೊಡುತ್ತೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ತಾವು ತಮ್ಮ ಸರ್ಕಾರದ ನೀತಿಯಲ್ಲಿನ ತಾರತಮ್ಯ, ಮತ್ತು ಅಧಿಕಾರಿಗಳ ಅಮಾನತ್ತಿನ ವಿಷಯದಲ್ಲಾಗಿರತಕ್ಕಂಥ ತಾರತಮ್ಯದ ಕುರಿತು ಉತ್ತರ ಕೊಡುವಾಗ ಹೇಳುತ್ತೇವೆಂದು ಹೇಳಿದ್ದೀರಿ. ಈಗ ಹೇಳುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ : ಅದನ್ನು ಪರಿಶೀಲಿಸುತ್ತೇನೆ. ಏಕೆಂದರೆ, ಯಾರ ಮೇಲೂ ನನಗೆ ರಾಗ-ದ್ವೇಷವಿಲ್ಲ, ಜೊತೆಗೆ ಇನ್ನೊಂದು ಮಾತು ಹೇಳಬೇಕೆಂದಿದ್ದೆ. ನಮ್ಮ ಹಣಕಾಸಿನ ಸಂಪನ್ಮೂಲವನ್ನು ರೂಢಿಸಿಕೊಳ್ಳುವ ದೃಷ್ಟಿಯಿಂದ ಬ್ಯಾಂಕುಗಳಲ್ಲಿ ಮತ್ತು ಕೆಲವು ಸರ್ಕಾರಿ ಸಾಮ್ಯದಲ್ಲಿರತಕ್ಕ ಕೈಗಾರಿಕೆಗಳಲ್ಲಿ ಹಿರಿಯ ಅಧಿಕಾರಿಗಳು ಡೈರೆಕ್ಟರ್ಗಳಾಗಿದ್ದರೆ ಅಲ್ಲಿಯೂ ವಾಹನ ತೆಗೆದುಕೊಳ್ಳುತ್ತಾರೆ, ಇಲ್ಲಿ ಕಾರ್ಯದರ್ಶಿಗಳಾಗಿ ವಾಹನ ತೆಗೆದುಕೊಳ್ಳುತ್ತಾರೆ, ಹೀಗೆ 3-4 ವಾಹನಗಳನ್ನು ಇಟ್ಟುಕೊಳ್ಳತಕ್ಕ ಪರಿಪಾಠವೇನಿದೆ, ಇಂತಹ ವಿಷಯಗಳಿಗೆ ಇತಿಶ್ರೀ ಹಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಇದಿಷ್ಟೇ ಅಲ್ಲ, ಪ್ರತಿಯೊಬ್ಬ ಜಿಲ್ಲಾ ಅಧಿಕಾರಿಗೂ ಇವೊತ್ತು ಆದೇಶ ಕೊಡುತ್ತಿದ್ದೇವೆ. ಜನತಾ ಮನೆಗಳನ್ನು ವಿತರಿಸುವಾಗ ಅಕ್ರಮ ನಡೆದಿರಬಹುದು, ನಿವೇಶನ ಹಂಚುವಾಗ ಅಕ್ರಮ ನಡೆದಿರಬಹುದು, ಭಾಗ್ಯಜ್ಯೋತಿ ಕಾರ್ಯಕ್ರಮದಲ್ಲಿ ಅಕ್ರಮ ನಡೆದಿರಬಹುದು. ಬಡವರಿಗೆ ಕೊಡತಕ್ಕಂಥ ಯಾವ ಸೌಲಭ್ಯಗಳಿವೆ, ಆ ಸೌಲಭ್ಯಗಳು ಫಲಾನುಭವಿಗಳಿಗೆ ಕೊಡುವುದರಲ್ಲಿ ಏನಾದರೂ ಅನ್ಯಾಯ ನಡೆದಿದ್ದರೆ ಅದನ್ನು ಪರಿಶೀಲಿಸುವುದಕ್ಕೆ ಕನಿಷ್ಠ ಪಕ್ಷ ಪ್ರತಿ ತಿಂಗಳಲ್ಲಿ ವಾರಕ್ಕೊಂದು ಭಾರಿಯಾದರೂ ಅನಿರೀಕ್ಷಿತ ಭೇಟಿ ಕೊಟ್ಟು ಪರಿಶೀಲಿಸಿ ಸರ್ಕಾರಕ್ಕೆ ವರದಿ ಕಳುಹಿಸಿಕೊಡಬೇಕು. ಭೇಟಿ ನೀಡಿ ಪರಿಶೀಲಿಸುವುದಕ್ಕೆ

ಕಡ್ಡಾಯ ಮಾಡುತ್ತಿದ್ದೇವೆ. ಅದೇ ರೀತಿ ಹೆಡ್ ಆಫ್ ದಿ ಡಿ ಪಾರ್ಟಮೆಂಟು ರವರಿಗೂ ಅವರು ಜವಾಬ್ದಾರಿಯನ್ನು ನಿಗದಿ ಮಾಡುತ್ತಿದ್ದೇವೆ. ಅವರು ಕೊಡುವ ಒಂದೇ ವರದಿಯ ಆಧಾರದ ಮೇಲೆ ನಾವು ತಾಳೆ ಹಾಕಿ ನಮ್ಮ ಪ್ರೋಗ್ರೆಸ್, ಫಿಸಿಕಲ್ ಫರ್ಫಾರ್ಮೆನ್ಸ್ ಇಷ್ಟಿದೆಯೆಂದು ಹೇಳಲು ಬಿಡುವುದಿಲ್ಲ. ನಾನು ಎಲ್ಲವನ್ನೂ ಹೇಳಲಿಲ್ಲ. ಈ ಎಲ್ಲಾ ಬದಲಾವಣೆ ತರುವುದಕ್ಕೆ ಸರ್ಕಾರ ಕೆಲವು ಕಟ್ಟುನಿಟ್ಟಿನ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ಮಾತನಾಡುವಾಗ ಈ ಕಡೆಯಿಂದ ಒಂದು ಪ್ರಮುಖವಾದಂತಹ ಮಾತನ್ನು ಹೇಳಿದೆ. ಈ ಸಾರಾಯಿ ಮಾರಾಟ ಜೂನ್ ಒಳಗೆ ನಿಲ್ಲಬೇಕು. ಏಕೆಂದರೆ ಇದು ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಇದೆ. ಇಲ್ಲಿರತಕ್ಕಂಥ ಬಿಜೆಪಿಯವರು ಕೂಡ ಅದನ್ನು ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ಈಗ ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು ನಾನು ಭಾಷಣ ಮಾಡುವಾಗ ಇದ್ದರು. ಅವರೂ ಕೂಡ ಅದನ್ನು ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ಈಗ ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು ನಾನು ಭಾಷಣ ಮಾಡುವಾಗ ಇದ್ದರು. ಅವರೂ ಕೂಡ ಅದನ್ನು ಬಹಿರಂಗವಾಗಿ ಒಪ್ಪಿದ್ದಾರೆ. ಅರಾಕ್ ಕೊಡುವುದು ವಿಷ ಕೊಟ್ಟಂತೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಒಂದು ನಿರ್ದಿಷ್ಟವಾದಂತಹ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳದೆ ಎಂದು ದಾಖಲೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಅದರ ಕಡೆ ಅಸ್ತೆ ವಹಿಸಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಅರಾಕ್ ಇರಬೇಕು ಸ್ವಾಮಿ, ಅದು ಇಲ್ಲದಿದ್ದರೆ ನಮ್ಮ ಸರ್ಕಾರವೇ ನಡೆಯುವುದಿಲ್ಲ. ಅದು ಅವರ ಪ್ರಣಾಳಿಕೆ. ಇದು ನಮ್ಮ ಪ್ರಣಾಳಿಕೆ.

ಶ್ರೀ ಎಂ.ವೈ. ಘೋರ್ಪಡೆ : ನಾನು ಹೇಳುವುದು ಇಷ್ಟೇ, ಇದನ್ನು ಜೂನ್ ತಿಂಗಳ ಒಳಗಾಗಿ ನಿಲ್ಲಿಸುವುದಕ್ಕೆ ಆಗುತ್ತದೆಯೇ ಇಲ್ಲವೋ ಎಂದು ಸ್ಪಷ್ಟವಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಆಗದೇ ಹೋದರೇ ನಮ್ಮ ಗ್ರಾಮಪಂಚಾಯಿತಿ, ಅಥವಾ ತಾಲ್ಲೂಕು ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಚುನಾಯಿತಾ ಪ್ರತಿನಿಧಿಗಳು ಈ ಅಭಿಪ್ರಾಯ ಪಡುತ್ತಾರೆ. ಅಂತಹ ಕಡೆಯಾದರೂ ಸಹ ನೀವು ಸಾರಾಯಿ ಅಂಗಡಿಯನ್ನು ತೆಗೆಯಬಾರದು. ಇಲ್ಲದೆ ಹೋದರೆ ನಾವು ಚಳುವಳಿ ಮಾಡಬೇಕಾಗುತ್ತದೆ. ನೀವು ಪೋಲೀಸ್ ಪ್ರೊಟೆಕ್ಷನ್ ಕೊಟ್ಟು ಅಂಗಡಿಗಳನ್ನು ತೆಗೆಯಬೇಕಾಗುತ್ತದೆ. ಏಕೆಂದರೆ ನನಗನ್ನಿಸುತ್ತದೆ, ನೀವೇನಾದರೂ ಕರ್ನಾಟಕದಲ್ಲಿ ಈ ವಿಷಯದಲ್ಲಿ ಒಂದು ರೆಫರೆಂಡಮ್ ಮಾಡುವುದಾದರೆ ಹೆಣ್ಣುಮಕ್ಕಳೆಲ್ಲರೂ ಸಹ ಇದರ ಪರವಾಗಿ ಅಭಿಪ್ರಾಯ ಎನ್ನುವುದರಲ್ಲಿ ಅನುಮಾನ ಇಲ್ಲ. ಅದಕ್ಕಾಗಿ ಇದನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳುವುದು ಬೇಡ. ಇದನ್ನು ನಾವು ಬಹಳ ಸೀರಿಯಸ್ಸಾಗಿ ಹೇಳಿದ್ದೇವೆ. ಅದಕ್ಕೆ ತಮ್ಮಿಂದ ನಮಗೆ ಉತ್ತರ ಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಹಿರಿಯ ಸದಸ್ಯರು ಕೊಡುತ್ತಿರುವ ಸಲಹೆ ಸೂಕ್ತವಾಗಿದೆ. ಆದರೆ ಕೇಂದ್ರ ಸರ್ಕಾರದವರು ಇದನ್ನು ದೇಶಾದ್ಯಂತ ತಪ್ಪಿಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ಇದನ್ನು ಪ್ರಣಾಳಿಕೆಯಲ್ಲಿ ಹಾಕಿದೆಯೋ, ಬಿಟ್ಟಿದೆಯೋ ಅದಕ್ಕಿಂತ ಹೆಚ್ಚಾಗಿ ಈ ವಿಷಯದ ಬಗ್ಗೆ ಸ್ವಲ್ಪಮಟ್ಟಿಗೆ ನಾವು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಕಾರಣವಿಷ್ಟೇ ಹಿಂದೆ ಇದೇ ರಾಜ್ಯದಲ್ಲಿ ಏನು ಪಾನನಿರೋಧ ಜಾರಿಗೆ ಬಂತು. ಅದನ್ನು ತೆಗೆಯಲಿಕ್ಕೆ ಈ ಸದನದಲ್ಲಿ ನಾವು ಆ ಕಡೆಯಿಂದ ಕುಳಿತು ವಾದ ಮಾಡಿದ್ದೆವು. ಕಾರಣ ಹಳ್ಳಿಯಲ್ಲಿ

ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಅರಣ್ಯ ಪ್ರದೇಶಗಳಲ್ಲಿ ಅದರಲ್ಲೂ ಹೆಚ್ಚು ಕಳ್ಳಬಟ್ಟಿ ಆಗತಕ್ಕಂಥಾದ್ದು ಮತ್ತು ಅದು ಅತೀ ಹೆಚ್ಚಾಗಿ ಅಲ್ಲಿನ ಜನಗಳ ಆರೋಗ್ಯ ಸಂಪೂರ್ಣವಾಗಿ ನಾಶವಾಗುತ್ತಿದೆನ್ನುವ ವಾದವನ್ನು ಈ ಸದನದಲ್ಲಿ ಮಂಡನೆ ಮಾಡಿದ್ದೇವೆ. ಆದುದರಿಂದ ನಮ್ಮ ಆಡಳಿತ ಯಂತ್ರಕ್ಕೆ ಇದನ್ನೆಲ್ಲಾ ತಲೆಹಿಡಿದು ನಿಲ್ಲಿಸತಕ್ಕಂಥ ಶಕ್ತಿಯನ್ನು ಕೊಡಬೇಕಾಗಿದೆ. ಆ ಒಂದು ಸನ್ನಿವೇಶವನ್ನು ಉಂಟು ಮಾಡಿ ಕೊಳ್ಳಬೇಕಾಗಿದೆ. ಏಕೆಂದರೆ ಇವತ್ತು ಇಲ್ಲಿ ಹಾಲಿ ಅರಾಕ್ ಮಾರಾಟ ಮಾಡತಕ್ಕಂಥ ಕಂಟ್ರಾಕ್ಟರುಗಳು, ಬಂದು ದೂರು ಕೊಡುತ್ತಿದ್ದಾರೆ. ಬೆಂಗಳೂರಿನಲ್ಲೇ ಅಡಲ್ಟ್ರೇಷನ್ ಆಗುತ್ತಿದೆ, ಭಟ್ಟಿ ಸಾರಾಯಿಯಾಗುತ್ತದೆ, ಇದನ್ನು ತಡೆಗಟ್ಟಬೇಕು ಎಂದು ಹೇಳಿ ನಮ್ಮ ಹತ್ತಿರ ಬಂದಾಗ ಅವರು ಮನವಿ ಪತ್ರ ಸಲ್ಲಿಸಿದ್ದಾರೆ. ಒಂದು ಕಡೆ ಈಗ ಕೊಡತಕ್ಕಂಥ ಸಾರಾಯಿ ವಿಷ ಎಂದು ವಾದ ಮಾಡಿದರೂ ಕೂಡ ಇದಕ್ಕಿಂತಲೂ ಇನ್ನೂ ಕೆಟ್ಟ ಪರಿಣಾಮ ಆಗುವ ರೀತಿಯಲ್ಲಿ ಇವತ್ತು ಭಟ್ಟಿ ಸಾರಾಯಿ ಮಾಡಿಕೊಂಡು ಕುಡಿಯತಕ್ಕಂಥ ಸನ್ನಿವೇಶ ಬಂದರೆ ಅದನ್ನೂ ಕೂಡಾ ಸಂಪೂರ್ಣವಾಗಿ ತೆಗೆಯುವ ಬಗ್ಗೆ ಈಗಿನ ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ. ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ಇಂತಹ ದಿನವೇ ನಿರ್ಣಯ ಮಾಡುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ, ಇದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ಇದನ್ನು ಅಭಾವ ವೈರಾಗ್ಯ, ಭಾವ ವೈರಾಗ್ಯ ಎಂದು ಹೇಳುತ್ತೇವೆ. ಈಗ ನೂರು ಜನ ಕುಡಿಯುತ್ತಾರೆ, ಎಂದು ಹೇಳುತ್ತೀರಿ. ಕಳ್ಳಬಟ್ಟಿ ಕುಡಿಯುವವರು ಒಬ್ಬರೂ ಸಿಗುವುದಿಲ್ಲ, ಐದು ಪರ್ಸೆಂಟ್ ಸಿಗುವುದಿಲ್ಲ ಕುಡಿಯುವವರು. ಅಭಾವ ಇದ್ದಾಗ ಯಾರೂ ಹುಡುಕಿಕೊಂಡು ಬರುವುದಿಲ್ಲ ಕುಡಿಯುವುದಕ್ಕೆ. ಎಲ್ಲೋ ಕೆಲವರು ಮಾತ್ರ. ಆದುದರಿಂದ ಇದು ನೆಪ ಆಗುವುದಿಲ್ಲ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ : ಇಲ್ಲಿ ಇರತಕ್ಕಂಥ ಶಾಸಕರು ಕುಡಿಯುವುದಿಲ್ಲ, ಅಥವಾ ಕುಡಿಯಬಾರದು ಎನ್ನುವಂತಹ ಆದೇಶವನ್ನು ದಯವಿಟ್ಟು ಕೊಡಬೇಕು. ತಾವು ಅದನ್ನಾದರೂ ಮಾಡಬೇಕು. ಮೊದಲು ಅದು ಆಯಿತು ಎಂದರೆ ಎಲ್ಲಾ ಕಡೆ ಸರಿ ಹೋಗುತ್ತದೆ. ಮಾನ್ಯ ಅಧ್ಯಕ್ಷರೇ ಒಂದು ಕ್ಲಾರಿಫಿಕೇಷನ್ ಇದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿದ್ದೇನೆ. ಇನ್ನು ಮುಂದೆ 70 ಜನ ಮಹಿಳೆಯರು ಬರುವ ಸೂಚನೆಗಳು ಇವೆ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಇವತ್ತು ಬೆಳಿಗ್ಗೆ ಟ್ರೈನ್ ಅಪಘಾತ ಆಗಿರುವುದನ್ನು ತಾವು ಹೇಳಿದ್ದೀರಿ. ಅದರಲ್ಲಿ ಬಹಳಷ್ಟು ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬಂದಿದ್ದಾರೆ. ಅವರಿಗೆ ನಾಳೆ ಪರೀಕ್ಷೆ ಇದೆ ಎಂದು ನನಗೆ ಗೊತ್ತಾಗಿದೆ. ಅವರಿಗೆ ಮೆಂಟಲ್ ಶಾಕ್ ಆಗಿದೆ. ಅವರು ಎಂಟ್ರೆನ್ಸ್ ಎಕ್ಸಾಮು ನಾಳೆ ಇದೆ ಎಂದು ಬಂದಿದ್ದಾರೆ. ಅದಕ್ಕೋಸ್ಕರ ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಹೇಳಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ತಕ್ಷಣ ಏನಾದರೂ ತೀರ್ಮಾನ ತೆಗೆದುಕೊಂಡು ಅವರಿಗೆ ಪರೀಕ್ಷೆಯನ್ನು ಮುಂದೂಡತಕ್ಕಂಥ ಕ್ರಮವನ್ನು ತೆಗೆದುಕೊಳ್ಳುತ್ತಾರಾ?

ಅಧ್ಯಕ್ಷರು : ಯಾವ ಎಂಟ್ರೆನ್ಸ್ ಎಕ್ಸಾಮು ಇದೆ ಅವರಿಗೆ?

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ : ಮೆಡಿಕಲ್ ಎಂಟ್ರೆನ್ಸ್ ಎಕ್ಸಾಮು ಇದೆ ನಾಳೆ ಎಂದು ವಿದ್ಯಾರ್ಥಿಗಳು ನಾನು ಹೋದತಕ್ಷಣ ಅಲ್ಲಿ ಹೇಳಿದ್ದಾರೆ.

ಅಲ್ಲ ಮಲಗಿದ್ದಂತಹ ಪೇಷೆಂಟ್ ಹೇಳಿದ್ದುದ್ದು ಅವರು ಹೇಳಿದ್ದನ್ನು ನಾನು ಹೇಳುತ್ತಿದ್ದೇನೆ. ತಾವು ಸರ್ಕಾರದಲ್ಲಿರುಷವರು ಹೇಳಬೇಕು.

ಅಧ್ಯಕ್ಷರು : ನಾಳೆಯಾವ ಎಕ್ಸಾಮ್ ಇಲ್ಲ, ಅವರು ಶಾಕ್‌ನಲ್ಲಿ ಹೇಳಿರಬೇಕು.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಇನ್ನು ನಾಲ್ಕು ಗಂಟೆಗಳನ್ನು ಕಳೆದರೆ ಹೊಸ ವರ್ಷಪ್ರಾರಂಭವಾಗುತ್ತದೆ. ನಿಮಗೂ, ಮಾನ್ಯ ಮುಖ್ಯಮಂತ್ರಿಯವರಿಗೂ, ಎಲ್ಲಾ ಸದಸ್ಯರಿಗೂ ಮಂತ್ರಿಮಡಲಕ್ಕೂ ಶುಭವಾಗಲಿ ಎಂದು ಹಾರೈಸುತ್ತೇನೆ. ಇಲ್ಲಿ ಇಂಗ್ಲೀಷ್ ಮಾತನಾಡುವ ಜನರು ಇರುವುದರಿಂದ ನಾನು ಹೇಳಲೇ ಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಒಂದು ವ್ಯಾಖ್ಯಾನ ಮಾಡಿದರು. ಸಾರಾಯಿ ನಿಲ್ಲಿಸಿ ಬಿಟ್ಟರೆ ಕಳ್ಳಬಟ್ಟಿಯನ್ನು ಕುಡಿದುಬಿಡುತ್ತಾರೆ ಎಂದು ಹೇಳಿದರು ಕಳ್ಳಬಟ್ಟಿಗಿಂತ ಸಾರಾಯಿ ಹೊಲಸಾಗಿದೆ. ಸಾರಾಯಿಯಾದರೂ ಹೆಚ್ಚು ಕಡಿಮೆ ರುಚಿಯಾಗಿರುತ್ತದೆ.

ಒಬ್ಬ ಮಾನ್ಯ ಸದಸ್ಯರು : ನೀವು ಕುಡಿದಿರಬೇಕು.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಮಾತನಾಡಿ ಮೆಲ್ಮನೆಗೆ ಹೋಗಬೇಕಾಗಿದೆ. ಪ್ರಸ್ತಾವನೆಯನ್ನು ಓಟಿಗೆ ಹಾಕಬೇಕು. ಮತ್ತೆ ನಿಯಮ 69ರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಕಳ್ಳಬಟ್ಟಿಯ ಬಗ್ಗೆ ನನಗೆ ಹೇಗೆ ಗೊತ್ತು ಎಂದರೆ, ನನ್ನ ಪಕ್ಕದಲ್ಲಿ ಮಾನ್ಯ ಬೈರೇಗೌಡರು ಕುಳಿತುಕೊಳ್ಳುತ್ತಿದ್ದರು. ಅವರಿಗೆ ಈ ಅಬಕಾರಿಯ ಬಗ್ಗೆ ಅಪಾರವಾದಂತಹ ಅನುಭವ ಅವರು ನನಗೆ ಈ ವಿಚಾರಗಳನ್ನು ಹೇಳಿದ್ದರು. ಈ ಸಾರಾಯಿ ವ್ಯವಸ್ಥೆಯನ್ನು ಕಣ್ಣಮುಂದೆ ನೋಡಿದರೆ ಈ ಕಳ್ಳಬಟ್ಟಿ ಸರಿಯೆನೋ ಈ ಸಾರಾಯಿ ಸರಿಯಿಲ್ಲ ಎನ್ನತಕ್ಕ ಅಭಿಪ್ರಾಯ ಬರುತ್ತದೆ.

ಈ ಸಾರಾಯಿ ಕಳ್ಳಬಟ್ಟಿಗಿಂತ ಮಾನ್ಯ ಘೋರ್ಪಡೆಯವರು ಹೇಳಿದ್ದುದು ಸರಿ. ಆದರೆ ಸಾರಾಯಿ ಒಂದೇ ತೆಗೆಯಿರಿ ಎಂದಲ್ಲ, ಆಂಧ್ರದಲ್ಲಿ ಪಾನ ನಿರೋಧ ಜಾರಿ ಮಾಡಿದ್ದೇವೆಂದು ಧೈರ್ಯವಾಗಿ ಪ್ರಮಾಣವಚನ ಮಾಡುವಾಗ ಒಂದು ತೀರ್ಮಾನಕ್ಕೆ ಬಂದರು. ಮಾನ್ಯ ಮುಖ್ಯಮಂತ್ರಿಯವರ ಬಗ್ಗೆ ಅಪಾರವಾದ ಗೌರವವಿದೆ. ಈ ನಾಡಿನ ಒಬ್ಬ ರೈತರ ಮುಖಂಡರಾಗಿ, ನಾಯಕರಾಗಿ ಈ ಮಾತನ್ನು ಧೈರ್ಯವಾಗಿ ಹೇಳಲಿ, ಪಾನ ನಿರೋಧವನ್ನು ನಾವು ನಾಳೆಯಿಂದ ಜಾರಿ ಮಾಡುತ್ತೇವೆ ಹೇಳಲಿ ಅವರು ಹೇಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಎರಡನೆಯದಾಗಿ, ನಾನು ಬೆಳಿಗ್ಗೆ ಆಂಧ್ರದಲ್ಲಿ ಇಂದಿರಾ ಪ್ರಿಯದರ್ಶಿನಿ ಅಣೆಕಟ್ಟು ಕಟ್ಟುವ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಇದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಯವರು ಒಂದು ವರದಿಯನ್ನು ಕೊಡುತ್ತೇವೆಂದು ಹೇಳಿದ್ದರು. ಮೂರನೆಯದಾಗಿ, ಮೈಸೂರಿನಲ್ಲಿ ತಾವು ಹೆಲ್ಮೆಟ್ ಅನ್ನು ತೆಗೆದುಹಾಕುವಂತಹ ಯೋಚನೆಯನ್ನು ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ. ಪರಿಶೀಲನೆ ಎಂದರೆ ಏನರ್ಥ?

ಶ್ರೀ ಸಿದ್ಧರಾಮಯ್ಯ : ಪರಿಶೀಲನೆ ಎಂದರೆ ಸಾಧಕ. ಬಾಧಕಗಳನ್ನು ನೋಡುತ್ತೇವೆ ಎಂದರ್ಥ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಯಾವಾಗ ನೋಡುವುದು? ಅದನ್ನೇ ಮಾನ್ಯ ಮುಖ್ಯಮಂತ್ರಿಯವರು ಹೇಳಲಿ. ಅವರು ತೆಗೆಯುತ್ತೇವೆಂದು ಅಥವಾ ಇಲ್ಲವೆಂದು ಯಾವುದಾದರೂ ನಿರ್ದಿಷ್ಟವಾಗಿ ಹೇಳಲಿ.

ಅಧ್ಯಕ್ಷರು : ಹೆಲ್ಮೆಟ್ ವಿಚಾರಕ್ಕೆ ತಲೆ ನೆಟ್ಟಗಿದ್ದವರು ಹಾಕಿಕೊಳ್ಳುವುದು ಬೇಡ ತಲೆ ಇಲ್ಲದಿದ್ದವರು. ಹಾಕಿಕೊಳ್ಳಲಿ.

ಶ್ರೀ ವಾಟಾಳ್ ನಾಗರಾಜ್ : ತಲೆ ಇಲ್ಲದವರು ಹಾಕಿಕೊಳ್ಳುವುದೇ? ಅದು ಎಲ್ಲಾದರೂ ಉಂಟಾ? ಈಗ ಈ ರಾಜ್ಯದಲ್ಲಿ ನೂರಕ್ಕೆ ತೊಂಭತ್ತು ಭಾಗ ಹೆಲ್ಮೆಟ್ ಹಾಕಿಕೊಳ್ಳುತ್ತಾರೆ, ಅವರಿಗೆ ತಲೆ ಇಲ್ಲವೆಂದು ಹೇಳುವುದಕ್ಕೆ ಆಗುತ್ತದೆಯೇ? ಅದು ಸಾಧ್ಯವಿಲ್ಲ.

ಅಧ್ಯಕ್ಷರು : ಅಲ್ಲ, ಹಾಗೆ ಮಾಡಿಸೋಣ ಅಂತ.

ಶ್ರೀ ವಾಟಾಳ್ ನಾಗರಾಜ್ : ಆದುದರಿಂದ ಈ ಬಗ್ಗೆ ಸರ್ಕಾರ ಏನು ಹೇಳಿಕೆ ಕೊಡುತ್ತದೆಯೋ ಕೊಡಲಿ, ಮಾನ್ಯ ನಂಜೇಗೌಡರು ಕೃಷ್ಣ, ಕಾವೇರಿ ಬಗ್ಗೆ ಇಷ್ಟು ಸಣ್ಣದಾದ ಚರ್ಚೆ ಮಾಡುವುದು ಬೇಡ, ಬಾರಿ ಜೋರಾಗಿ ಮಾಡಬೇಕೆಂದು ಹೇಳಿದ್ದಾರೆ. ಇನ್ನು ನಾವು ಈ ಸದನ ಸೇರಬೇಕಾದರೆ ಮುಂದಿನ ತಿಂಗಳು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು. ಸವಿಸ್ತಾರವಾಗಿ ಕಾವೇರಿ ಬಗ್ಗೆ ಏನೇನು ಮಾಡುತ್ತೇವೆಂದು ತಾವು ಹೇಳಿದ್ದೀರಿ. ನಾವು ಮತ್ತು ಮಾನ್ಯ ನಂಜೇಗೌಡರು ಬೆಳಿಗ್ಗೆ ಅಧಿಕಾರಿಗಳ ಬಗ್ಗೆ ಅನೇಕ ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಅದರ ಬಗ್ಗೆ ತಾವು ಹೇಳಿದ್ದರೆ ನನ್ನದೇನೂ ತಕರಾರು ಇಲ್ಲ, ಆದುದರಿಂದ ಈ ಮೂರರ ಬಗ್ಗೆ ತಾವು ದಯಮಾಡಿ ತಿಳಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಗೋದಾವರಿ ನ್ಯಾಯಾಧೀಕರಣದ ಮುಂದೆ ಜುರಾಲಾ ಯೋಜನೆಗೆ ಸಂಬಂಧಿಸಿದಂತೆ ದಿನಾಂಕ 4.8.1978 ರಂದು ಕರ್ನಾಟಕ ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಮಾಡಿಕೊಂಡ ಒಪ್ಪಂದದ ಅನುಸಾರ ಸದರಿಜಲಾಶಯದ ನಿರ್ಮಾಣದಿಂದ ಮುಳಗಡೆಯಾಗುವ ಕರ್ನಾಟಕ ಭೂಮಿ ಪ್ರದೇಶದ ಭೂ ಸ್ವಾಧೀನ ಮತ್ತು ರಸ್ತೆಗಳ ಮತ್ತು ಸೇತುವೆಗಳ ಪುನರ್ ನಿರ್ಮಾಣಕ್ಕಾಗಿ ತಗಲುವ ವೆಚ್ಚವನ್ನು ಆಂಧ್ರಪ್ರದೇಶವು ಸಂಪೂರ್ಣವಾಗಿ ಭರಿಸಬೇಕಾಗಿದೆ. 1978ರಲ್ಲಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ನಡುವೆ ಒಂದು ಒಪ್ಪಂದವಾಗಿದ್ದು ಅದರ ಹಿನ್ನೆಲೆಯಲ್ಲಿ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಮುಳುಗಡೆ ಆಗತಕ್ಕಂತಹ ವಿಸ್ತೀರ್ಣ 559 ಎಕರೆ. ಅಗ್ರಹಾರ ಎಂಬ ಗ್ರಾಮದಲ್ಲಿ 98 ಎಕರೆ 37 ಗುಂಟೆ, ಕೂರ್ವಕೂಲ 299 ಎಕರೆ 30 ಗುಂಟೆ, ಕೂರ್ವಕುಲ 94 ಎಕರೆ 34 ಗುಂಟೆ, ಬುರುಗಿಪಾಡು 68 ಎಕರೆ 34 ಗುಂಟೆ, ಕುರ್ತಿಪ್ಲಿ 4 ಎಕರೆ 35 ಗುಂಟೆ ಹೀಗೆ ಒಟ್ಟು 559 ಎಕರೆ ಮುಳುಗಡೆಯಾಗುತ್ತದೆ. ಇದಕ್ಕೆ ಪೂರ್ತಾ ಪರಿಹಾರದ ಹಣ ಕೊಡುವುದು, ರಸ್ತೆಗೆ ಪರಿಹಾರದ ಹಣಕೊಡುವುದು, ಸೇತುವೆಗೆ ಸರಿಯಾದ ಹಣವನ್ನು ಕೊಡುವುದು ಇದಿಷ್ಟನ್ನು ಆ ಅಗ್ರಿಮೆಂಟ್‌ನಲ್ಲಿ ಅಳವಡಿಸಿದ್ದಾರೆ. ನಾನು ಮೊನ್ನೆ ಪತ್ರಿಕೆಗಳಲ್ಲಿ ಈ ವಿಚಾರ ಬಂದ ಮೇಲೆ ನೀರಾವರಿ ಮಂತ್ರಿಯಾಗಿ ಕೆಲಸ ಮಾಡಿದಾಗ ಈ ವಿಷಯ ನನ್ನ ಗಮನಕ್ಕೆ ಬಂದಿತ್ತು ಎಂದು ಈ ಸದನದಲ್ಲಿ ತಿಳಿಸಲಿಕ್ಕೆ ನಾನು ತಯಾರಾಗಿದ್ದೇನೆ. ಮೊನ್ನೆ ಪತ್ರಿಕೆಯಲ್ಲಿ ಸುದ್ದಿ ಬಂದ ಮೇಲೆ ನಮ್ಮ ಅಧಿಕಾರಿಗಳೊಡನೆ ಸಮಾಲೋಚನೆ ಮಾಡಿ ಈ ವಿಷಯ ತಿಳಿದ ತಕ್ಷಣ ಅಲ್ಲಿಗೆ ನಾವು ಪತ್ರ ಬರೆದಿದ್ದೇವೆ. ಈ ಎಲ್ಲಾ ಷರತ್ತಿನ ಪ್ರಕಾರ 1978ನೇ ಇಸವಿಯ ಪ್ರಕಾರ ಯಾವ ರೀತಿ ಅಗ್ರಿಮೆಂಟ್ ಆಗಿದೆಯೋ ಅದರ ಪ್ರಕಾರ ಇವತ್ತು ಅವರಿಗೆ ಪರಿಹಾರದ ಹಣವನ್ನು ನಾವು ಕೊಡಲೇಬೇಕು. ಜೊತೆಗೆ ಸೇತುವೆ ರಸ್ತೆಗಳಿಗೆ ಮತ್ತು ಅದನ್ನು ಡೈವರ್ಟ್ ಮಾಡಲಿಕ್ಕೆ ಏನು ಹಣ ಬೇಕಾಗುತ್ತದೆ ಅದನ್ನು ಕೊಡಬೇಕೆಂದು ಹೇಳಿದ್ದೇವೆ, ನಮ್ಮ ಅಧಿಕಾರಿಗಳಿಗೂ ಸೂಚನೆ ಕೊಟ್ಟಿದ್ದೇವೆ. ಈಗ ಸೇತುವೆ ಮತ್ತು ರಸ್ತೆಗಳಿಗೆ ಆಗುವ ಹಣ ಎಷ್ಟು ಮತ್ತು ಭೂಮಿಗೆ ಆಗುವ ಹಣ ಎಷ್ಟು ಅದನ್ನು ಈವತ್ತಿನ ರೀತಿಯಲ್ಲಿ ಲೆಕ್ಕಾಚಾರ ಮಾಡಿ ಅವರಿಗೆ ನಾವು ಹಣದ ಒಟ್ಟು ಮೊಬಲಗು ಎಷ್ಟು ಎಂಬುದನ್ನು ತಿಳಿಸಬೇಕಾಗಿದೆ ಎಂಬುದನ್ನು ಕೂಡ ಹೇಳಿದ್ದೇವೆ. ಇದರ ಮೇಲೆ ನಾವು ಕ್ರಮ

ತೆಗೆದುಕೊಳ್ಳುತ್ತೇವೆ. ಯಾರಿಗೆ ತಲೆ ಇರಬೇಕೋ ಅಥವಾ ಉಳಿಸಿಕೊಳ್ಳಬೇಕೋ ಅವರು ಹೆಲ್ಮೆಟ್ ಹಾಕಿಕೊಳ್ಳಲಿ.

ಶ್ರೀ ವಾಟಾಳ್ ನಾಗರಾಜ್ : ಯಾರಿಗೆ ತಲೆ ಇದೆಯೋ, ಇಲ್ಲವೋ ಎಂಬುದನ್ನು ಆಮೇಲೆ ನೋಡೋಣ. ಅದರ ಬಗ್ಗೆ ಸರ್ಕಾರದ ನಿಲುವು ಏನು?

ಶ್ರೀ ಹೆಚ್.ಡಿ. ದೇವೇಗೌಡ : ನಾವು ಅದನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ.

SRI QUMARUL ISLAM : Mr.Speaker Sir, I wand a clarification from the hon'ble chief Minister.

(INTERRUPTIONS)

SRI QUMARUL ISLAM : During the year 1986, the Gulbarga Bheema Scheme was sanctioned by the Janatha Dal Government. The previous Government has completed the First phase by spending more than Rs. 19.5 Crores But, still the problem is very acute in the Gulbarga City. Even water was transported last year from Krishna river from Raichur by train. From next months onwards, again there will be a scarcity of water. The K.U.W Board has already approved the Second phase of the Bheema Scheme and the Cabinet has also approved it. I want to know from you Sir, Whether the Government is going to take up and complete the Second phase of the Bheema Scheme to take up and complete the Second Phase of the Bheema Scheme during the year 1995 which is a very very primary issue as far as Gulbarga City is concerned.

Secondly, I want to know whether the Government is going to take up the recruitment as well as the Entrance Test on Divisional basis from next year onwards. These are the 2Ë3 clarifications which I would like to seek from the Hon'ble chief Minister. Entrance Test is a common Entrance Test. There is a long pending demand from the people of the Hyderabad-Karnataka area that the recruitment as well entrance test should be done Divisional - wise for Class II, Class III and Class IV categories, Our boys cannot compete with the students of other Universities because their standard is very hig. So, there is a demand that the Entrance Test should be conducted University-wise or Divisional wise. This type of system is already existing in the neighbouring State of Maharashtra. I wanted to know whether the Government is going to fulfil this demand of the Hyderabad-Karnataka. These are the two or three issues. And one more thing. Last time, when I was speaking, there was a mention that there will be a thirty percent reservation as far as women is concerned in Council and Assemly Membership and that the Government is going to pass a resoulution in this regard in both the House. The ball is in your Court. The Cabinet has given you full authority to nomiate. Now, there

are five seats which are vacant in the legislative council. I suggest that all the seats may be given to the ladies from different regions. I would like to know whether the Hon'ble Chief Minister has given thought over this. Thank you.

ಶ್ರೀ ಹೆಚ್.ಡಿ. ದೇವೇಗೌಡ : ಭೀಮಾ 2ನೇ ಹಂತದ ಯೋಜನೆಗೆ ಸಾಕಷ್ಟು ಹಣವನ್ನು ಕೊಟ್ಟು ಈ ವರ್ಷವೇ ಮುಗಿಸಬೇಕೆಂದು ಹೇಳಿದ್ದಾರೆ. ಇದಕ್ಕೆ ಒಂದು ಡೆಡ್ ಲೈನ್ ಹಾಕಿದ್ದಾರೆ. ಈ 2ನೇ ಯೋಜನೆಗೆ ಎಷ್ಟು ಹಣವಾಗುತ್ತದೆಂಬ ಬಗ್ಗೆ ನನ್ನ ಎದುರಿನಲ್ಲಿ ಅಂದಾಜಿನಲ್ಲ, ಆದರೆ ಕುಡಿಯುವ ನೀರಿನ ಯೋಜನೆ ಇರುವುದರಿಂದ ಅದಕ್ಕೆ ಸಾಕಷ್ಟು.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಅವರೇ ಇದ್ದರು. 1995ನೇ ಮಾರ್ಚ್ ತಿಂಗಳೊಳಗಾಗಿ ನಾವು ಕುಡಿಯುವ ನೀರಿನ ವ್ಯವಸ್ಥೆಯನ್ನು ಬಿಜಾಪುರಕ್ಕೆ ಸಂಬಂಧಪಟ್ಟಂತೆ ಪೂರ್ಣಮಾಡಿಕೊಡುತ್ತೇನೆಂದು ಮಾನ್ಯ ಮೊಯಿಲ್ಲಿಯವರು ಹಾಗೂ ಅವರೂ ಕೂಡಿ ವಾಗ್ದಾನ ಮಾಡಿದ್ದಾರೆ. ವಾಗ್ದಾದ ಮಾಡಿ ಹೋಗಿ ಇಲ್ಲಿಯವರೆಗೆ ಅದನ್ನು ಪೂರ್ಣಮಾಡಿಲ್ಲ, ಇನ್ನೂ 14 ಕೋಟಿ ರೂ.ಗಳನ್ನು ಕೊಡುತ್ತೇವೆಂದು ವಾಗ್ದಾನ ಮಾಡಿದ್ದರೆ.

ಅಧ್ಯಕ್ಷರು : ಆಯಿತು. ಮಾಡಲಿಲ್ಲವಲ್ಲಾ ಅವರು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ರೀತಿ ಹೇಳಬಾರದು. ನೀವು ಕೃತಜ್ಞರಾಗಿರಬೇಕು.

ಮಾನ್ಯ ಅಧ್ಯಕ್ಷರೆ, ಇವರು ಮಾಡಿ ಕಳುಹಿಸಿದ್ದ ರೆಸಲ್ಯೂಷನ್ ಕೊಳೆತು ಬಿದ್ದಿತ್ತು. ಅದನ್ನು ನೋಡುವವರೇ ಇರಲಿಲ್ಲ, ನಾನು ಅದನ್ನು ಕ್ಯಾಬಿನೆಟ್‌ಗೆ ತರಿಸಿಕೊಂಡು 5 ಕೋಟಿ ರೂಪಾಯಿಗಳ ಒಂದು ಪ್ರೊವಿಶನ್‌ನ್ನು ಅಕ್ಸೆಪ್ಟ್ ಮಾಡಿಸಿದ್ದೇವೆ. ಆಗ ಇವರೇ ಅಲ್ಲಿ ಅಧ್ಯಕ್ಷರಾಗಿದ್ದರು. ಇಷ್ಟು ಮಾಡಿದರೂ ಇವರಲ್ಲಿ ಸೌಜನ್ಯತೆ ಇಲ್ಲವೆಂದರೆ ನಾವು ಏನು ಮಾಡಬೇಕು?

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇವರು ನಮ್ಮ ವಾಟರ್ ಸಪ್ಲೈ ಸ್ಕೀಂನ್ನು ತೆಗೆದುಕೊಂಡಿದ್ದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಅವರು ಏನು 1995ನೇ ಇಸವಿ ಮಾರ್ಚಿಯೊಳಗೆ ಈ ಸ್ಕೀಂನ್ನು ಪೂರ್ಣಮಾಡುತ್ತೇವೆಂದು ಏನು ವಾಗ್ದಾನ ಮಾಡಿದ್ದರು ಅದು ಆಗಲಿಲ್ಲ,

ಅಧ್ಯಕ್ಷರು : ಹೊಸ ಸದಸ್ಯರಿಗೆ ಅವಕಾಶ ಮಾಡಿಕೊಡೋಣ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅವರು ಮಾಡಲಿಲ್ಲ, ಇನ್ನೂ 14 ಕೋಟಿ ರೂ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಅಷ್ಟು ಉಪಕಾರ ಮಾಡಿದರೂ ಅದರ ಬಗ್ಗೆ ಕೃತಜ್ಞತೆ ಇವರಿಗೆಲ್ಲ ಎಂದರೆ ಹೇಗೆ?

ಅಧ್ಯಕ್ಷರು : ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಬೇಕಾಗಿಲ್ಲ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಸ್ಕೀಂ 1 ವರ್ಷದ್ದು. ಆದರೆ ಅಷ್ಟುಹೊತ್ತಿಗೆ ನನ್ನನ್ನು ತೆಗೆದುಹಾಕಿದರು.

(ಗೊಂದಲ)

ಅಧ್ಯಕ್ಷರು : ಶಿವಾನಂದ ಪಾಟೀಲರೇ,ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯಿಲಿ :ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಹೆಸರನ್ನು ಇಲ್ಲಿ ಹೇಳಿದ್ದರಿಂದ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಅಲ್ಲಿ ಎಷ್ಟು ಕೆಲಸವಾಗಿದೆ ಎಂಬುದನ್ನು ಅಲ್ಲಿಗೆ ಯಾರಾದರೂ ಹೋಗಿ ನೋಡಿಕೊಂಡು ಬಂದರೆ ಒಳ್ಳೆಯದು. ನಾವು ಆ ಯೋಜನೆಗೆ ಸಾಕಷ್ಟು ಹಣವನ್ನು ಖರ್ಚುಮಾಡಿದ್ದೇವೆ. 5 ವರ್ಷದಲ್ಲಿ ಆಗಬೇಕಾದು ಕೆಲಸವನ್ನು ಕೇವಲ 2 ವರ್ಷಗಳಲ್ಲಿ ಮಾಡಿದ್ದೇವೆ. ನಾವು ಬಹಳಷ್ಟು ಹಣವನ್ನು ಖರ್ಚುಮಾಡಿದ್ದೇವೆ. ಪೈಪ್‌ಲೈನ್ ಎಲ್ಲಾ ಅಲ್ಲಿ ಬಿದ್ದಿದೆ. ಅವುಗಳನ್ನು ಜೋಡಿಸುವ ಕೆಲಸ ಮಾತ್ರ ಉಳಿದಿದೆ. ಇದು ಅವರಿಗೂ ಗೊತ್ತಿದೆ. ಆದರೂ ಅವರು ಕೇವಲ ರಾಜಕೀಯ ಪ್ರಚಾರಕ್ಕಾಗಿ ಇಂಥಹ ಮಾತುಗಳನ್ನಾಡುವುದು ಅವರಿಗೆ ಸರಿಯಲ್ಲ.

ಅಧ್ಯಕ್ಷರು : ಮಾನ್ಯ ಶಿವಾನಂದ ಪಾಟೀಲರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿ ಎಲ್ಲೇ ಆಗಲಿ ಕುಡಿಯುವ ನೀರಿನ ಅನುಕೂಲವನ್ನು ಒದಗಿಸಿಕೊಡಬೇಕಾದುದು ಸರ್ಕಾರದ ಜವಾಬ್ದಾರಿ.ಯಾವುದೇ ನಗರ ಇರಲಿ, ಹಳ್ಳಿ ಇರಲಿ, ಮೊದಲ ಆದ್ಯತೆ ಕೊಡುತ್ತೇವೆ. ಬೆಂಗಳೂರಿನಲ್ಲಿ ಕೂಡ ಇಂಥ ಸಮಸ್ಯೆ ಬಗ್ಗೆ ತೀವ್ರವಾಗಿದ್ದರೂ ವಿಶೇಷವಾಗಿ ಚರ್ಚೆ ಮಾಡುವುದಕ್ಕಾಗಲಿಲ್ಲ, ಆದ್ದರಿಂದ ತಾತ್ಕಾಲಿಕವಾದ ಕೆಲವು ಪರಿಹಾರ ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಎಲ್ಲಿ ಖಾಯಂ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅಲ್ಲಿ ಸ್ವಲ್ಪ ತಡವಾಗಿದೆ. ಬೋರ್‌ವೆಲ್‌ಗಳ ಶಾರ್ಟೇಜ್ ಬರುವುದು, ಅಥವಾ ಇರತಕ್ಕ ಬೋರ್ ವೆಲ್‌ಗಳ ರಿಪೇರಿ ಆಗಬೇಕಾದುದು ಇನ್ನೂ ಮುಂತಾದ ವಿಚಾರಗಳನ್ನು ನಾವು ಚರ್ಚೆಮಾಡಿದ್ದೇವೆ. ಈ ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ನಿರ್ಣಯಗಳನ್ನು ಇನ್ನು ಒಂದೆರಡು ದಿನಗಳಲ್ಲಿ ಮಾಡುತ್ತೇವೆ. ಇದನ್ನು ಮಾಡುವಾಗ ಸಂಬಂಧಪಟ್ಟ ಶಾಸಕರನ್ನು ಕರೆಯಿಸಿಕೊಂಡು ಚರ್ಚೆ ಮಾಡಿ ನಂತರ ನಿರ್ಣಯ ಮಾಡುತ್ತೇವೆ.

ಇನ್ನು ಗುಲ್ಬರ್ಗಾಕ್ಕೆ ಸಂಬಂಧಪಟ್ಟಂತೆ ಒಂದು ದೊಡ್ಡ ರಾಜಕೀಯವೇ ಹಿಂದೆ ನಾವು ಇದ್ದಾಗ ಎಲ್ಲೋ ಒಂದು ಕಡೆಯಿಂದ ನೀರನ್ನು ತರಬೇಕೆಂದರು, ಅನಂತರ ಬೋರ್‌ವೆಲ್ ತೆಗೆಸುವುದನ್ನು ಸ್ಪೀಡ್ ಅಪ್ ಮಾಡಬೇಕೆಂದರು. ಆದರೆ ಈಗ ಅದನ್ನೆಲ್ಲಾ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ.

ಈಗ ಅವರಿಗೆ 24 ಕೋಟಿ ರೂ. ಹಣವನ್ನು ಕೊಡಬೇಕಾಗಿದೆ. ಆದರೆ ಅಷ್ಟೊಂದು ಹಣವನ್ನು ಒಂದೇ ವರ್ಷದಲ್ಲಿ ಕೊಡಬೇಕೆಂದರೆ ಕಷ್ಟವಿದೆ. ಆದರೆ ಈ ಕೆಲಸಕ್ಕೆ ಆದ್ಯತೆಯನ್ನು ಕೊಟ್ಟು ಪೂರ್ಣಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. 1 ವರ್ಷದಲ್ಲಿ ಇದು ಆಗಬೇಕೆಂದು ಷರತ್ತು ಹಾಕಿದರೆ ಅದು ಕಷ್ಟವಾಗುತ್ತದೆ. ಇನ್ನು ನಾಮಿನೇಷನ್ ವಿಚಾರದಲ್ಲಿ ಹೇಳುವುದಾದರೆ, ಯಾವುದೋ ಒಂದೇ ಜಾತಿಗೆ ಸೀಮಿತವಾಗುವುದಿಲ್ಲ, ಇದು ಎಲ್ಲಾ ಜಾತಿಗೂ ಅನ್ವಯಿಸುತ್ತದೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನಗೆ ತಾವು ಅವಕಾಶವನ್ನು ಕೊಡಲಿಲ್ಲ, ಈಗ ಕೊನೆಯಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ. ಬೆಂಗಳೂರು ನಂತರದ ಮಹಾ ನಗರವೆಂದರೆ ನಮ್ಮ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರ. ಅಲ್ಲಿ ಕಳೆದ ಅನೇಕ ವರ್ಷಗಳಿಂದ

ಕುಡಿಯುವ ನೀರಿನ ಸಮಸ್ಯೆ ಇದೆ. ಈ ಹಿಂದೆ ಇದೇ ಜನತಾ ದಳ ಸರ್ಕಾರ ಅಧಿಕಾರದಲ್ಲಿದ್ದಾಗ ಹುಬ್ಬಳ್ಳಿ, ಧಾರವಾಡ ಮಹಾನಗರದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು, ರಸ್ತೆಗಳ ವ್ಯವಸ್ಥೆ ಮಾಡಲು, ಒಳಚರಂಡಿ ವ್ಯವಸ್ಥೆ ಮಾಡಲು ವಿಶ್ವ ಬ್ಯಾಂಕ್ನಿಂದ 150 ಕೋಟಿ ರೂ.ಗಳನ್ನು ತರುತ್ತೇವೆಂದು ಹೇಳಿತ್ತು. ಆದರೆ ಇವತ್ತಿನವರೆಗೂ ಆ ಮಹಾ ನಗರದ ಈ ಯಾವ ಸಮಸ್ಯೆಗಳೂ ಕೂಡ ಪರಿಹಾರವಾಗಿಲ್ಲ, ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳು ಈ ನಗರದ ಸಮಸ್ಯೆಗಳ ಬಗ್ಗೆ ಹೆಚ್ಚಿನ ಒತ್ತನ್ನು ಕೊಡಬೇಕು. ಉತ್ತರ ಕರ್ನಾಟಕದಲ್ಲಿರುವ ಈ ಹುಬ್ಬಳ್ಳಿ ಧಾರವಾಡ ಮಹಾ ನಗರದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಹೇಳುವುದಾದರೆ, ಹಿಂದೆ ಜನತಾದಳ ಸರ್ಕಾರ ಅಧಿಕಾರದಲ್ಲದ್ದಾಗ ಧಾರವಾಡದಲ್ಲಿ ಒಂದು ಹೊಸ ಕೃಷಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಿದರು. ಅದರ ಬೆಳವಣಿಗೆ ಇವತ್ತು ಆಗಬೇಕಾಗಿದೆ. ಏಕೆಂದರೆ ಈ ದೇಶದ ರೈತ ಸಮುದಾಯಕ್ಕೆ ಅದರ ಕೊಡುಗೆ ಬಹಳ ಅಗತ್ಯವಿದೆ. ಇದಕ್ಕೆ ಪೂರಕವಾಗಿ ಎ.ಪಿ.ಎಂ.ಸಿ. ಆಕ್ಟ್ ಅಗತ್ಯವಾದ ತಿದ್ದುಪಡಿ ಮಾಡಿ ತನ್ಮೂಲಕ ಹಣಕಾಸಿನ ಅನುಕೂಲವನ್ನು ಮಾಡಿಕೊಡುತ್ತೇವೆಂದು ಕೆಲವು ತಿದ್ದುಪಡಿಗಳನ್ನು ಮಾಡಿದರು. ಆದರೆ ಅದರಿಂದ ಏನು ಹಣದ ಅನುಕೂಲ ಆ ವಿಶ್ವವಿದ್ಯಾನಿಲಯಕ್ಕೆ ಸಿಕ್ಕಬೇಕಾಗಿತ್ತೋ ಅದು ಸಿಕ್ಕಲಿಲ್ಲ, ಮಾನ್ಯ ಮುಖ್ಯಮಂತ್ರಿಗಳು ರೈತನ ಮಗ, ಅವರು ಕೃಷಿಕ ಕುಟುಂಬದಿಂದ ಬಂದಿರುವವರು, ಆದ್ದರಿಂದ ಅವರು ನನ್ನ ಈ ಪ್ರಶ್ನೆಗೆ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ .....

ಅಧ್ಯಕ್ಷರು : ನೀವು ಇದರ ಬಗ್ಗೆ ಭಾಷಣ ಮಾಡುವಂತಿಲ್ಲ, ಕೇವಲ ಕ್ಲಾರಿಫಿಕೇಷನ್ ಕೇಳುವುದಕ್ಕೇ ಇಷ್ಟೊಂದು ಸಮಯವನ್ನು ತೆಗೆದುಕೊಂಡರೆ ಹೇಗೆ? ನಾವು ಇನ್ನೂ 5 ವರ್ಷಕಾಲ ಇರುತ್ತೇವೆ. ರಾಜ್ಯಪಾಲರ ಭಾಷಣದಮೇಲಿನ ವಂದನಾ ನಿರ್ಣಯದ ಬಗ್ಗೆ ಮಾತನಾಡಲು ಅವಕಾಶ ಸಿಕ್ಕಲಿಲ್ಲವೆಂದು ಆ ಭಾಷಣವನ್ನೆಲ್ಲಾ ಇಲ್ಲಿ ಮಾಡುತ್ತೀರಾ?

ಶ್ರೀ ಚಂದ್ರಕಾಂತ ಜಿ. ಬೆಲ್ಲದ : ನನಗೆ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟಂತೆ ಮಾತನಾಡಲು ತಾವು ನನಗೆ ಅವಕಾಶವನ್ನು ಕೊಡಲಿಲ್ಲ, ಉತ್ತರ ಕರ್ನಾಟಕದಲ್ಲಿ ಒಂದು ರೈಲ್ವೆ ವಲಯ ಆಗಬೇಕೆಂದು ಬಹಳ ದಿನಗಳಿಂದ ಒಂದು ಬೇಡಿಕೆ ಇದೆ. ಆದ್ದರಿಂದ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದು ಕರ್ನಾಟಕದ ರೈಲ್ವೆ ವಲಯವನ್ನು ಹುಬ್ಬಳ್ಳಿಯಲ್ಲೇ ಮಾಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹಿಂದೆ ಸದರನ್ ರೈಲ್ವೆ ಆಫೀಸ್ ನಮ್ಮ ಧಾರವಾಡದಲ್ಲೇ ಇತ್ತು. ಈಗಿರತಕ್ಕ ಕರ್ನಾಟಕ ಕಾಲೇಜಿನ ಕಟ್ಟಡ ಏನಿದೆ ಇದು ಹಿಂದೆ ಇದ್ದಂತ ಬ್ರಿಟೀಷ್ರ ಕಾಲದಲ್ಲಿ ಇದ್ದಂಥ ರೈಲ್ವೇ ಆಫೀಸ್. ಅನಂತರ ಅದು ಸೌತ್ ಸೆಂಟ್ರಲ್ ರೈಲ್ವೇ ಕಛೇರಿ ಆಗಿದೆ. ಅಲ್ಲಿ ಈಗ 2 ಜಂಕ್ಷನ್ನಗಳಿವೆ. ಈ ದೃಷ್ಟಿಯಿಂದಲೂ ಕೂಡ ನಮ್ಮ ಧಾರವಾಡವು ಕರ್ನಾಟಕದ ರೈಲ್ವೆ ವಲಯವಾಗಬೇಕೆಂದು ಹೇಳಬಯಸುತ್ತೇನೆ, ಈಗಾಗಲೇ ಮಾನ್ಯ ಯಡಿಯೂರಪ್ಪನವರೂ ಹಾಗೂ ಇನ್ನು ಅನೇಕ ಮಾನ್ಯ ಸದಸ್ಯರು ಹೇಳಿರುವಂತೆ ರೈತರಿಗೆ ಕೊಟ್ಟಿರುವ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿ

ಹೇಳುತ್ತಿದ್ದೇನೆಂದರೆ ಅನೇಕ ಸಹಕಾರಿ ಬ್ಯಾಂಕ್ಗಳು ಹಣವಿಲ್ಲದೆ ನ್ಯಾಷನಲೈಸ್ ಬ್ಯಾಂಕ್ಗಳಿಗೆ ಸಾಲಕ್ಕೆ ಹೋಗಿವೆ...

ಅಧ್ಯಕ್ಷರು :ಬೆಲ್ಲದ್ರವರೇ, ದಯವಿಟ್ಟು ಕುಳಿತುಕೊಳ್ಳಿ, ಎಲ್ಲಾ ಪ್ರಶ್ನೆಗಳಿಗೂ ಸಮಂಜಸವಾದ ಉತ್ತರವನ್ನು ಸರ್ಕಾರ ಕೊಡುತ್ತದೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ಮದ್ಯಪಾನ ನಿಷೇಧದ ಬಗ್ಗೆ ಮಾನ್ಯ ಘೋರ್ಪಡೆಯವರು ಈಗಾಗಲೇ ಹೇಳಿದ್ದಾರೆ. ರೈತರ ಮಕ್ಕಳಾದ ಮಾನ್ಯ ಮುಖ್ಯ ಮಂತ್ರಿಯವರು ಈ ಪಾನನಿರೋಧ ಕಾನೂನನ್ನು ಜಾರಿಗೆತಂದು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ಮನಸ್ಸಿನಲ್ಲಿ ಏನೇನಿದೆ ಎಂಬುದು ನನಗೆ ಗೊತ್ತಿದೆ, ನಾನು ಹೇಳುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಚ್.ಡಿ.ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಬೆಲ್ಲದ್ ಅವರು ಮೂರು ವಿಷಯಗಳನ್ನು ಎತ್ತಿದ್ದಾರೆ. ಬಡ್ಡಿ ವಿಷಯದಲ್ಲಿ ಈಗಾಗಲೇ ಹೇಳಿದ್ದೇನೆ. ಕುಡಿಯುವ ನೀರಿನ ಬಗ್ಗೆ ಧಾರವಾಡ ಮತ್ತು ಹುಬ್ಬಳ್ಳಿ ಮಹಾನಗರದ ಬಗ್ಗೆ ಹಿಂದೆ ಸರ್ಕಾರ ಹೇಳಿತ್ತು ಎಂಬ ಮಾತನ್ನು ಹೇಳಿದ್ದಾರೆ. ಯಾರೇ ಹೇಳಿರಲಿ ಸಮಸ್ಯೆ ಬಗೆಹರಿಸುವುದಕ್ಕೆ ವಿಶ್ವಬ್ಯಾಂಕ್ ಮತ್ತು ಬೇರೆ ಬೇರೆ ಹಣಕಾಸು ಸಂಸ್ಥೆಗಳಿಂದ ಹಣ ದೊರಕಿಸಿಕೊಳ್ಳುವುದಕ್ಕೆ ವಿಶ್ವಬ್ಯಾಂಕ್ ಮತ್ತು ಬೇರೆಬೇರೆ ಹಣಕಾಸು ಸಂಸ್ಥೆಗಳಿಂದ ಹಣ ದೊರಕಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂಬ ಮಾತನ್ನು ಹೇಳಿ ಮತ್ತೊಂದು ವಿಷಯ ಅವರು ಹೇಳಿದಂಥದ್ದು ರೈಲ್ವೆ ವಲಯದ ಬಗ್ಗೆ ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ, ರೈಲ್ವೆ ಮಂತ್ರಿಗಳು ಈ ರಾಜ್ಯಕ್ಕೆ ಸಾಕಷ್ಟು ತಮ್ಮದೇ ಆದಂಥ ಸಹಾಯ ಮಾಡಿದ್ದಾರೆ. ರೈಲ್ವೆ ವಲಯವನ್ನು ಮಾಡಬೇಕೆಂಬುದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಅವರು ಅದರ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಅಷ್ಟೇ ಅಲ್ಲ ನಮ್ಮ ಹುಬ್ಬಳ್ಳಿ - ಕಾರವಾರ ರೈಲ್ವೆ ಲೈನ್, ಸೊಲ್ಲಾಪುರ - ಹುಬ್ಬಳ್ಳಿ ರೈಲ್ವೆ ಲೈನ್ ಇವುಗಳನ್ನು ಕೂಡ ತೆಗೆದುಕೊಳ್ಳಬೇಕೆಂದು ರೈಲ್ವೆ ಮಂತ್ರಿಗಳನ್ನು ನೋಡಿದಾಗ ಚರ್ಚೆಯಾಗಿದೆ. ನಮ್ಮ ಕಡೆಯಿಂದ ಒತ್ತಾಯ ಹೆಚ್ಚು ಬರಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ರಾಜ್ಯ ಸರ್ಕಾರ ತೀವ್ರ ಒತ್ತಾಯವನ್ನು ಮಾಡಿದೆ. ಅದರ ಬಗ್ಗೆ ಹೇಳಲಿಲ್ಲ, ಏಕೆಂದರೆ ಎಲ್ಲಾ ಹೇಳಲಿಕ್ಕೆ ಹೋದರೆ ಕಾಲಹೆಚ್ಚು ಬೇಕಾಗುತ್ತದೆ. ಒಂದು ಮಾತ್ರ ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ನಿನ್ನೆ ನನ್ನ ಸಹೋದ್ಯೋಗಿಗಳಾದ ಶ್ರೀಮಾನ್ ಜೆ.ಹೆಚ್.ಪಟೇಲರು ವಿದ್ಯುಚ್ಛಕ್ತಿ ಬಗ್ಗೆ ಮಾತನಾಡುವಾಗ ನಾಳೆ ಬೆಳಗ್ಗೆಯಿಂದ ರೈತರ ಪಂಪ್ಸೆಟ್ಗೆ ವಿದ್ಯುಚ್ಛಕ್ತಿ ದರ ಜಾಸ್ತಿ ಮಾಡುತ್ತೇವೆ ಎಂಬ ಭಾವನೆ ಬರತಕ್ಕ ರೀತಿಯಲ್ಲಿ ಅವರು ಹೇಳಿರುವುದು ಮಾಧ್ಯಮದಲ್ಲಿ ಬಂದಿದೆ. ಹೆಡ್ಲೈನ್ಸ್ ನೋಡಿದ ತಕ್ಷಣ ಹಾಗೆ ಅನ್ನಿಸುತ್ತದೆ. ಹಾಗೆ ಮಾಡುವುದಕ್ಕೆ ಹೋಗುವುದಿಲ್ಲ, ತಪ್ಪು ಕಲ್ಪನೆ ಬೇಕಾಗಿಲ್ಲ, ರೈತರಿಗೆ ನಿರಂತರವಾಗಿ ಹತ್ತು ಗಂಟೆಗಳ ಕಾಲ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದೇವೆ. ಆ ಭರವಸೆಯನ್ನು ಅನುಷ್ಠಾನಕ್ಕೆ ತರುತ್ತೇವೆ. ಅಷ್ಟೇ ಅಲ್ಲ, ಇವತ್ತು ಈ ರಾಜ್ಯದಲ್ಲಿ ರೈತರ ಮೇಲೆ ಹೆಚ್ಚು ಭಾರ ಹೊರಿಸಬಾರದು ಎಂಬುದೇ ನಮ್ಮ ಆಸೆ. ಆದರೆ ವಿದೇಶಿ ಬಂಡವಾಳ ಹೂಡಿದಾಗ ವಿದ್ಯುಚ್ಛಕ್ತಿ ಉತ್ಪಾದನೆಯಾಗಿ ಮಾರಾಟ ಮಾಡುವ ಪ್ರಶ್ನೆ ಬಂದಾಗ ಅದು ಬರುತ್ತದೆ. ವ್ಯವಸಾಯದ ಪಂಪ್ಸೆಟ್ ಮೇಲೆ ಹೆಚ್ಚು ಹೊರೆ ಹೊರಿಸುವುದಕ್ಕೆ ಹೋಗುವುದಿಲ್ಲ, ಓಲ್ಟೇಜ್ ಹೆಚ್ಚು ಮಾಡುವ ಬಗ್ಗೆ 41 ಪರ್ಸೆಂಟ್ ಇದೆಲ್ಲಾ ಹೇಳಿದ್ದಾರೆ. ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ, ಅದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ. ತಪ್ಪು ಕಲ್ಪನೆ ಬೇಕಾಗಿಲ್ಲ, ರೈತರು

ಬಳಕೆ ಮಾಡುವ ವಿದ್ಯುಚ್ಛಕ್ತಿ ಮೇಲೆ ಹೆಚ್ಚಿನ ದರ ಸರ್ಕಾರ ಹಾಕಬೇಕೆಂದು ನಿರ್ಣಯಮಾಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉಚಿತವಾಗಿ ಕೊಡುವುದನ್ನು ಮುಂದುವರೆಸುತ್ತೇವೆ ಎಂದು ಹೇಳಿದರೆ ಸಾಕು.

ಶ್ರೀ ಎಚ್.ಡಿ. ದೇವೇಗೌಡ : ಹತ್ತು ಗಂಟೆ ನಿರಂತರವಾಗಿ ಕೊಡುವ ಬಗ್ಗೆ ವಾಗ್ದಾನವನ್ನು ಮಾಡಿದ್ದೇವೆ. ಅದರ ಬಗ್ಗೆ ಸರ್ಕಾರ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಬಗ್ಗೆ ಏನು ಸ್ವಾಮಿ? ಉಚಿತ ವಿದ್ಯುಚ್ಛಕ್ತಿಯನ್ನು ಸಪ್ಲೈ ಮಾಡುತ್ತಾ ಇದ್ದೀರಿ. ಅದನ್ನು ಮುಂದುವರೆಸುವ ಬಗ್ಗೆ ಹೇಳಬೇಕು. ಇದು ಬಹಳ ಪ್ರಮುಖವಾದುದು. 10 ಎಚ್.ಪಿ.ವರೆಗೆ ಯಾವುದೇ ಕಾರಣಕ್ಕೆ ಮುಂದುವರೆಯುತ್ತದೆ ಎಂದು ಹೇಳಿ.

ಶ್ರೀ ಎಚ್.ಡಿ. ದೇವೇಗೌಡ : ಈಗ ಏನು ವ್ಯವಸ್ಥೆ ಇದೆಯೋ ಅದು ಮುಂದುವರೆಯುತ್ತದೆ. ಈಗ ಯಾವುದೇ ಭಾರ ರೈತರಿಗೆ ಹಾಕುವುದಕ್ಕೆ ಹೋಗುವುದಿಲ್ಲ. ಇದನ್ನು ಪುನರ್‌ವಿಮರ್ಶೆ ಮಾಡಬೇಕಾಗುತ್ತದೆ. ಎಷ್ಟು ಪರ್ಸೆಂಟ್ ವೇಸ್ಟೇಜ್ ಇದೆ. ಟ್ರಾನ್ಸ್‌ಮಿಷನ್‌ಲಾಸ್ ಎಷ್ಟಿದೆ ಹೀಗೆ ಎಲ್ಲಾ ಯೋಚನೆ ಮಾಡಬೇಕಾಗುತ್ತದೆ. ಸಮಗ್ರವಾಗಿ ಯೋಚನೆ ಮಾಡಿ ಆಮೇಲೆ ನಿರ್ಣಯಕ್ಕೆ ಬರುತ್ತೇವೆ. ಇನ್ನು ಒಂದೇ ಒಂದು ಮಾಮತು ಹೇಳುತ್ತೇನೆ ಸ್ವಾಮಿ. ಹಾಲಿನ ದರ ಹೆಚ್ಚು ಮಾಡುತ್ತಾರೆಂದು ಹೇಳಿ ಸುದ್ದಿ ಹಬ್ಬಿದೆ. ಅದು ಕೂಡ ಹೆಚ್ಚು ಮಾಡುವುದಕ್ಕೆ ಹೋಗುವುದಿಲ್ಲ ಎಂಬ ಮಾತನ್ನು ಅಷ್ಟೇ ಸೂಕ್ಷ್ಮವಾಗಿ ಹೇಳುತ್ತೇನೆ. ಅವೆಲ್ಲವನ್ನೂ ಆಮೂಲಾಗ್ರವಾಗಿ ಪರಿಶೀಲನೆ ಮಾಡಿ ಮಾಡಬೇಕಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸಿ ನಾನು ಕೊನೆಯ ವಿಚಾರಕ್ಕೆ ಬರುತ್ತೇನೆ.

ಅಧ್ಯಕ್ಷರು : ಖರ್ಗೆಯವರು ಈಗ ಭಾಷಣ ಮಾಡುತ್ತಾರೆ. ಕಾಂಗ್ರೆಸ್ಸಿನ ನಾಯಕರು. ಅವರಿಗೆ ಅವಕಾಶ ಸಿಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ತಾವು ಹೇಳಿದ್ದೀರಿ. ಈ ಮಾರ್ಚಿ ತಿಂಗಳೊಳಗಾಗಿ ಯಾವ ಯಾವ ವೇಕೆನ್ಸೀಸ್ ಇದೆ ಪೋಲೀಸ್ ಡಿಪಾರ್ಟ್‌ಮೆಂಟ್, ಎಜುಕೇಷನ್ ಡಿಪಾರ್ಟ್‌ಮೆಂಟ್ ಮತ್ತು ಹೆಲ್ತ್ ಡಿಪಾರ್ಟ್‌ಮೆಂಟ್ ಇದರಲ್ಲಿ ನಾವು ರೆಕ್ರೂಟ್‌ಮೆಂಟ್ ಮಾಡುತ್ತೇವೆ, ವೇಕೆನ್ಸಿ ಫಿಲಪ್ ಮಾಡುತ್ತೇವೆಂದು ಹೇಳಿದ್ದೀರಿ. ನನ್ನ ಮನವಿ ಏನೆಂದರೆ ಹಿಂದೆಯೂ ಕೂಡ ಅನೇಕ ಅಪಾಯಿಂಟ್‌ಮೆಂಟ್‌ಗಳು ಟೆಂಪೊರೆರಿಯಾಗಿ ಆಗಿವೆ. ಸ್ಟೈಫಂಡರಿ ಗ್ರಾಜುಯೇಟ್ಸ್ ಇರಬಹುದು ಅಥವಾ ಡೇಲಿ ವೇಜಸ್ ಮೇಲೆ ಇರಬಹುದು ಎಲ್ಲರನ್ನೂ ಕೂಡ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಸುಮಾರು 65000 ವೇಕೆನ್ಸಿಗಳನ್ನು ರೆಗ್ಯುಲರೈಸ್ ಮಾಡಿದರು. ಅದರಲ್ಲಿ ರೋಸ್ಟರ್ ಫಾಲೊ ಮಾಡಲಿಲ್ಲ, ಪದೇಪದೇ ಅದರ ಬಗ್ಗೆ ಮೊಯಿಲಿಯವರಿದ್ದಾಗ ಬಂಗಾರಪ್ಪನವರು ಇದ್ದಾಗ ಎಲ್ಲರಿಗೂ ಇದರ ಬಗ್ಗೆ ಸಾಕಷ್ಟು ಹೇಳಿದೆ. ಆದರೆ ಇದು ಸುಪ್ರೀಂ ಕೋರ್ಟ್ ಆದೇಶ ಇದ್ದ ಕಾರಣ ಮತ್ತು ಹಿಂದಿನ ಸರ್ಕಾರ ಅಡ್‌ಹಾಕ್ ಅಪಾಯಿಂಟ್‌ಮೆಂಟ್ ಮಾಡಿದ್ದಕ್ಕಾಗಿ ಸಿರಿಕಲ್ಚರ್ ಡಿಪಾರ್ಟ್‌ಮೆಂಟ್, ಪಿ.ಡಬ್ಲ್ಯೂ.ಡಿ...

ಶ್ರೀ ಎಚ್.ಡಿ. ದೇವೇಗೌಡ : 20-25 ವರ್ಷದಿಂದ ಬಂದಿರುವುದು ಅದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಎಲ್ಲಾ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಿ, ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್, ಲೋಕೋಪಯೋಗಿ ಇಲಾಖೆ ಹೀಗೆ ಐದಾರು ಡಿಪಾರ್ಟ್‌ಮೆಂಟ್‌ಗಳಲ್ಲಿ ಸುಮಾರು 50-55 ಸಾವಿರ ಅಪಾಯಿಂಟ್‌ಮೆಂಟ್ಸ್

ಆಗುತ್ತವೆ. ಎಲ್ಲಾ ಒಟ್ಟು ಸುಮಾರು 65 ಸಾವಿರ ಪೋಸ್ಟ್‌ಗಳು ರೆಗ್ಯುಲೆರೈಸ್ ಆಗುತ್ತವೆ. ಬೇರೆಯವರಿಗೆ ಒಂದು ಪೋಸ್ಟ್ ಕೂಡ ಉಳಿಯುವುದಿಲ್ಲ, ಅದರಲ್ಲಿ ಟೋಟಲ್ ಷೆಡ್ಯೂಲ್ಡ್‌ಟ್ರೈಬ್ಸ್‌ನವರಿಗೆ 3500 ಪೋಸ್ಟ್‌ಗಳು ಮಾತ್ರ ಉಳಿಯುತ್ತವೆ. ನಾವು ಅದರ ಬಗ್ಗೆ ಇನ್ಸಿಸ್ಟ್ ಮಾಡಿದಾಗ ಇಲ್ಲ, ಇದರ ಬಗ್ಗೆ ಸುಪ್ರೀಂಕೋರ್ಟ್‌ನ ಆದೇಶವಿದೆ ಮುಂದೆ ಯಾವುದೇ ರಿಕ್ರೂಟ್‌ಮೆಂಟ್‌ಮಾಡುವಾಗ ನಾವು ಬ್ಯಾಕ್‌ಲಾಗ್ ವೆಕೆನ್ಸೀಸ್ ಎಂದು ತೆಗೆದುಕೊಂಡು ಫಿಲಪ್ ಮಾಡುತ್ತೇವೆಂದು ಹೇಳಿದರು. ಅದಕ್ಕಾಗಿ, ಅದು ಪ್ರೊಸಿಡಿಂಗ್ಸ್‌ನಲ್ಲಿ ಕೂಡ ಇದೆ; ಕ್ಯಾಬಿನೆಟ್ ಡಿಸೀಷನ್ ಕೂಡ ಇದೆ. ಅದನ್ನು ತಾವು ನೋಡಬಹುದು. ಅದಕ್ಕಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೆ, ಈಗ ತಾವು ಏನು ರಿಕ್ರೂಟ್‌ಮೆಂಟ್ ಮಾಡುತ್ತೇವೆಂದು ಹೇಳುತ್ತಾ ಇದ್ದೀರಿ, ಅಥವಾ ವೆಕೆನ್ಸೀಸ್‌ನ್ನು ಫಿಲಪ್ ಮಾಡುತ್ತಿರೋ ಹೇಗೆ? ಅದರ ಬಗ್ಗೆ ತಮ್ಮ ನಿಲುವು ಏನಿದೆ? ಎರಡನೆಯದಾಗಿ ಮಾನ್ಯ ಗೃಹಮಂತ್ರಿಗಳಾದ ಸಿಂಧ್ಯಾರವರು ಗಲಾಟೆಯ ಬಗ್ಗೆ ನೇರವಾಗಿ ನಾವು ಕ್ರಮತೆಗೆದುಕೊಳ್ಳುತ್ತೇವೆಂದು ಹೇಳಿದರು. ಆದರೆ ತಮ್ಮ ಮುಖಾಂತರ ಆ ಮೆಸೇಜ್ ಹೋಗತಕ್ಕ ಅವಶ್ಯಕತೆಯಿದೆಯೆಂದು ಹೇಳಿ, ನಾನು ನಿನ್ನೆ ಹೇಳಿದ್ದೇನೆ. ಅದು ಏನೆಂದರೆ ಯಾರೇ ಈ ರೀತಿಯಾಗಿ ಗಲಾಟೆ ಗಲಭೆ ಮಾಡಿದರೆ ನೀವೇ ಮಾಡಿಸಿದಿರಿ ಈ ಸರ್ಕಾರ ಮಾಡಿಸಿದೆಯೆಂದು ನಾನು ಹೇಳುವುದಿಲ್ಲ, ಅನೇಕ ಸಾರಿ ಏನಾಗುತ್ತದೆಂದರೆ ಹುಮ್ಮಸ್ಸಿನಲ್ಲಿ, ಉತ್ಸಾಹದಲ್ಲಿ ಕೆಲವು ಸಪೋರ್ಟರ್ಸ್ ಮಾಡುತ್ತಿರಬಹುದು. ತಮ್ಮ ಕಡೆಯಿಂದ ಮೆಸೇಜ್ ಹೋದರೆ ಇಂತಹ ಗಲಭೆ ಗಲಾಟೆಗಳು ನಿಂತು ಹೋಗುತ್ತವೆ. ಇದರ ಬಗ್ಗೆ ತಾವು ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ರಿಕ್ರೂಟ್‌ಮೆಂಟ್‌ನ್ನು ಮಾರ್ಚಿ 31 ರೊಳಗೆ ನಾವು ಮಾಡುತ್ತೇವೆಂದು ನಾನು ಹೇಳಲಿಲ್ಲ, ತೊಡಕು ಏನಿದೆ ಎನ್ನುವುದನ್ನು ಮೊದಲೇ ಹೇಳಿದ್ದೇನೆ. 50 ಪರ್ಸೆಂಟ್ ರಿಸರ್ವೇಷನ್ ಬಗ್ಗೆ ಮತ್ತೆ ಜಾತಿಗಳನ್ನು ವರ್ಗೀಕರಣ ಮಾಡಬೇಕಾಗಿದೆ. ಬರೀ ವಿದ್ಯಾ ಇಲಾಖೆಯ ಪ್ರವೇಶದ ದೃಷ್ಟಿಯಿಂದ ಮಾತ್ರ ನಾವು ಮಾಡಿದ್ದೇವೆ. ಆದರೆ ಅಪಾಯಿಂಟ್‌ಮೆಂಟ್ ಮಾಡುವ ಬಗ್ಗೆ ಇನ್ನೂ ವರ್ಗೀಕರಣ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಇದಕ್ಕೆ ಸಂಬಂಧವಿಲ್ಲ, ಆದರೆ ಉಳಿದವರೆಲ್ಲಾ ರಿಕ್ರೂಟ್‌ಮೆಂಟ್ ಆಗಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ಅಪಾಯಿಂಟ್‌ಮೆಂಟ್ ಮಾಡುವಾಗ ನಾವು ಮೂರು ತಿಂಗಳೊಳಗೆ ಮಾಡುತ್ತೇವೆಂದು ಹೇಳಿದ್ದರೆ ಅದು ಬೇರೆ. 31ರೊಳಗೆ ಮಾಡುತ್ತೇವೆಂದು ಹೇಳಲಿಲ್ಲ, ಈ ವರ್ಷ ಮಾಡುತ್ತೇವೆಂದು ಹೇಳಿದ್ದೇನೆ. ಅದನ್ನು ಮಾಡತಕ್ಕ ಕಾಲದಲ್ಲಿ ಬ್ಯಾಕ್‌ಲಾಗ್ ಇದೆ, 65 ಸಾವಿರ ಹುದ್ದೆಗಳಲ್ಲಿ ಯಾವ್ಯಾವ ಹುದ್ದೆಗಳು ಖಾಲಿಯಿವೆ ಅದರಲ್ಲಿ ಜವಾನರ ಕೆಲಸ ಖಾಲಿಯಿವೆ, ಡಾಕ್ಟರುಗಳ ಕೆಲಸ ಖಾಲಿಯಿವ ಲೆಕ್ಚರರ್ಸ್ ಕೆಲಸ ಕೊಡುತ್ತೇವೆ. ಈಗ ಅದನ್ನೆಲ್ಲಾ ಹೇಳುವುದಕ್ಕಾಗುವುದಿಲ್ಲ, ಉದಾಹರಣೆಗೆ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಯಾವನೋ ಒಬ್ಬ ತರಕಾರಿ ಮಾರುವವನನ್ನು ತೆಗೆದುಕೊಂಡು ಬಂದು ಡಾಕ್ಟರ್ ಮತ್ತು ಲೆಕ್ಚರರ್ ಹುದ್ದೆಗೆ ನೇಮಕ ಮಾಡುವುದಕ್ಕೆ ಕಷ್ಟವಿದೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಪಾಲಿಸಿ ಡಿಸೀಷನ್ ತೆಗೆದುಕೊಳ್ಳುವುದಕ್ಕೂ ಇದಕ್ಕೂ ಸಂಬಂಧವಿಲ್ಲ, ಯಾವ್ಯಾವ ಕ್ಯಾಟಗರಿಯಲ್ಲಿ ಎಷ್ಟು ವೆಕೆನ್ಸಿಗಳು ಬರುತ್ತವೆ ಅಲ್ಲಿ ಬ್ಯಾಕ್‌ಲಾಗ್ ಫಿಲ್‌ಅಪ್ ಮಾಡುತ್ತೇವೆಂದು ಹೇಳಬೇಕು. That is nothing to do with your categories.

SRI H.D. DEVEGOWDA : I have an open mind on this issue. ಈ ನಾಲ್ಕನೇ ದರ್ಜೆ ಹುದ್ದೆಗಳ ಬಗ್ಗೆ ಹಾಗೂ ಅವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂಬುದು ನನಗೆ ಗೊತ್ತು. ಯಾವ್ಯಾವ ದರ್ಜೆಯ ಹುದ್ದೆಗಳಿವೆಯೆಂದು ಗೊತ್ತಿದೆ. ಆ ಇಲಾಖೆಗಳಲ್ಲಿ ತುಂಬುವಾಗ ಬ್ಯಾಕ್‌ಲಾಗ್ ಉಪಯೋಗಿಸುವ ವಿಷಯ ಬೇರೆ. ಕಾಲೇಜೀ ಲೆಕ್ಚರರ್ಸ್ ಇರಬಹುದು. ಡಾಕ್ಟರ್ ಇರಬಹುದು ಒಂದಕ್ಕೊಂದಕ್ಕೆ ಹೊಂದಾಣಿಕೆ ಮಾಡುವುದು ಕಷ್ಟವಿದೆ ಎಂದು ಅನ್ನಿಸುತ್ತದೆ. But I will have the open mind on this.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಾಮಿ ಕ್ಯಾಟಗರಿವೈಸ್ ರಿಸರ್ವೇಷನ್ ಇರುತ್ತದೆ. ಡಾಕ್ಟರುಗಳಲ್ಲಿ 20 ಪೋಸ್ಟ್ ಷೆಡ್ಯುಲ್‌ಡ ಕಾಸ್ಟ್‌ನವರಿಗೆ ಸಂಬಂಧಪಟ್ಟಿದು ಖಾಲಿ ಮಾಡುತ್ತೀರಾ; ಇಂಜಿನಿಯರ್ ಹುದ್ದೆಗಳನ್ನು ಭರ್ತಿ ಮಾಡುವಾಗ ಏನು ಮಾಡಿದ್ದೀರಿ ಅಂದರೆ ನೇರವಾಗಿ ಲೋಕಲ್ ಅಪಾಯಿಂಟ್‌ಮೆಂಟ್ ಮಾಡಿಕೊಂಡು ರೈಗ್ಯುಲರೈಸ್ ಮಾಡಿದ್ದೀರಿ. ಮುಂದೆ ಬರತಕ್ಕ ಪೋಸ್ಟನ್ನು 200-300-500 ಪೋಸ್ಟ್‌ಗಳನ್ನು ನೀವು ಫಿಲಪ್ ಮಾಡಿದ ಮೇಲೆ ಷೆಡ್ಯೂಲ್ಡ್‌ಕಾಸ್ಟ್‌ನವರಿಗೆ ಎಷ್ಟು ಕೊಡಬೇಕೆಂಬುದು ಗೊತ್ತಾಗುತ್ತದೆ. Category-wise details take from DPAR.

ಶ್ರೀ ಹೆಚ್.ಡಿ. ದೇವೇಗೌಡ : ನಾನು ತರಿಸುತ್ತೇನೆಂದು ಹೇಳಿದ್ದೇನೆ. 65 ಸಾವಿರ ವೆಕೆನ್ಸಿಯೊಳಗೆ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುವವರು, ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ತರಕಾರಿ ಮಾರಾಟ ಮಾಡುವವರು ಬೇರೆ ಲೋಕೋಪಯೋಗಿ ಇಲಾಖೆಯಲ್ಲಿ ಸೌದೆ ಹೊಡೆಯುವವನು ಇರಬಹುದು, ನನಗೆ ಗೊತ್ತಿದೆ. ನಾನು ಸ್ವಲ್ಪಮಟ್ಟಿಗೆ ಎಲ್ಲವನ್ನೂ ತಿಳಿದುಕೊಂಡಿದ್ದೇನೆ. ಆದರೆ ಡಿಪಿಎಆರ್‌ನಿಂದ 65 ಸಾವಿರ ಹುದ್ದೆಗಳಲ್ಲಿ ಯಾವ್ಯಾವ ಹುದ್ದೆಗಳು ಕನ್‌ಫರ್ಮ್ ಆಗಿವೆ ಅವರು ಯಾವ್ಯಾವ ಕ್ಯಾಟಗರಿಯಲ್ಲಿದ್ದಾರೆ ಅದನ್ನು ತರಿಸಿಕೊಂಡು ಅದರ ಮೇಲೆ ನಿರ್ಣಯಕ್ಕೆ ಬರಬೇಕಾಗುತ್ತದೆಯೇ ಹೊರತಾಗಿ ಸಭೆಯೊಳಗೆ ನಾನು ಒಂದು ಸರ್ಕಾರದ ಅಭಿಪ್ರಾಯವನ್ನು ವ್ಯಕ್ತ ಮಾಡುವಾಗ ಅದರ ಬಗ್ಗೆ ಮಾಹಿತಿಯನ್ನು ಇಟ್ಟುಕೊಂಡು ಮಾಡಬೇಕಾಗುತ್ತದೆ. ಇನ್ನೊಂದು ವಿಷಯ ಹೇಳುತ್ತೇನೆ, ನಿಮ್ಮ ಅಭಿಪ್ರಾಯ ನೀವು ಹೇಳಿದ್ದೀರಿ. ನನ್ನ ಅಭಿಪ್ರಾಯವನ್ನು ನಾನು ಹೇಳಬೇಕಾಗಿದೆ. ಈ ರಾಜ್ಯದಲ್ಲಿ ಯಾವನೇ ಒಬ್ಬ ಅಧಿಕಾರಿ ದುರ್ಬಲವರ್ಗದವರಿರಬಹುದು, ಷೆಡ್ಯುಲ್ಡ್‌ಕಾಸ್ಟ್, ಷೆಡ್ಯುಲ್‌ಟ್ರೈಬ್ಸ್ ವರ್ಗದವರು ಇರಬಹುದು ಅವರು ಯಾವಾಗಲೂ ಒಂದೇ ಮನಸ್ಸಿನಲ್ಲಿರಬೇಕಾಗುತ್ತದೆ. ಮೇಲ್ಜಾತಿಯವನು ಕೀಳು ಜಾತಿಯವನು ಎನ್ನುವ ಪ್ರಶ್ನೆಯನ್ನು ಬಿಟ್ಟು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕ ಕಾಲದಲ್ಲಿ ಆ ರೆಸ್ಪಾನ್ಸಿಬಿಲಿಟಿಯನ್ನು ಎಸ್‌ಪಿ ಮತ್ತು ಡಿಸಿಗಳ ಮೇಲೆ ಫಿಕ್ಸ ಮಾಡುತ್ತೇನೆ. ಇದರಲ್ಲಿ ಕರ್ತವ್ಯ ಲೋಪವಾದರೆ, ಯಾವ ಸಣ್ಣ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ, ಈ ಮಾತನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. Law and order maintenance is the responsibility of the Superintendent of Police. ನಾವು ಹಿಂದೆ ಇದ್ದಾಗ ತಪ್ಪು ಮಾಡಿದ್ದೇವೆ. ಇಲ್ಲವೆಂದು ನಾನು ಹೇಳುವುದಿಲ್ಲ, ನಾನು ಆಫೀಸರ್ಸ್ ಮೀಟಿಂಗ್‌ನಲ್ಲಿ ಹೇಳಿದ್ದೇನೆ. ಇನ್ನು ಮುಂದೆ ಕೆಳಗಿನವರ ಜವಾಬ್ದಾರಿಯನ್ನು ನಿಮ್ಮ ಮೇಲೆ ಹೊರಿಸುತ್ತೇನೆಂದು ಹೇಳಿದ್ದೇನೆ. ಆ ಜಿಲ್ಲೆಯಲ್ಲಿ ಏನಾದರೂ ಕಾನೂನು ಪರಿಪಾಲನೆಯಲ್ಲಿ ಅವನು ಸರಿಯಾಗಿ ನಿರ್ವಹಣೆ ಮಾಡದಿದ್ದರೆ ಅವನು ಜವಾಬ್ದಾರನಾಗುತ್ತಾನೆ. ಅವನನ್ನು ಶಿಕ್ಷೆಗೆ ಗುರಿ ಮಾಡುತ್ತೇವೆ; ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದಂತಹ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಬೇಕಾದದ್ದು ಅವರ ಕರ್ತವ್ಯ. ಇವತ್ತು ಕೋಆಪರೇಟಿವ್ ಬ್ಯಾಂಕುಗಳಲ್ಲಿ ಸಾಲ

ತೆಗೆದುಕೊಂಡರೆ ಬೇರೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಡೆದಂತಹ ಸಾಲಗಳ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನಾದರೂ ಮನ್ನಾ ಮಾಡಬೇಕಾಗಿತ್ತು. ಯಾರು ಪ್ರಾಮಾಣಿಕವಾಗಿ ಬಡ್ಡಿಯನ್ನು ಕಟ್ಟಿದ್ದಾರೆ ಅವರೇನು ಪಾಪ ಮಾಡಿದ್ದರು? ಸಾಲ ಮನ್ನಾ ಯೋಜನೆ ಜಾರಿಗೆ ಬಂದಮೇಲೆ ಯಾರು ಪ್ರಾಮಾಣಿಕವಾಗಿ ಬಡ್ಡಿ ಕಟ್ಟಿದ್ದಾರೆ ಅದನ್ನು ತುಂಬಿ ಕೊಡಬೇಕಾದದ್ದು ಸರ್ಕಾರದ ಕರ್ತವ್ಯ. ಇದೊಂದು ರೈತರ ವಿರೋಧಿ ನೀತಿಯಾಗುತ್ತದೆ. ಅತಿವೃಷ್ಟಿ ಮತ್ತು ನೆರೆಹಾವಳಿ ಬಗ್ಗೆ ಯಾವುದೇ ನೀತಿಯಿಲ್ಲ, ರೈತರ ಬಗ್ಗೆ ಯಾವುದೇ ಮಾತನ್ನು ಹೇಳಲಿಲ್ಲ, ನಿಮ್ಮ ರೈತರ ವಿರೋಧಿ ನೀತಿ ಏನಿದೆ ಮತ್ತು ನೀವು ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತಹ ನೀತಿ ನಿಯಮಗಳು ನಿಲುವುಗಳು ಅವುಗಳನ್ನು ಕಾರ್ಯ ರೂಪದಲ್ಲಿ ತರುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ನೀವು ನ್ಯಾಯವಾಗಿ ರೈತರ ಸಾಲವನ್ನು ಮನ್ನಾ ಮಾಡಬೇಕಾಗಿತ್ತು ಅದು ನಿಮ್ಮ ಕರ್ತವ್ಯವಾಗಿತ್ತು. ನೀವೇನು ಭರವಸೆಯನ್ನು ಜನರಿಗೆ ಕೊಟ್ಟು ಚುನಾವಣೆಯಲ್ಲಿ ಗೆದ್ದು ಬಂದಿರಿ, ಆ ಆಶ್ವಾಸನೆಗಳನ್ನು ಈಡೇರಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಈ ಸರ್ಕಾರದ ನೀತಿಯನ್ನು ನಾವು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸಭೆಯಿಂದ ಹೊರ ನಡೆದರು)

ಶ್ರೀ ಎಂ. ವರದೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ರೇಷ್ಮೆ ಕ್ಷೇತ್ರದಿಂದ ಬಂದಿರತಕ್ಕವರು. ಇವತ್ತು ರೇಷ್ಮೆ ಬೆಳೆಯತಕ್ಕವರಿಗೆ ಒಂದು ಕೆ.ಜಿ.ಗೆ 80-90 ರೂಪಾಯಿ ಬೆಲೆ ಸಿಗುತ್ತಿದೆ. ವಿದೇಶಿ ರೇಷ್ಮೆಯನ್ನು ಆಮದು ಮಾಡಿಕೊಂಡು ರೈತರಿಗೆ 200 ರಿಂದ 250 ರೂಪಾಯಿಗೆ ಒಂದು ಕೆ.ಜಿ. ಗೂಡು ಮಾರಾಟವಾಗುತ್ತಿದೆ. ಇದರ ಬಗ್ಗೆ ಏನು ಕ್ರಮವನ್ನು ಕೈಗೊಳ್ಳುತ್ತೀರಿ? ಹೊರದೇಶದಿಂದ ತರಿಸತಕ್ಕ ರೇಷ್ಮೆಗೆ ಏನಾದರೂ ನಿರ್ಬಂಧ ಹಾಕತಕ್ಕಂಥದ್ದನ್ನು ಮಾಡುತ್ತೀರಾ? ತಾವೂ ಸಹ ಅದೇ ಕ್ಷೇತ್ರದಿಂದ ಬಂದಿದ್ದೀರಿ. ಇಡೀ ಏಷ್ಯಾದಲ್ಲಿಯೇ ದೊಡ್ಡ ರೇಷ್ಮೆ ಮಾರ್ಕೆಟ್ ನಮ್ಮ ಕ್ಷೇತ್ರದಲ್ಲಿದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸವಿಸ್ತಾರವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹಲವಾರು ಕಡೆಗಳಲ್ಲಿ ಭೂಕಂಪ, ಮಹಾಪೂರ ಮತ್ತು ಹೆಚ್ಚು ಮಳೆಯಿಂದಾಗಿ ಅನೇಕ ನದಿಗಳ ಪಕ್ಕದಲ್ಲಿರತಕ್ಕ ಹಳ್ಳಿಗಳು ಮಹಾಪೂರದಿಂದ ನಾಶವಾಗಿ ಹೋಗುವ ಪರಿಸ್ಥಿತಿ ಬಂದಿದೆ. ಈ ಪರಿಸ್ಥಿತಿ ತಮ್ಮ ಗಮನಕ್ಕೆ ಬಂದಿದೆ. ತಾವು ಸ್ವತಃ ನೋಡಿದ್ದೀರಿ. ಆ ಹಳ್ಳಿಗಳನ್ನು ಸ್ಥಳಾಂತರ ಮಾಡಿಸಬೇಕು. ಅದಕ್ಕೆ ದುಡ್ಡು ಇಲ್ಲ, ಹಿಂದಿನ ಸರ್ಕಾರದವರು ವಿಶ್ವಬ್ಯಾಂಕ್ ಯೋಜನೆಗೆ ಕಳುಹಿಸಿದ್ದೇವೆಂದು ಹೇಳಿದರು. ಆ ಹಳ್ಳಿಗಳು ಮತ್ತೆ ಮಹಾಪೂರ ಬಂದರೆ ಮಳೆ ಬಂದರೆ ಬಹಳ ತೀವ್ರತರನಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಅಂತಹ ಒಂದು ಹೀನಾಯ ಪರಿಸ್ಥಿತಿಯಲ್ಲಿವೆ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ಅಲ್ಲಿದ್ದಂತಹ ಪರಿಸ್ಥಿತಿಯನ್ನು ಸ್ವತಃ ಕಣ್ಣಾರೆ ನೋಡಿದ್ದಾರೆ. ಸರ್ಕಾರದ ಗಮನವನ್ನು ಸೆಳೆದಿದ್ದಾರೆ ಏನೂ ಆಗಲಿಲ್ಲ, ಆ ಹಳ್ಳಿಗಳು ಸ್ಥಳಾಂತರವಾಗುವ ಬಗ್ಗೆ ದಯವಿಟ್ಟು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಒಂದು ವಿಷಯ ಚೈನಾದಿಂದ ಏನು ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ ಅದನ್ನು ರೈತರ ಹಿತದೃಷ್ಟಿಯಿಂದ ತಡೆಯಬೇಕೆಂದು ಈಗಾಗಲೇ ಪಾರ್ಲಿಮೆಂಟ್ ಸ್ಟ್ಯಾಂಡಿಂಗ್ ಕಮಿಟಿ ಇನ್ ಕಾಮರ್ಸ್‌ನಲ್ಲಿ ಚರ್ಚೆಯಾಗಿದೆ. ನಾನು ಆ ಸಮಿತಿಯ ಸದಸ್ಯನಾಗಿದ್ದೆ. ರಿಪೋರ್ಟ್ ಕೊಡುವುದಕ್ಕೆ

ಮುಂಚೆ ನಾನು ಸಮಿತಿಗೆ ರಾಜೀನಾಮೆಯನ್ನು ಕೊಟ್ಟಿದ್ದೇನೆ. ನಾನು ಮೊನ್ನೆ ರಾಜೀನಾಯನ್ನು ಕೊಡಬೇಕಾಯಿತು. ನಿಲುವಿನಲ್ಲಿ ಬದಲಾವಣೆಯಾಗಬಾರದೆಂದು ಪಾರ್ಲಿಮೆಂಟ್ ಕಮಿಟಿಯ ಛೇರ್ಮನ್ ಐ.ಕೆ. ಗುಜ್ರಾಲ್‌ರವರಿಗೆ ಒತ್ತಾಯ ಮಾಡುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಯಾವಗಲ್‌ರವರು ಹಳ್ಳಿಗಳನ್ನು ಸ್ಥಳಾಂತರ ಮಾಡಬೇಕೆಂದು ಹೇಳಿದ್ದಾರೆ. ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಒಂದು ಸಂಕಟ ಏನೆಂದರೆ ರಾಜಕೀಯ ಎಷ್ಟೇ ವ್ಯತ್ಯಾಸವಿದ್ದರೂ ಮಾನ್ಯ ನಂಜೇಗೌಡರು ಮತ್ತು ಡಾ॥ ಜೀವರಾಜ ಆಳ್ವರವರು ನಾವು ರೈತರಿಗೆ ಕೊಟ್ಟಿರುವ ಬೆನಿಫಿಟ್ ಬಗ್ಗೆ ಒಳ್ಳೆಯ ಮಾತನ್ನು ಹೇಳಲಿಲ್ಲ, ಅವರು ವಾಕ್‌ಔಟ್ ಮಾಡಿದರು. ಕೃಷ್ಣಾ ನದಿಯ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ನನಗೆ ಹೆಚ್ಚಿಗೆ ಕಳಕಳಿ ಇದೆ.

ಶ್ರೀ ವಾಟಾಳ್ ನಾಗರಾಜ್ : ಸಭಾತ್ಯಾಗ ಮಾಡದಿದ್ದ ನನಗೆ ನೀವು ಒಳ್ಳೆಯ ಮಾತು ಹೇಳಲಿಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್‌ನಾಗರಾಜ್‌ರವರೇ, ಯಾರಾದರೂ ಇರಲಿ ಇಲ್ಲದಿರಲಿ ನಾನು ನಿಮ್ಮ ಪರವಾಗಿ ಇದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ದುರ್ದೈವ ಅಂದರೆ ನಾನು ರಾಜಕೀಯ ಬಳಸುವುದಕ್ಕೆ ಹೋಗುವುದಿಲ್ಲ, ಪಾರ್ಲಿಮೆಂಟ್ ನಡವಳಿಕೆಯನ್ನು ತರಿಸಿ ನಿಮಗೆ ಕೊಡುತ್ತೇನೆ. ದಯಮಾಡಿ ನೀವು ಓದಬೇಕು. ಏಕೆಂದರೆ ರಾಜಕೀಯ ಸನ್ನಿವೇಶಗಳು ಬರುತ್ತವೆ, ನಿರ್ಣಯವನ್ನು ಮಾಡುತ್ತಾರೆ. ಪಾರ್ಲಿಮೆಂಟ್‌ನಲ್ಲಿ ಏನು ನಿರ್ಣಯ ತೆಗೆದುಕೊಂಡಿದ್ದಾರೆಂದು ಹೇಳುವಾಗ ಇದನ್ನು ರಾಜಕೀಯಕ್ಕೋಸ್ಕರ ಬಳಸುವುದು ಬೇಡ. ಏನಾಗುತ್ತದೆಂದರೆ ಹೇಳುವಾಗ ಇದನ್ನು ರಾಜಕೀಯಕ್ಕೋಸ್ಕರ ಬಳಸುವುದು ಬೇಡ. ಏನಾಗುತ್ತದೆಂದರೆ ಅತ್ಯಂತ ಸಂಕಟದಲ್ಲಿ 130ಕೋಟಿ ರೂಪಾಯಿಗಳನ್ನು ತುಂಬ ಬೇಕಾಗುತ್ತದೆ. ಅದರ ಜೊತೆಗೆ ನೀರಾವರಿಗೆ ಅಪಾಯ ಆಗದಹಾಗೆ ನೋಡಿಕೊಳ್ಳಬೇಕಾಗುತ್ತದೆ. ರಾಜಕೀಯ ಮಾಡುವುದಕ್ಕೋಸ್ಕರ ರಾಜಕೀಯ ಮಾಡುತ್ತಾರೆಂದರೆ ಅದರಿಂದ ರಾಜಕೀಯ ಲಾಭ ಸಿಗುವುದಿಲ್ಲ, ಕೇವಲ ತೋರಿಕೆಗೋಸ್ಕರ ರಾಜಕೀಯ ಮಾಡುತ್ತಾರೆಂದು ಅರ್ಥಮಾಡಿಕೊಳ್ಳಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಒಂದು ಹಂತದಲ್ಲಿ ಮಾನ್ಯ ಹೆಚ್.ಎನ್. ನಂಜೇಗೌಡರು ಮಾತನಾಡುತ್ತಾ ಮಾತನಾಡುವ ರಭಸದಲ್ಲಿ ರಾಷ್ಟ್ರಮಟ್ಟದಲ್ಲಿ ಲೇಡಿಂಗ್ ಪತ್ರಿಕೆಗಳ ಬಗ್ಗೆ ಮಾತನಾಡಿದರು. ಈಗ ಅವರೇ "ಸಾರಿ" ಹೇಳಿದ್ದಾರೆಂದು ಅದನ್ನು ಕಡತದಿಂದ ತೆಗೆಯಬೇಕು.

ಡಾ॥ ಜೀವರಾಜ ಆಳ್ವ : ಮುಖ್ಯಮಂತ್ರಿಗಳ ಭಾಷಣ ಮುಗಿಯಿತು; ಓಟಿಗೆ ಹಾಕಬೇಕು ಇದೆಲ್ಲಾ ಈಗ ಏಕೆ?

ಶ್ರೀ ಸಿದ್ಧರಾಮಯ್ಯ : ಎಲ್ಲಾ ಸದಸ್ಯರಿಗೆ ಅನ್ವಯವಾಗುವ ರೀತಿಯಲ್ಲಿ ಅರ್ಥ ಬರುತ್ತದೆ. ಅದು ಗುಡ್ ಟೇಸ್ಟ್ ಆಗುವುದಿಲ್ಲ, ಆದ್ದರಿಂದ ಅದನ್ನು ಕಡತದಿಂದ ದಯಮಾಡಿ ತೆಗೆಯಬೇಕು.

ಅಧ್ಯಕ್ಷರು : ನಾನು ಕಡತವನ್ನು ತರಿಸಿ ನೋಡುತ್ತೇನೆ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಮುಕ್ತಾಯವಾಯಿತು ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ:

"ಡಿಸೆಂಬರ್ 28, 1994 ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ".

ಪ್ರಸ್ತಾವವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಅಧ್ಯಕ್ಷರು :ವಂದನಾ ನಿರ್ಣಯದ ಪ್ರಸ್ತಾಪಕ್ಕೆ ಸಭೆಯ ಅನುಮತಿ ದೊರಕಿದೆ. ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿ ಕೊಡಲಾಗುವುದು.

ನಿಯಮ 69

ಬೆಂಗಳೂರು ನಗರ ಜನತೆ ಎದುರಿಸುತ್ತಿರುವ ತೀವ್ರ ಕುಡಿಯುವ ನೀರಿನ ಅಭಾವ ಪರಿಸ್ಥಿತಿಯ ಬಗ್ಗೆ

ಡಾ|| ಜೀವರಾಜ ಆಳ್ವ : ಮಾನ್ಯ ಅಧ್ಯಕ್ಷರೆ, ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ಅದರ ಬಗ್ಗೆ ಮುಖ್ಯಮಂತ್ರಿಗಳು ಸಭೆಯನ್ನು ಕರೆದಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ಡಾ|| ಜೀವರಾಜ ಆಳ್ವ, ಮಾನ್ಯ ನಂಜೇಗೌಡರು ಉಳಿದವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಎಲ್ಲೆಲ್ಲಿ ತಾತ್ಕಾಲಿಕವಾಗಿ ಪರಿಹಾರವನ್ನು ಕೊಟ್ಟು ಕುಡಿಯುವ ನೀರಿನ ವ್ಯವಸ್ಥೆ ಆಗಬೇಕೆಂದು ಹೇಳಿದ್ದಾರೆ ಮತ್ತು ಕೊಳಚೆಪ್ರದೇಶಗಳಲ್ಲಿ ಹೊಸದಾಗಿ ಲೈನುಗಳನ್ನು ಹಾಕಿಕೊಂಡಿದ್ದಾರೆ, ಅವುಗಳ ಬಗ್ಗೆ ನಾಳೆಯೇ ಪ್ರವಾಸ ಮಾಡಿ ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಎದ್ದು ನಿಂತಿದ್ದಾರೆ. ಎಲ್ಲಾ ಸದಸ್ಯರು ಎಲ್ಲಿಗೆ ಒಟ್ಟಿಗೆಹೋಗುತ್ತಿದ್ದಾರೆ?

ಅಧ್ಯಕ್ಷರು : ಮಾನ್ಯ ಸದಸ್ಯರುಗಳೆ, ಈ ಅಲ್ಪಕಾಲಿನ ಅಧಿವೇಶನದ ಸಭೆಯಲ್ಲಿ ತಾವು ಭಾಗವಹಿಸಿ ನನಗೆ ನೀಡಿರತಕ್ಕ ಸಹಕಾರಕ್ಕಾಗಿ ಹಾಗೂ ಸೌಹಾರ್ದಕ್ಕಾಗಿ ನಾನು ಅಭಾರಿಯಾಗಿದ್ದೇನೆ. ತಮಗೆಲ್ಲರಿಗೂ ಶುಭವಾಗಲೆಂದು ಹಾರೈಸಿ ಈ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತೇನೆ.

(ಸದನವು ರಾತ್ರಿ 8 ಗಂಟೆ 45 ನಿಮಿಷಗಳಿಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.